ಗಣೇಶ ಮಸಣಯ್ಯ

(ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನಾ ಸಂಪ್ರಬಂಧ)

-: ಸಂಶೋಧಕರು :-

ಶ್ರೀ ಬಿ. ಎಸ್. ಕಾಪಸೆ

ಕೆ.ಎಲ್.ಇ. ಸಂಸ್ಥೆಯ

ಮಂಗರೂಳೆ ಹಿರಿಯ ಮಹಾವಿದ್ಯಾಲಯ, ಅಕ್ಕಲಕೋಟ

ಜಿಲ್ಲಾ - ಸೊಲ್ಲಾಪುರ. ರಾಜ್ಯ - ಮಹಾರಾಷ್ಟ್ರ

ಮಾರ್ಗದರ್ಶಕರು

ಡಾ. ವ್ಹಿ. ಎಸ್. ಮಾಳಿ

ನಿರ್ದೇಶಕರು,

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,

ಹಾರೂಗೇರಿ, ಜಿ. ಬೆಳಗಾವಿ

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,

ಹಾರೂಗೇರಿ, ಜಿ. ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦೧೨

HAC

ಗಜೇಶ ಮಸಣಯ್ಯ

(ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಸಂಪ್ರಬಂಧ)

ಸಂಶೋಧಕರು

ಶ್ರೀ ಬಿ. ಎಸ್. ಕಾಪಸೆ

ಕೆ.ಎಲ್.ಇ. ಸಂಸ್ಥೆಯ
ಮಂಗರೂಳೆ ಕಿರಿಯ ಮಹಾವಿದ್ಯಾಲಯ, ಅಕ್ಕಲಕೋಟ.
ಜಿಲ್ಲಾ - ಸೊಲ್ಲಾಪುರ. ರಾಜ್ಯ - ಮಹಾರಾಷ್ಟ್ರ

ಮಾರ್ಗದರ್ಶಕರು

ಡಾ. ವ್ಹಿ. ಎಸ್. ಮಾಳಿ

ನಿರ್ದೇಶಕರು,
ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,,
ಹಾರೂಗೇರಿ. ಜಿ. ಬೆಳಗಾವಿ

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,

ಹಾರೂಗೇರಿ ಜಿ. ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೨

ಪ್ರಮಾಣ ಪತ್ರ

ಗಣೇಶ ಮಹಾಕಾವ್ಯ ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು **ಡಾ. ವ್ಹಿ. ಎಸ್. ಮಾಳಿ** ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. **ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ನಾನು ಪ್ರಕಟಿಸಿರುವುದಿಲ್ಲವೆಂದೂ ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೦೮-೦೬-೨೦೧೨

ಶ್ರೀ ಬಿ. ಎಸ್. ಕಾಪಸೆ
ಸಂಶೋಧನ ವಿದ್ಯಾರ್ಥಿ
ಶ್ರೀ ಬಿ.ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ

ದೃಢೀಕರಣ ಪತ್ರ

ಶ್ರೀ ಬಿ. ಎಸ್. ಕಾಪಸೆ ಇವರು ಗಣೇಶ ಮಸಣಯ್ಯ ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಇವರು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಿಸಿಲ್ಲವೆಂದೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೦೮-೦೬-೨೦೧೨

ಡಾ. ವ್ಹಿ. ಎಸ್. ಮಾಳಿ
ಮಾರ್ಗದರ್ಶಕರು,
ಶ್ರೀ ಬಿ. ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ

• ಅರಿಕೆ •

ನಾನು ವೃತ್ತಿಯಿಂದ ಕನ್ನಡ ಉಪನ್ಯಾಸಕ, ಪ್ರವೃತ್ತಿಯಿಂದ ಸಾಹಿತಿ. **ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ, ಬೆಳಗಾವಿ. ಇದರ ಅಂಗ ಸಂಸ್ಥೆಯಾದ ಮಂಗರೂಳೆ ಕಿರಿಯ ಮಹಾವಿದ್ಯಾಲಯ, ಅಕ್ಕಲಕೋಟೆ**ಯಲ್ಲಿ ಕಳೆದ ಹದಿನೈದು ವರ್ಷಗಳಿಂದ ಕನ್ನಡ ಉಪನ್ಯಾಸಕನೆಂದು ಸೇವೆ ಸಲ್ಲಿಸುತ್ತಿದ್ದೇನೆ. ಅಕ್ಕಲಕೋಟೆಯ ಪರಿಸರದಲ್ಲಿದ್ದುದರಿಂದ ಗಜೇಶ ಮಸಣಯ್ಯನವರ ಬಗ್ಗೆ ಸಹಜ ಕುತೂಹಲ ಮೂಡಿ ಆಸಕ್ತಿ ಕೆರಳಿತು.

ಅದಕ್ಕೆ ಸ್ಫೂರ್ತಿ ಮತ್ತು ಮಾರ್ಗದರ್ಶನ ನೀಡಿದ ಡಾ. ವ್ಹಿ. ಎಸ್. ಮಾಳಿಯವರಿಗೆ ನಾನು ಚಿರಋಣಿ. ಉನ್ನತ ವ್ಯಾಸಂಗಕ್ಕೆ ಅನುಮತಿ ನೀಡಿದ ಕೆ.ಎಲ್.ಇ. ಸಂಸ್ಥೆಯ ಎಲ್ಲ ಪದಾಧಿಕಾರಿಗಳಿಗೆ ನಾನು ತುಂಬ ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಅದೇ ರೀತಿ ಪ್ರಾಚಾರ್ಯರಾದ ಶ್ರೀ. ಎಂ. ಡಿ. ಆಮಣಗಿ ಮತ್ತು ಸಿಬ್ಬಂದಿಯವರು ನೀಡಿದ ಸಹಾಯ – ಸಹಕಾರಗಳಗೆ ಕೃತಜ್ಞತೆ ಸಲ್ಲಿಸುತ್ತೇನೆ. ಗ್ರಂಥಪಾಲಕರಾದ ಸೌ. ಎಸ್. ಬಿ. ಬೋರಾಮಣಿಯವರಿಗೂ ನಾನು ಋಣಿ. ಸ್ನೇಹಿತರಾದ ಶ್ರೀ. ಆರ್. ಎಸ್. ಪಾಟೀಲ, ಶ್ರೀ. ಎಸ್. ಬಿ. ಕಲಶೆಟ್ಟಿ ಹಾಗೂ ಶ್ರೀ. ಡಿ. ಜಿ. ಕವಟಗಿಯವರು ನೀಡಿದ ಸಹಾಯ – ಸಹಕಾರಗಳಗೆ ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಕುಟುಂಬದ ಸದಸ್ಯರನ್ನು ನಾನು ನೆನೆಯದೆ ಇರಲಾರೆ.

ವೃಷಭೇಂದ್ರ ಕಾಲೇಜಿನ ಸಿಬ್ಬಂದಿ ವರ್ಗದವರಿಗೆ ವಂದನೆಗಳು. ಸಂಶೋಧನಾ ಕೇಂದ್ರದ ರೂವಾರಿಯಾದ ಶ್ರೀ ಬಿ. ಆರ್. ದರೂರ ಅವರನ್ನು ಸದಾಕಾಲವು ಸ್ಮರಿಸುವೆನು. ಅದರಂತೆ ಪ್ರಬಂಧವನ್ನು ಅಚ್ಚುಕಟ್ಟಾಗಿ ಡಿ.ಟಿ.ಪಿ. ಮಾಡಿದ "ಶ್ರೀ ಧಾನಮ್ಮ ದೇವಿ ಕಂಪ್ಯೂಟರ್ಸ್"ನ ಮುರಗೇಶ ಕೌಲಾಪುರ ಅವರಿಗೆ ವಂದನೆಗಳು.

ದಿ : ೦೮-೦೭-೨೦೧೨

ಶ್ರೀ ಬಿ. ಎಸ್. ಕಾಪಸೆ
ಕೆ.ಎಲ್.ಇ. ಸಂಸ್ಥೆಯ
ಮಂಗರೂಳೆ ಕಿರಿಯ ಮಹಾವಿದ್ಯಾಲಯ, ಅಕ್ಕಲಕೋಟ.
ಜಿಲ್ಲಾ - ಸೊಲ್ಲಾಪುರ. ರಾಜ್ಯ - ಮಹಾರಾಷ್ಟ್ರ

• ಪರಿವಿಡಿ •

ಅಧ್ಯಾಯ - ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವೈಧಾನಿಕತೆ

ಅಧ್ಯಾಯ - ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವೈಧಾನಿಕತೆ

ಭೂಮಿಯ ಮೇಲಿನ ಬದುಕನ್ನು ಸುಂದರವಾಗಿ ಸಮೃದ್ಧವಾಗಿ, ತೃಪ್ತಿಯಾಗಿ ನಡೆಸುವುದಕ್ಕೆ ಸರಳವಾದ ಮಾರ್ಗವನ್ನು ಹಾಕಿಕೊಟ್ಟವರು ಶಿವಶರಣರು. ನುಡಿದಂತೆ ನಡೆದು, ನಡೆದಂತೆ ನುಡಿದು ಮನುಷ್ಯನ ಜೀವನದಲ್ಲಿ ಹೇಗೆ ಇರಬೇಕು? ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟರು. ಸಾವಿರಾರು ಶರಣರು ಈ ಮಾರ್ಗದಲ್ಲಿ ನಡೆದು ಮರಣವನ್ನು ಗೆದ್ದರು. ನಮ್ಮೆಲ್ಲರ ಮನದಲ್ಲಿ ನೆಲೆಯಾಗಿ ನಿಂತರು. ಮುಂದಿನ ಮಾನವ ಕುಲಕ್ಕೆ ದಾರಿದೀಪವಾದರು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ೧೨ ನೇ ಶತಮಾನ ಒಂದು ಅವಿಸ್ಮರಣೀಯ ಯುಗವಾಗಿದೆ. ಒಂದು ಮಹತ್ವಪೂರ್ಣ ಘಟ್ಟವಾಗಿದೆ. ಅಂದಿನ ಕಾಲದಲ್ಲಿ ಒಂದೇ ತತ್ವ, ಒಂದೇ ಸಿದ್ದಾಂತ, ಒಂದೇ ಜೀವನ ವಿಧಾನ, ಒಂದೇ ರೀತಿಯ ಚಿಂತನೆ ಹೀಗೆ ಸಮಾಜದ ಎಲ್ಲ ರಂಗಗಳ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಬದಲಾಯಿಸಲು ಒಂದೆಡೆ ಸೇರಿದರು ಬಸವಾದಿ ಶರಣರು. ಉಳಿದ ಧರ್ಮಗಳಲ್ಲಿದ್ದಂತೆ ವೀರಶೈವ ಧರ್ಮದಲ್ಲಿಯು ಹಲವಾರು ಅರ್ಥವಿಲ್ಲದ ಆಚರಣೆಗಳು, ಮೂಢನಂಬಿಕೆಗಳು ಇದ್ದವು. ಆಗ ಬಸವಣ್ಣನವರ ನೇತೃತ್ವದಲ್ಲಿ ಎಲ್ಲ ಶರಣರು ಒಂದುಗೂಡಿ ನಡೆಸಿದ ಚಟುವಟಿಕೆಗಳಿಂದ ನಶಿಸಿ ಹೋಗಲಿದ್ದ ವೀರಶೈವ ಧರ್ಮ ಹೊಸದಾಗಿ ಉಜ್ವಲ ಪ್ರಕಾಶದಿಂದಾಗಿ ಕಂಗೊಳಿಸುವಂತಾಯಿತು. ಧರ್ಮದ ಪ್ರತಿಯೊಂದು ಆಚರಣೆಗಳನ್ನು ಶರಣರು ವಿಚಾರದ ಒರೆಗಲ್ಲಿನ ಮೇಲೆ ಉಜ್ಜಿ ನೋಡಿದರು. ಭಯವೆಂಬ ಮೂಲವಾಗಿದ್ದ ಧರ್ಮದ ತೊಡಕನ್ನು ಬಿಚ್ಚಿ "ದಯವೇ ಧರ್ಮದ ಮೂಲವಯ್ಯ" ಎಂಬ ಮಾತನ್ನು ತಮ್ಮ ಸುಲಭವಾದ ವಚನಗಳಿಂದ ಸಾಮಾನ್ಯರಿಗೆ ತಿಳಿಯುವಂತೆ ಸುಲಭವಾಗಿ ಹೇಳಿದರು. ಶರಣರು ಧರ್ಮವನ್ನು ನಿರಾಕರಿಸದೇ ಧರ್ಮಕ್ಕೆ ಅಂಟಿದ ಕೊಳೆ ಹಾಗೂ ಅಂತಹ ಕೊಳೆ ಅಂಟಿಕೊಳ್ಳಲು ಕಾರಣರಾದವರನ್ನು ವಿರೋಧಿಸಿದರು. ಅಲ್ಲದೇ ಜನಸಾಮಾನ್ಯರ ಶೋಷಣೆಗೆ ಮೂಲರಾದ ಬಂಡವಾಳದಾರ ಹಾಗೂ ಪ್ರಭುಗಳನ್ನು ವಿರೋಧಿಸಿದರು. ಸಮಾಜದ ಇಂತಹ ಎಲ್ಲ ಮೂಲಗಳನ್ನು, ಮುಖಗಳನ್ನು ತಿದ್ದಲು ಅವರು ಹಿಡಿದ ಶಸ್ತ್ರ ಒಂದೇ ಅದುವೇ 'ವಚನ ಸಾಹಿತ್ಯ'.

ಬಸವಣ್ಣನವರ ಉದಾತ್ತ ತತ್ವಗಳನ್ನು ವಿಚಾರಗಳನ್ನು ಕೇಳಿ ಅವನೊಂದಿಗೆ ಈ ಸಮಾಜೋಧಾರ್ಮಿಕ ಚಳುವಳಿಯಲ್ಲಿ ಪಾಲ್ಗೊಳ್ಳಲು ನಾಡಿನ ಮೂಲೆ-ಮೂಲೆಗಳಿಂದ ಶರಣ-ಶರಣೆಯರು ಕಲ್ಯಾಣಕ್ಕೆ ಬಂದರು. ಅಲ್ಲಮ ಪ್ರಭು, ಅಕ್ಕಮಹಾದೇವಿ, ಚನ್ನಬಸವಣ್ಣ ಮತ್ತು ಸಿದ್ಧರಾಮರಷ್ಟೆ

ಅಲ್ಲ ಅಂಬಿಗರ ಚೌಡಯ್ಯ, ಉರಿಲಿಂಗ ಪೆದ್ದಿ, ಕಾಳವ್ವೆ, ಗಜೇಶ ಮಸಣಯ್ಯ, ಹಡಪದ ಅಪ್ಪಣ್ಣ, ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ ಹೀಗೆ ಮುಂತಾದ ಕಾಯಕ ಜೀವಿಗಳೆಲ್ಲ ಒಂದೆಡೆ ಕೂಡಿದುದರಿಂದ ಬಸವಣ್ಣನವರ ಚಳುವಳಿಗೆ ಬಲ ಬಂದಿತು. ಅಗಸನಿಂದ ಹಿಡಿದು ಅರಸನವರೆಗೆ ಅಂತ್ಯಜನಿಂದ ಹಿಡಿದು ವಿಪ್ರನವರೆಗೆ ಎಲ್ಲರೂ ಈ ಕ್ರಾಂತಿಯ ಪರಿಣಾಮಕ್ಕೆ ಒಳಗಾದವರು. ಈ ಚಳುವಳಿಯಲ್ಲಿ ತಮಗೆ ಸ್ವಾತಂತ್ರ್ಯವೇ ಇಲ್ಲವೆಂದು ಘೋಷಿತರಾದ ಮಹಿಳೆಯರು ಬಹುಸಂಖ್ಯೆಯಲ್ಲಿ ಭಾಗವಹಿಸಿರುವುದು ಕಂಡು ಬರುವದು. ಇಂದು ಚಳುವಳಿಗೆ ಪೂರ್ಣತ್ವವನ್ನು ತಂದುಕೊಟ್ಟಿತು. ಹೀಗೆ ಚಳುವಳಿಯಲ್ಲಿ ಆಗಮಿಸಿದ ಪ್ರತಿಯೊಬ್ಬರಲ್ಲಿಯೂ ಶರಣರು ಮೂಢನಂಬಿಕೆ, ವಿಷಮತೆಗಳನ್ನು ತೊಳೆದು ಆತ್ಮಶಕ್ತಿಯನ್ನು ತುಂಬಿದರು. "ಶರಣರು ರೂಪಿಸುವ ಧರ್ಮವು ಶೋಷಣೆಯನ್ನು ಸಮೂಲವಾಗಿ ಕಿತ್ತೆಸೆದು ಸಕಲ ಜೀವಾತ್ಮರಿಗೆ ಹಿತವನ್ನುಂಟು ಮಾಡುವ ಸಾಧನೆಯನ್ನು ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡರು"[೧].

ಅಂದಿನ ಸಮಾಜದ ಅವನತಿಗೆ ಕುಲಗಳಲ್ಲಿರುವ ಪರಸ್ಪರ ಸಂಘರ್ಷವೇ ಕಾರಣವಾಗಿತ್ತು. ಇದನ್ನು ಕಂಡು ಹಿಡಿದ ಶರಣರು ಸಂಘರ್ಷಕ್ಕೆ ಕಾರಣವಾದ ಕುಲದ ಮೂಲ ಬೇರನ್ನೇ ಕಿತ್ತುಹಾಕಿದರು. "ಕೊಲ್ಲುವವನೇ ಮಾದಿಗ, ಹೊಲಸು ತಿನ್ನುವವನೇ ಹೊಲೆಯ" ಎಂದು ಹೇಳಿದರು. ಸಕಲ ಜೀವಾತ್ಮರಿಗೆ ಒಳ್ಳೆಯದನ್ನು ಬಯಸುವ ಮನುಷ್ಯ ಯಾವ ಕುಲದವನಾದರೇನು, ಆತನೇ ಕುಲಜ ಎಂದು ಸ್ಪಷ್ಟವಾಗಿ ತಿಳಿಸಿ ಹೇಳಿದರು. ಉತ್ತಮ ಸಾಧನೆ, ಕಾರ್ಯಗಳಿಂದ ಅಂತ್ಯಜನೂ ಕುಲಜನಾಗಬಲ್ಲ ಎಂದು ಹೇಳಿ ಎಲ್ಲರಲ್ಲಿಯೂ ಆತ್ಮವಿಶ್ವಾಸ ಬೆಳೆಸಿದರು. ಯಾವ ಕಾಯಕವಾದರೇನು, ಯಾವುದು ಹೀನವಲ್ಲ ಎಲ್ಲ ಕಾಯಕಗಳು ಒಂದೇ ಸಮಾನ ಹಾಗೂ ಪವಿತ್ರವಾದವುಗಳು ಎಂದು ಸಾರಿ ಹೇಳಿದರು.

೧೨ ನೇ ಶತಮಾನದಲ್ಲಿ ವಿದ್ಯಾರ್ಜನೆ ಮಾಡುವುದು ಕೇವಲ ಉಚ್ಚವರ್ಣೀಯರ ಗುತ್ತಿಗೆಯ ಮಾತಾಗಿತ್ತು. ಸಂಸ್ಕೃತವಂತೂ ದೂರವಿರಲಿ, ಕನ್ನಡದ ಕವಿಗಳೂ ಸಹಿತ ರಾಜಮಹಾರಾಜರಿಗೆ ತಮ್ಮನ್ನು ತಾವು ಒಪ್ಪಿಸಿಕೊಂಡಿದ್ದರು. ಇಂತಹ ಕಾಲದಲ್ಲಿ ಶರಣರು ಸಾಮಾನ್ಯ ಜನರ ಆಡುನುಡಿಯಾದ ಕನ್ನಡವನ್ನೇ ವಚನ ಸಾಹಿತ್ಯದ ಭಾಷೆಯನ್ನಾಗಿ ಬಳಸಿಕೊಂಡರು. ದೇವವಾಣಿಯೆಂದು ಕರೆಯಿಸಿಕೊಳ್ಳುತ್ತಿದ್ದ ಸಂಸ್ಕೃತವನ್ನು ಶರಣರು ಮೆಟ್ಟಿನಿಂತರು. ಜನವಾಣಿಯಾದ ಕನ್ನಡವನ್ನೇ ದೇವವಾಣಿಯ ಮಟ್ಟಕ್ಕೆ ಏರಿಸಿದರು. ವಚನಗಳಲ್ಲಿರುವ ಮುಖ್ಯ ವಿಷಯ ಜನಸಾಮಾನ್ಯರಲ್ಲಿರುವ ಲೌಕಿಕ ಸಮಸ್ಯೆಗಳೆ ಆಗಿರುವುದರಿಂದ ಅವು ಸಹಜವಾಗಿಯೇ ಜನಸಮುದಾಯದಿಂದ ಆಕರ್ಷಿಸಲ್ಪಟ್ಟವು. ವಿಶ್ವದ ಸಾಹಿತ್ಯದಲ್ಲಿ ಜನವಾಣಿಯು ೧೨ನೇ ಶತಮಾನದಲ್ಲಿ ಪ್ರಪ್ರಥಮವಾಗಿ ಬಳಕೆಯಾಯಿತು. ಶರಣರು ತಮ್ಮ ಈ ವಚನಗಳನ್ನು 'ವಚನ' ಎಂಬ ಅಸ್ತ್ರದಿಂದ ಮೇಲಿನವರಿಂದಾಗುವ ಶೋಷಣೆ ಹಾಗೂ ಕೆಳಗಿನವರಲ್ಲಿದ್ದ ಅರ್ಥವಿಲ್ಲದ ಆಚರಣೆಗಳನ್ನು ಇಲ್ಲವಾಗಿಸಿದರು.

---

೧. ವಚನಕಾರರ ಕಾವ್ಯಮೀಮಾಂಸೆ – ಹಿರೇಮಠ ಎಮ್. ಎಸ್. : ಅಶ್ವಿನಿ ಪ್ರಕಾಶನ ಗುಲ್ಬರ್ಗಾ. – ೧೯೯೯. ಪು.ಸಂ : ೩

"ಜಗತ್ತಿನ ಕಲ್ಯಾಣ ಸಾಧಿಸಿದ ಮಾನವ ಮಹಾದೇವನಾಗಿ ಮಹಾನುಭಾವಿ ಬಸವಣ್ಣನವರು ಸಮಕಾಲೀನರಾಗಿ ತೊಳಗಿ ಬೆಳಗಿದವರು. ಅಸಂಖ್ಯಾತ ಶ್ರೇಷ್ಠ ಶಿವಶರಣ–ಶಿವಶರಣೆಯರು. ಜಗತ್ತಿನ ಇತಿಹಾಸದಲ್ಲಿಯೇ ಇಷ್ಟೊಂದು ಸಂಖ್ಯೆಯಲ್ಲಿ ಏಕಕಾಲಕ್ಕೆ ವಚನ ರಚನೆ ಮಾಡಿದ ಉದಾಹರಣೆ ಇನ್ನೊಂದಿಲ್ಲ. ಇತ್ತೀಚಿನ ಸಂಶೋಧನೆಯಿಂದ ೩೫೦ ಶಿವಶರಣ–ಶಿವಶರಣೆಯರ ಹೆಸರುಗಳನ್ನು ಗುರುತಿಸಲು ಸಾಧ್ಯವಾಗಿದೆ"[೧]. ಇನ್ನೂ ಹೆಚ್ಚಿನ ಸಂಶೋಧನೆಯಾದಂತೆ ಇನ್ನೂ ಬೆಳೆಯಲು ಬೇಕಾದಷ್ಟು ಅವಕಾಶವಿದೆ. ಅನೇಕರು ಇನ್ನೂ ಅಜ್ಞಾತ ಸ್ಥಿತಿಯಲ್ಲಿಯೇ ಉಳಿದಿದ್ದಾರೆ. ಕಾಲಗರ್ಭದಲ್ಲಿ ಅಡಗಿ ಹೋಗಿದ್ದಾರೆ. ಕನ್ನಡಿಗರ ಉದ್ಧಾರಕ್ಕಾಗಿ ಹೋರಾಡಿದ ಮಹಾತ್ಮರ ಜೀವನ ಚರಿತ್ರೆಗಳು ಬೆಳಕಿಗೆ ಬಂದಷ್ಟು ಒಳ್ಳೆಯದು. ಅನುಭವ ಮಂಟಪದ ಸಕ್ರಿಯ ಸದಸ್ಯರಾಗಿ, ಮಹಾನುಭಾವಿಗಳಾಗಿ, ತತ್ವವೇತ್ತರಾಗಿ, ಲಿಂಗನಿಷ್ಠರಾಗಿ ಬೆಳಗಿದವರಲ್ಲಿ ಗಜೇಶ ಮಸಣಯ್ಯನವರು ಒಬ್ಬರು. ಕ್ರೀಯಾಶೀಲರು, ಶೀಲಸಂಪನ್ನರು, ಕಾಯಕದ ಕಲಿಗಳು, ಅನುಭವ ಮಂಟಪದ ವಿಶ್ವವಿಖ್ಯಾತಿ ಪಡೆಯಲು ಕಾರಣಿಕರ್ತರು ಆಗಿರುವವರು ಚರಿತ್ರೆಗಳು ಜನಸಾಮಾನ್ಯರ ಹೃದಯ ಮಂದಿರದಲ್ಲಿ ಶಾಶ್ವತಸ್ಥಾನ ಪಡೆಯಲು ಅರ್ಹವಾಗಿದೆ.

"ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು
ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿ ಮುಟ್ಟಿಸಲು
ತೊಳಗಿ ಬೆಳಗುತ್ತಿರ್ದುದಯ್ಯ ಶಿವನ ಪ್ರತಾಪ
ಆ ಬೆಳಗಿನೊಳಗೆ ಒಪ್ಪುತ್ತಿರ್ದರಯ್ಯ ಅಸಂಖ್ಯಾತರು"[೨]

ಇಂತಹ ಸಾಲಿನಲ್ಲಿ ಅವಶ್ಯವಾಗಿ ಸೇರತಕ್ಕವ 'ಗಜೇಶ ಮಸಣಯ್ಯ' 'ಲಿಂಗಮಧ್ಯೆ ಜಗತ್ ಸರ್ವಂ' ಎಂಬ ತತ್ವದ ವಿಜಯ ಪತಾಕೆಯನ್ನು ಎತ್ತಿಹಿಡಿದ ಧೀಮಂತ, ಹೃದಯ ಶ್ರೀಮಂತ, ಅನುಪಮ ಅನುಭಾವಿ, ಅಪ್ರತಿಮ ವಚನಕಾರ. ಲಿಂಗಾಂಗ ಸಾಮರಸ್ಯದ, ಸವಿಸುಖದ ಸೊಬಗನ್ನು ಮನಮುಟ್ಟುವಂತೆ ಮನೋಜ್ಞವಾಗಿ ವರ್ಣಿಸಿದ ಇವನ ವಚನಗಳು ಹೃದಯಂಗಮವಾಗಿವೆ ಹಾಗೂ ಅರ್ಥಪೂರ್ಣವಾಗಿವೆ.

ಅಷ್ಟವಿಧಾರ್ಚನೆ ಷೋಡಶೋಪಚಾರ
ಬಾಹ್ಯಕ್ರೀಯಲ್ಲಿ ಲಿಂಗವುಂಟೆ ?
'ಸ್ವಯಮಾತ್ಮ ಪರೋಲಿಂಗ' ವೆಂದುಲಿವ
ಬೀದಿಯ ಭಂಡರ ಮಾತ ಕೇಳಲಾಗದು

---

೧. ವಚನ ಸಾಹಿತ್ಯ – ಎಂ. ಚಿದಾನಂದ ಮೂರ್ತಿ. ಪುಟ ಸಂಖ್ಯೆ : ೯೯
೨. ಗಜೇಶ ಮಸಣಯ್ಯ – ಎಸ್. ಎಸ್. ಭೂಸರೆಡ್ಡಿ.

ತಿಲಕುಸುಮ ಪರಿಮಳದಂತೆ ಒಳ ಹೊರಗು ಪರಿಪೂರ್ಣ

ಮಹಾಲಿಂಗ ಗಜೇಶ್ವರಾ.

ಬಸವಣ್ಣನವರು ಇಷ್ಟಲಿಂಗ ಪೂಜೆಗೆ ವಿಶೇಷ ಮಹತ್ವವನ್ನು ಕೊಟ್ಟಿದ್ದಾರೆ. ಭಾರತೀಯ ಆಧ್ಯಾತ್ಮಿಕ ಕ್ಷೇತ್ರಕ್ಕೆ ಶರಣರು ಕೊಟ್ಟ ಅನುಪಮ ಕೊಡುಗೆ ಇದು. ಸ್ವಸ್ವರೂಪದ ಜ್ಞಾನಕ್ಕೆ ಕೈಗಂಬವಿದು. ಅದು ನೆಲದ ಮರೆಯ ನಿಧಾನ, ಕಲ್ಲು ಮರೆಯ ಹೇಮ. ಮುಖವು ಸರಿಯಾಗಿ ಕಾಣಬೇಕಾದರೆ ಪ್ರತಿದಿನವೂ ಸ್ವಚ್ಛ ಮಾಡಬೇಕಾಗುತ್ತದೆ. ಅಂತೆಯೇ ನಮ್ಮ ಹೃದಯವೆಂಬ ಕನ್ನಡಿ ಸ್ವಚ್ಛವಾಗಲು ಲಿಂಗಪೂಜೆ ಮಾಡಲೇಬೇಕು. ದೇವರು ಗುಡಿ–ಗುಂಡಾರಗಳಲ್ಲಿಲ್ಲ. ನಮ್ಮ ಹೃದಯದಲ್ಲಿಯೇ ಇದ್ದಾನೆ. ಅವನೇ ಲಿಂಗಸ್ವರೂಪನಾಗಿ ಚುಳುಕಾಗಿ ನಮ್ಮ ಕೈಗೆ ಬಂದಿದ್ದಾನೆ. ವೈಚಾರಿಕ ವೈಜ್ಞಾನಿಕ ತಳಹದಿಯ ಮೇಲೆ ಲಿಂಗತತ್ವನಿಂದೆ. "ಮುಂಜಾವದಲೆದ್ದು ಲಿಂಗದಂಘ್ರಿಯ ಮುಟ್ಟಿ ಸುಪ್ರಭಾತದಲ್ಲಿ ಶಿವಶರಣರ ಮುಖವ ನೋಡುವುದು. ಹುಟ್ಟಿದ ಜನ್ಮಕ್ಕಿದೇ ಸಫಲವು, ಸತ್ಯವಚನವಿಂತೆಂದುದಾಗಿ ಇಂತಿಲ್ಲದವರ ನೊಲ್ಲ ನಮ್ಮ ಕೂಡಲಸಂಗಮದೇವಾ" ಎಂದಿದೆ ಶರಣವಾಣಿ. "ಎನ್ನ ಕರದೊಳಗಿರ್ದು ಎನ್ನೊಳೇತಕೆ ನುಡಿಯೆ, ಎನ್ನ ಭವಭವದಲ್ಲಿ ಬಿಡದಾಳ್ದನೇ?" ಎಂದು ಮುಪ್ಪಿನ ಷಡಕ್ಷರಿಗಳು ಹಲುಬಿ ಹಂಬಲಿಸಿ ಅಪ್ಪಿಕೊಂಡರು ಒಪ್ಪಿಕೊಂಡರು ಲಿಂಗತತ್ವವನ್ನು. ಆದುದರಿಂದ ಲಿಂಗಾಂಗಸಾಮರಸ್ಯ ಜ್ಞಾನದ ರಹಸ್ಯವನ್ನು ತಿಳಿದುಕೊಳ್ಳಲು ಗಜೇಶ ಮಸಣಯ್ಯನ ವಚನಗಳಿಗೆ ಮೊರೆ ಹೋಗಬೇಕು. ಭಾವ–ಭಾಷೆಗಳ ಸೌಂದರ್ಯ, ಗಾಂಭೀರ್ಯಗಳಲ್ಲಿ, ಅಕ್ಕಮಹಾದೇವಿಯ ವಚನಗಳಿಗೆ ಸರಿದೊರೆಯಾಗಿ ನಿಲ್ಲಬಲ್ಲ ವಚನಗಳನ್ನು ನೀಡಿದ ಉನ್ನತ ನಿಲುವಿನ ಮಹಾಶರಣ ಗಜೇಶ ಮಸಣಯ್ಯ.

ಅಂಗಸಂಗದಲಿದ್ದು ಬಂದುದನೆ ಕಂಡು
ಹಾವು ಹಸು ಮಗುವಿನಂತೆ ಆದೆ ನೋಡವ್ವಾ
ಕಂಗಳ ನೋಟದ ಸುಖಕ್ಕೆ ಮನವನೊಪ್ಪಿಸುವೆ.
ಪಗಂಗದ ಬೆಸನಿಯಂತೆ ಆದೆ ನೋಡವ್ವಾ
ಮದಾಳಿಯ ನಾಸಿಕದಂತೆ ಸುಳಿದು ಸುಖಬಡುವೆ.
ಮಹಾಲಿಂಗ ಗಜೇಶ್ವರಾ ನಿನ್ನ ವಿನಯ ನೋಡವ್ವಾ.

೧.೧ ಅಧ್ಯಯನದ ಉದ್ದೇಶ :

ಕರ್ನಾಟಕದ ವಚನಕಾರರನ್ನು ಕುರಿತು ಕೈಕೊಂಡ ಪ್ರೊ. ನಂದೀಮಠ, ಪ್ರೊ. ಬಸವನಾಳ ಹಾಗೂ ವಚನಶಾಸ್ತ್ರ ಪಿತಾಮಹ ಫ. ಗು. ಹಳಕಟ್ಟಿಯವರ ಕಾರ್ಯ ಗಣನೀಯವಾಗಿದೆ. ಆದರೆ

ಮಹಾರಾಷ್ಟ್ರದ ವಚನಕಾರರು ಮಾತ್ರ ಇಂದಿನವರೆಗೆ ಅಲಕ್ಷಿತರಾಗಿಯೇ ಉಳಿದಿದ್ದಾರೆ. ಗಜೇಶ ಮಸಣಯ್ಯನವರನ್ನು ಕುರಿತು ಇಂದಿನವರೆಗೆ ಅಧ್ಯಯನ ನಡೆದಿಲ್ಲ. ಆದರೆ ಅವರನ್ನು ಕುರಿತು ಕೇವಲ ಕರ್ನಾಟಕ ವಿಶ್ವವಿದ್ಯಾಲಯದ ಅಡಿಯಲ್ಲಿ ಬೆಳಗಾವಿ ಜಿಲ್ಲೆಯ ನಿಡಸೋಸಿಯಲ್ಲಿ ದಿನಾಂಕ ೦೭–೦೭–೧೯೮೩ ರಂದು ಜರುಗಿದ ೩೨೯ ನೆಯ 'ವ್ಯಾಸಂಗ ವಿಸ್ತರಣಾ ಉಪನ್ಯಾಸಮಾಲೆ'ಯ ಕಿರು ಪುಸ್ತಕ ಹಾಗೂ ಶರಣ ಗಜೇಶ ಮಸಣಯ್ಯ (ಶ್ರೀ ಆರ್. ಎಸ್. ಸ್ವಾಮಿ) ಇವನ್ನು ಬಿಟ್ಟರೆ ಬೇರೆ ಅಧ್ಯಯನ ನಡೆಯಲಿಲ್ಲ. ಮಹಾರಾಷ್ಟ್ರದವರಂತೂ ತಲೆ ಕೆಡೆಸಿಕೊಂಡಿಲ್ಲ. ಕರಜಗಿ ನಾನು ತಿಳಿದುಕೊಂಡ ಹಳ್ಳಿ. ಅಲ್ಲಿಗೆ ಬಹಲ ಸಲ ಹೋಗಿದ್ದೇನೆ. ಗಜೇಶ ಮಸಣಯ್ಯನ ಪವಿತ್ರ ಸ್ಥಳವನ್ನು ಕಂಡಿದ್ದೇನೆ. ಆತ ಅಲ್ಲಿ ನೆಲೆಸಿ ಈ ಭಾಗದ ಜನರ ಅಶೋತ್ತರಗಳನ್ನು ಈಡೇರಿಸಿ ಕಷ್ಟಗಳನ್ನು ದೂರಮಾಡಿ ಸಮಾಧಾನದ ಬದುಕನ್ನು ನಡೆಸಲು ಉಪದೇಶ ಮಾಡಿರುವ ಮಾತುಗಳು ಇನ್ನೂ ಕಿವಿಗೆ ಬೀಳುತ್ತಿವೆ. ಶರಣರು ತಾವು ನೆಲೆಸಿದ ಪ್ರದೇಶದಲ್ಲಿ ಶಾಂತಿ, ಸಮಾಧಾನ, ಪ್ರಗತಿ, ಕಾಯಕ, ದಾಸೋಹ, ದಯೆ, ಕರುಣೆ ಇಂತಹ ಉದಾತ್ತ ಗುಣಗಳನ್ನು ಬೆಳೆಸಿದ್ದಾರೆ. ಅಂತೆಯೇ ಜನ ಅಂದಿನಿಂದ ಇಂದಿನವರೆಗೂ ನೆನೆಯುತ್ತಾರೆ. ಈ ಶರಣನ ಬಗ್ಗೆ ನನಗೆ ಅಪಾರವಾದ ಆಸಕ್ತಿ. ಕರಜಗಿಯಂತಹ ಒಂದು ಸಣ್ಣ ಹಳ್ಳಿಯಲ್ಲಿ ಇಂತಹ ಮಹಾನ್ ಚೇತನ ಹೇಗೆ ಬಾಳಿರಬಹುದು? ಹೇಗೆ ತನ್ನ ವಿಚಾರಗಳನ್ನು ಜನರಿಗೆ ನೀಡಿರಬಹುದು. ಇಂದಿಗೂ ಆ ವ್ಯಕ್ತಿ ಏಕೆ ನಮ್ಮ ಮನಸ್ಸಿನಲ್ಲಿ ನೆಲೆಸಿದ್ದಾನೆ? ಎಂಬ ಮುಂತಾದ ಪ್ರಶ್ನೆಗಳು ನನ್ನ ಮನಸ್ಸಿನಲ್ಲಿ ಮೂಡುತ್ತಿದ್ದವು. ಅದಕ್ಕಾಗಿ ನಾನು ಈ ವ್ಯಕ್ತಿಯ ಜೀವನ ಸಾಹಿತ್ಯ, ಸಂದೇಶ, ವಚನಗಳನ್ನು ಕುರಿತು ಅಧ್ಯಯನ ಮಾಡಬೇಕೆಂದು ಈ ವಿಷಯವನ್ನು ಆರಿಸಿಕೊಂಡೆ. ಇಂದಿನವರೆಗೆ ಗಜೇಶ ಮಸಣಯ್ಯನ ಜೀವನ ಸಾಧನೆ, ಸಾಹಿತ್ಯ ಸಾಧನೆ, ವಚನಗಳ ಕುರಿತು ವಿಮರ್ಶೆ ನಡೆದಿಲ್ಲ. ಆದ್ದರಿಂದ ಕರ್ನಾಟಕದ ಹೊರಗುಳಿದ ಈ ಅಲಕ್ಷಿತ ವಚನಕಾರನನ್ನು ಸಾಹಿತ್ಯ ರಂಗಕ್ಕೆ ಹಾಗೂ ಜನಸಾಮಾನ್ಯರಿಗೆ ಪರಿಚಯಿಸುವುದಕ್ಕಾಗಿ "ಗಜೇಶ ಮಸಣಯ್ಯ" ಎಂಬ ವಿಷಯವನ್ನು ಆಯ್ದುಕೊಂಡೆ. ಏಕೆಂದರೆ ನನ್ನ ಊರಿನ ಪಕ್ಕದ ಊರು ಕರಜಗಿ ನಾನು ಚಿಕ್ಕಂದಿನಿಂದಲೂ ಆ ಊರಿಗೆ ಹೋಗಿಬರುವ ರೂಢಿ. ಅದಕ್ಕಂತಲೇ ನಾನು ಈ ಅಧ್ಯಯನ ಮಾಡಬೇಕೆಂದು ನಿರ್ಧರಿಸಿದೆ. ಇದುವೇ ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಗಜೇಶ ಮಸಣಯ್ಯನವರ ವಚನಗಳನ್ನು ವಿವಿಧ ನೆಲೆಗಳಲ್ಲಿ ಇಟ್ಟು ಅಭ್ಯಸಿಸಿ ವಿವಿಧ ಅಧ್ಯಾಯಗಳಲ್ಲಿ ಅವುಗಳನ್ನು ಇಲ್ಲಿ ವಿಮರ್ಶಿಸಲಾಗಿದೆ. ಮಸಣಯ್ಯನವರ ವಚನಗಳು, ಸಾಹಿತ್ತಿಕ ಅಧ್ಯಯನ ಕೈಕೊಂಡು ಸೂಕ್ಷ್ಮವಾಗಿ ಅರ್ಥೈಸುವುದು. ಪ್ರಸ್ತುತ ಪ್ರಬಂಧದ ಮುಖ್ಯ ಉದ್ದೇಶವಾಗಿದ್ದರೂ ಸಹಿತ ವಚನ ಸಾಹಿತ್ಯವನ್ನು ಕುರಿತು ಹಿನ್ನೆಲೆಯಲ್ಲಿ ಹೇಳಿ ಗಜೇಶ ಮಸಣಯ್ಯನ ಸಮಕಾಲೀನ ಸೊನ್ನಲಿಗೆಯ ಶರಣರ ಕುರಿತು ಎರಡನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಅವರ ಜೀವನ

ಚರಿತ್ರೆಯ ಬಗ್ಗೆ ಮೂರನೆಯ ಅಧ್ಯಾಯದಲ್ಲಿ ಅವರ ವಚನಗಳಲ್ಲಿ ಲಿಂಗಪೂಜೆಯ ವಿಚಾರವನ್ನು ಕುರಿತು ವಿವೇಚಿಸಲಾಗಿದೆ. ಐದನೆಯ ಅಧ್ಯಾಯದಲ್ಲಿ "ಸಮಕಾಲೀನ ಶರಣರ ವಚನಗಳಲ್ಲಿ ಗಜೇಶ ಮಸಣಯ್ಯ" ಎಂಬ ವಿಷಯ ಚರ್ಚಿಸಲಾಗಿದೆ. ಒಟ್ಟಿನಲ್ಲಿ ಅವರ ಸಂಗೀತದ ಆಸಕ್ತಿ, ಸೂಳ್ನುಡಿಗಳನ್ನು ಹಾಗೂ ಉಪಮೆಗಳ ಕುರಿತು ಚರ್ಚಿಸಲಾಗಿದೆ.

೧.೨ ಅಧ್ಯಯನದ ಸ್ವರೂಪ :

ಗಜೇಶ ಮಸಣಯ್ಯನ ವಚನಗಳು ಒಂದು ವಿಶಿಷ್ಟ ಲಕ್ಷಣದೊಂದಿಗೆ ರೂಪುಗೊಂಡಿದೆ. ವಚನಸಾಹಿತ್ಯದಲ್ಲಿ ಈ ರೀತಿ ವಚನ ರಚಿಸಿದರು. ಕೇವಲ ಅಕ್ಕಮಹಾದೇವಿ, ಉರಿಲಿಂಗದೇವ, ಗಜೇಶ ಮಸಣಯ್ಯ. "ತತ್ವವನ್ನು ಬಿತ್ತರಿಸಲು ನೀತಿಯನ್ನು ತಿಳಿಸಲು, ಭಾವವನ್ನು ಅಭಿವ್ಯಕ್ತಿಗೊಳಿಸಲು ವಚನಗಳ ಶೈಲಿ ಸಮರ್ಪಕವಾದುದು. ಪದ್ಯ ದೂರಾನ್ವಯದ ಸಾಗರ. ಗದ್ಯವರ್ಣನಾನಿರ್ಣಯಗಳ ಆಗರ. ಆದ್ದರಿಂದಲೇ ಶರಣರು ಪದ್ಯವು ಅಲ್ಲದ ಗದ್ಯವು ಅಲ್ಲದ ಒಂದು ಸವರ್ಣಮಾರ್ಗವನ್ನು ಅನುಸರಿಸಿ ವಚನ ಶೈಲಿಯನ್ನು ಕಂಡು ಹಿಡಿದರು. ಗದ್ಯದ ಸೊಬಗಿನಲ್ಲಿ ಪದ್ಯದ ಲಯವನ್ನು ಅಳವಡಿಸಿಕೊಂಡುದೇ ವಚನವೆನಿಸಿತು. ಶೀಲದಂತೆ ಶೈಲಿ ಎನ್ನುವ ಮಾತೊಂದಿದೆ. ಶೀಲ ವ್ಯಕ್ತಿಯ ಕುರುಹು; ಆ ವ್ಯಕ್ತಿಯ ಶೈಲಿ ಅವನ ಶೀಲದ ಅರಿವು. ಹೀಗಾಗಿ ಶೀಲಕ್ಕನುಗುಣವಾದ ಶೈಲಿ. ತತ್ವಕ್ಕನುಗುಣವಾದ ತಂತ್ರ ವಚನಗಳಲ್ಲಿರುವುದನ್ನು ಕಾಣುತ್ತೇವೆ. ವಚನಶೈಲಿ ಕನ್ನಡದ್ದೇ ಆದ ವಿಶಿಷ್ಟ ಶೈಲಿ"[೪]. ಭಾಷೆಯ ಬಳಕೆಯಲ್ಲಿ ಸರಳತೆ, ಹಿತಮಿತ ಗುಣ, ಔಚಿತ್ಯಪ್ರಜ್ಞೆ ಇವು ವಚನಗಳ ಮುಖ್ಯ ಲಕ್ಷಣಗಳಾಗಿವೆ. ಗಜೇಶ ಮಸಣಯ್ಯನ ವಚನಗಳ ಮುಖ್ಯ ಸ್ವರೂಪವೆಂದರೆ "ಸತಿಪತಿಗಳೊಂದಾದ ಭಕ್ತಿಹಿತವಪ್ಪುದು ಶಿವಂಗೆ" ಎನ್ನುವಂತೆ ಇದೆ. "ಭಾವ–ಭಾಷೆಗಳ ಸೌಂದರ್ಯದಲ್ಲಿ ಅಕ್ಕಮಹಾದೇವಿಯ ವಚನಗಳಿಗೆ ಹೋಲಿಕೆಯಾಗಿ ನಿಲ್ಲಬಲ್ಲ ವಚನಗಳನ್ನು ನೀಡಿರುವ ಮಹಾತ್ಮನೀತ. ಅಕ್ಕಮಹಾದೇವಿ ಎಷ್ಟೆಂದರೂ ಹೆಣ್ಣಾಗಿ ಹುಟ್ಟಿದಾಕೆ. ಸತಿ–ಪತಿ ಸುಕುಮಾರ ಭಾವನೆ ಆಕೆಗೆ ಸಹಜವಾದುದು. ಆದರೆ ಗಂಡಾಗಿ ಹುಟ್ಟಿದ ಗಜೇಶ ಮಸಣಯ್ಯ ಈ ಭಾವದಲ್ಲಿ ಆಕೆಯ ಎತ್ತರಕ್ಕೆ ಏರಿರುವುದು ಕೌತುಕಗಳಲ್ಲಿ ಕೌತುಕ. ಅವನ ಇನ್ನಿಷ್ಟು ವಚನಗಳ ಉಪಲಬ್ಧವಾದರೆ ಭಾವಗೀತೆಗಳ ಯಾವ ಕವಿಗೂ ಸರಿಸಮಾನವಾಗಿ ನಿಲ್ಲುತ್ತಾನೆ"[೫]. ಇವನ ವಚನಗಳ ಉರಿಲಿಂಗದೇವ ವಚನಗಳಂತೆ ಭಾವೋದ್ರಿಕ್ತವಾಗಿವೆ ಮತ್ತು ಬಹುಶಃ ಹೆಚ್ಚು ಸೂಕ್ಷ್ಮವಾಗಿವೆ. ಇವನ ವಚನಗಳು ಯಾವ ರಾಜನನ್ನಾಗಲಿ, ಪಂಡಿತನನ್ನಾಗಲಿ ಮೆಚ್ಚಿಸಲು ಅಲ್ಲ. ತಮ್ಮ ಪ್ರತಿಭೆ, ಪಾಂಡಿತ್ಯ, ಪ್ರತಿಷ್ಠೆಗಳ ಪ್ರದರ್ಶನಕ್ಕಾಗಿಯೂ ಅಲ್ಲ. ಸಾರ್ಥಕ ಬದುಕಿನ ಬೆಲೆಯನ್ನು ಅರುಹಿದ ಮುತ್ತಿನಂತಹ ವಚನಗಳಾಗಿವೆ. ಮಾನವರ ಮನದ ಮೈಲಿಗೆಯನ್ನು ಕಳೆಯಲು ಮೂಡಿಬಂದ ಚಿನ್ಮಯ ಸಾಹಿತ್ಯ. ಇವುಗಳಲ್ಲಿ ವಿಶ್ವದ ಮನ್ನಣೆ ಪಡೆಯಬಲ್ಲ ಮಾನವೀಯ ಚಿರಂತನ ಮೌಲ್ಯಗಳಿವೆ – ತತ್ವದರ್ಶನವಿದೆ.

---

೪. ಸಕಲಪುರಾತನ ಬೆಡಗಿನ ವಚನಗಳು : ಎಮ್. ಎಸ್. ಸುಂಕಾಪುರ

೫. ಶರಣ ಚರಿತಾಮೃತ : ಸಿದ್ಧಯ್ಯಪುರಾಣಿಕ : ಪುಟ ಸಂಖ್ಯೆ : ೪೪೧

೧.೩ ಅಧ್ಯಯನದ ವ್ಯಾಪ್ತಿ :

ಬಸವಾದಿಶರಣರ ಪ್ರಮುಖ ವಚನಕಾರರಲ್ಲಿ ಒಬ್ಬರಾದ ಗಜೇಶ ಮಸಣಯ್ಯನವರ ವಚನಗಳನ್ನೇ ಕೇಂದ್ರವಾಗಿಟ್ಟುಕೊಂಡು ಉಳಿದೆಲ್ಲ ವಚನಕಾರರ ವಚನಗಳನ್ನು ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಈ ರೀತಿಯಾಗಿ ಪ್ರಸ್ತುತ ಅಧ್ಯಯನಕ್ಕೆ ವಚನ ಸಾಹಿತ್ಯವನ್ನು ಬಳಸಿಕೊಳ್ಳಲಾಗಿದೆ.

೧.೪ ಅಧ್ಯಯನದ ವೈಧಾನಿಕತೆ :

ಗಜೇಶ ಮಸಣಯ್ಯ ಹಾಗೂ ಮಸಣಮ್ಮಳ ಜೀವನ, ಸಾಧನೆ, ವಚನಗಳು ಪರಿಚಯಿಸಿಕೊಂಡು ನಡೆಸುವ ಅಧ್ಯಯನ ಇದಾಗಿದೆ. ಇದರೊಳಗಿನ ಸಂಗತಿಗಳನ್ನು ಗಮನಿಸಿ ಮೂಲ ಆಕರಗಳ ಸಹಾಯದಿಂದ ಇಲ್ಲಿ ಅಧ್ಯಯನ ಮಾಡಲಾಗಿದೆ. ೧೨ ನೇ ಶತಮಾನದ ವಚನಕಾರರನ್ನು ಅಲ್ಲಲ್ಲಿ ಪರಿಚಯಿಸುತ್ತ, ಗಜೇಶ ಮಸಣಯ್ಯ ಹಾಗೂ ಕನ್ನಡ ಸಾಹಿತ್ಯವನ್ನು ಕೂಡಾ ವಿವರಿಸಲಾಗಿದೆ. ಹಲವಾರು ವಿದ್ವಾಂಸರು ಬರೆದ ಗ್ರಂಥಗಳನ್ನು ಅಲ್ಲಲ್ಲಿ ಆಕರಗಳಾಗಿ ತೆಗೆದುಕೊಳ್ಳಲಾಗಿದೆ. ಕರಜಗಿ ಹಾಗೂ ಮುನವಳ್ಳಿ ಪ್ರತ್ಯಕ್ಷವಾಗಿ ಬೆಟ್ಟಿಕೊಟ್ಟು ಅಲ್ಲಿಯ ಗುಡಿಯ ಹಾಗೂ ಪರಿಸರದ ನಾಲ್ಕಾರು ಫೋಟೋಗಳನ್ನು ತೆಗೆದುಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ - ೨

ಸೊನ್ನಲಿಗೆಯ ಪರಿಸರದ ಶಿವಶರಣರು

ಅಧ್ಯಾಯ – ೨

ಸೊನ್ನಲಗೆಯ ಪರಿಸರದ ಶಿವಶರಣರು

೧೨ ನೇ ಶತಮಾನದಲ್ಲಿ ಸೊನ್ನಲಿಗೆ ಒಂದು ಚಿಕ್ಕ ಹಳ್ಳಿ. ಆದರೆ ಇಂದು ಮಹಾನಗರ. ಇದಕ್ಕೆ ಕಾರಣ ಅಲ್ಲಿಯ ಶಿವಶರಣರು. ಕಾಯಕವೇ ಕೈಲಾಸ, ದಯವೇ ಧರ್ಮದ ಮೂಲ, ಆಚಾರವೇ ಸ್ವರ್ಗ ಮುಂತಾದ ನುಡಿಗಳನ್ನು ಜನರಿಗೆ ತಿಳಿಸುತ್ತ ಸಮಾಜದಲ್ಲಿಯ ಮೂಢನಂಬಿಕೆಗಳನ್ನು ಹೊಡೆದೊಡಿಸಿದವರು ಶಿವಶರಣರು. ಅವರಲ್ಲಿ ಪ್ರಮುಖರಾದ ಸಿದ್ಧರಾಮ, ಗಜೇಶ ಮಸಣಯ್ಯ – ಮಸಣಮ್ಮ, ಅಮುಗಿದೇವಯ್ಯ, ಹಾವಿನಾಳ ಕಲ್ಲಯ್ಯ, ದೇಶಿಕೇಂದ್ರ ಸಂಗನಬಸವ ಮುಂತಾದವರು. 'ಶರಣರು ನಡೆದ ನೆಲವೇ ಪವಿತ್ರ ಕ್ಷೇತ್ರ, ಅವರು ಮುಟ್ಟಿದ ಜಲವೇ ಪಾವನ ತೀರ್ಥ, ಅವರ ನುಡಿಯೇ ಮಂತ್ರ, ಅವರ ನೋಟವೇ ಕೃಪಕಟಾಕ್ಷ' ಎಂಬಂತೆ ಈ ಶರಣರ ಸ್ಥಳಗಳಲ್ಲಿ ಶತಶತಮಾನಗಳು ಕಳೆದರೂ ಇಂದಿಗೂ ಶಿವಶರಣರು ಜನರ ಮನಸ್ಸಿನಲ್ಲಿ ನೆಲೆಸಿ, ಅವರ ಭಕ್ತಿಯಿಂದ ಪೂಜೆಗೊಳ್ಳುತ್ತ ಬಂದಿರುವ ಮಹಾನುಭಾವಿಗಳಾಗಿದ್ದಾರೆ.

೨.೧ ಸಿದ್ಧರಾಮ :

೧೨ ನೇ ಶತಮಾನದ ವಚನಕಾರ ಸಿದ್ಧರಾಮನ ತಂದೆ ಮುದ್ದೆಗೌಡ ಹಾಗೂ ತಾಯಿ ಸುಗ್ಗವ್ವೆ. ಸಿದ್ಧರಾಮನು ಚಿಕ್ಕವನಾಗಿದ್ದಾಗ ದನಮೇಯಿಸುವ ಕಾಯಕ ಮಾಡುತ್ತಿದ್ದನು. ಆಗ ಜಂಗಮ ರೂಪಿನಲ್ಲಿ (ಶಿವನು) ಮಲ್ಲಯ್ಯನು ಭೆಟ್ಟಿಯಾಗಿ ಮಾಯವಾದನು. ಆತನಿಗಾಗಿ ಹಂಬಲಿಸಿ ಶ್ರೀಶೈಲಕ್ಕೆ ಹೋಗಿ, ಸಿದ್ಧರಾಮನು ಹುಡುಕಾಡಿದನು. ಕಾಣೆಯಾದ ಮಲ್ಲಯ್ಯ ದೊರೆಯದಿರಲು, ರುದ್ರಗಮ್ಮರಿಯಲ್ಲಿ ಹಾರಿ ಪ್ರಾಣನೀಗಬೇಕೆನ್ನುವಷ್ಟರಲ್ಲಿ ಸಿದ್ಧರಾಮನಿಗೆ ಶಿವನು ಸಾಕ್ಷಾತ್ಕಾರವಾಗಿಕಾಣಿಸಿದನು. ಲೋಕಹಿತಾರ್ಥವಾಗಿ ಸೊನ್ನಲಿಗೆಗೆ ಹೋಗಬೇಕೆಂಬ ಗುರುವಿನ ಆಜ್ಞೆಯಂತೆ ಮರಳಿ ಬಂದನು.

ಕರ್ಮಯೋಗಿಯಾಗಿದ್ದ ಸಿದ್ಧರಾಮನಿಗೆ ಸೊನ್ನಲಿಗೆ ಕಾರ್ಯಕ್ಷೇತ್ರವಾಯಿತು. ಆತನು ಗೈದ ಲೋಕೋಪಕಾರಿ ಕಾರ್ಯಗಳನ್ನು ಬಹಳ ಅರ್ಥವತ್ತಾಗಿ ಕವಿ ರಾಘವಾಂಕನು ಹೀಗೆ ಹೇಳಿದ್ದಾನೆ. "ಶಿವಯೋಗಿಯ ಶರೀರಂ ವೃಥಾ ಸವೆಯಲಾಗದು, ಅನುಗೊಂಬನಿತು ಕಾಯಕಂ ನಡೆಯುತಿರಬೇಕು"

ಸಿದ್ಧರಾಮನು ತನ್ನ ಶಿಷ್ಯರೊಂದಿಗೆ ಕೆರೆ ಕಟ್ಟುವ ಕಾಯಕ ಮಾಡಿದ್ದಾನೆ. ಹೀಗೆ ಸಿದ್ಧರಾಮನು ಕರ್ಮಯೋಗದಲ್ಲಿ ನಿರತನಾದಾಗ ಅಲ್ಲಮಪ್ರಭುಗಳು, ಆತನಿಗೆ ಅಧ್ಯಾತ್ಮಿಕ ಸಾಧನೆಯ ಮಾರ್ಗದಲ್ಲಿ ಎಚ್ಚರಿಸಲು ಬಂದರು. ಅವರಿಬ್ಬರಲ್ಲಿ ತಾತ್ವಿಕ ಸಂವಾದ ನಡೆಯಿತು. ಅಲ್ಲಮಪ್ರಭು ಸಿದ್ಧರಾಮನ ಸಾಧನೆಯಲ್ಲಿರುವ ಅರಿಕೆಯನ್ನು ಎತ್ತಿ ತೋರಿಸಿ, ಕಲ್ಯಾಣಕ್ಕೆ ಕರೆದುಕೊಂಡು ಬರುತ್ತಾನೆ.

"ಸೊಲ್ಲಾಪುರ ಒಂದು ಅದ್ಭುತ ಪುಣ್ಯಕ್ಷೇತ್ರ, ದಕ್ಷಿಣಕಾಶಿ, ಭೂಕೈಲಾಸ ಎಂದು ಅದನ್ನು ಶಾಸನಗಳಲ್ಲಿ ಬಣ್ಣಿಸಲಾಗಿದೆ. ಕೇವಲ ಒಂದು ಗ್ರಾಮವಾಗಿದ್ದ ಸೊನ್ನಲಿಗೆ ಸಿದ್ಧರಾಮನ ದಯಾಂತಃ ಕರಣದಿಂದ ಸಮೃದ್ಧ ಊರಾಗಿ ಬೆಳೆಯಿತು. ಸುತ್ತಲಿನ ಜನರನ್ನು ತನ್ನೆಡೆಗೆ ಸೆಳೆಯಿತು"[೧].

ಸಿದ್ಧರಾಮನ ಕುರಿತು ಈವರೆಗೆ ೩೦-೩೧ ಶಾಸನಗಳು ದೊರೆತಿವೆ. ಅಲ್ಲದೇ ಶಾಸನಗಳು ಅವರನ್ನು ಲಿಂಗದೇವರೆಂದು ಬಣ್ಣಿಸಿದ್ದು ನೋಡಿದರೆ ಆ ಕಾಲದಲ್ಲಿ ಅವರು ಜನರ ಪಾಲಿಗೆ ನಡೆದಾಡುವ ಲಿಂಗವೇ ಆಗಿದ್ದರೆಂದು ತೋರಿಬರುತ್ತದೆ. ಅವರು ಸೊನ್ನಲಿಗೆಯಲ್ಲಿ ಯೋಗ ಸಮಾಧಿ ಕಟ್ಟಿಸಿ ಅದರಲ್ಲಿ ಲಿಂಗೈಕ್ಯರಾದರು. ಈಗಲೂ ಅವರು ಕಟ್ಟಿಸಿದ ಸುಂದರ ಕೆರೆ, ಯೋಗ ಸಮಾಧಿಯನ್ನು ಅಲ್ಲಿ ನಾವು ಕಾಣುತ್ತೇವೆ.

ಸಿದ್ಧರಾಮನು ಶ್ರೇಷ್ಠ ವಚನಕಾರನಾಗಿದ್ದನು. ಅವನು ಬರೆದ ವಚನಗಳ ಅಂಕಿತ "ಕಪಿಲಸಿದ್ಧ ಮಲ್ಲಿಕಾರ್ಜುನ" ಆಗಿದೆ. ಅವನ ೧೯೭೯ ವಚನಗಳು ದೊರೆತಿವೆ.

ಉದಾ : **"ಎಲೆ ಎಲೆ ಲಿಂಗವೆ ನಾನಂದೆ ಬರಲಿಲ್ಲ ಕಲ್ಯಾಣಕ್ಕೆ**
ಎಲೆ ಎಲೆ ಲಿಂಗವೇ ನಾನಂದೆ ಬರಲಿಲ್ಲ ಮಾರ್ಗಕ್ಕೆ
ಎಲೆ ಎಲೆ ಲಿಂಗವೇ ನಾನಂದೆ ಚೆನ್ನಬಸವಣ್ಣನಾಗಲಿಲ್ಲ
ಲಿಂಗವೇ ಲಿಂಗವೇ ಕಪಿಲಸಿದ್ಧ ಮಲ್ಲಿಕಾರ್ಜುನ"

ಎಂದು ಹಾಡಿದ ಸಿದ್ಧರಾಮ ಶಿವಯೋಗದ ತುತ್ತ ತುದಿಯನ್ನೇರಿದ ಶಿವಯೋಗ ಸಾರ್ವಭೌಮನಾದ. ಜ್ಞಾನ ಕ್ರಿಯೆಗಳ ಸುಂದರವಾದ ಸಮನ್ವಯಕ್ಕೆ ಸಾಕ್ಷಿಯಾಗಿದ್ದಾನೆ.

೨.೨ ಗಜೇಶ ಮಸಣಯ್ಯ ಹಾಗೂ ಮಸಣಮ್ಮ :

೧೨ ನೇ ಶತಮಾನದಲ್ಲಿ ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟ ತಾಲೂಕಿನ ಕರಜಗಿ ಎಂಬ ಗ್ರಾಮದಲ್ಲಿ ಆಗಿ ಹೋದ ಮಹಾನ್ ಶರಣ - ಶರಣೆಯರು ಗಜೇಶ ಮಸಣಯ್ಯ ಹಾಗೂ ಮಸಣಮ್ಮ.

೧. ಶರಣ ಸೊಲ್ಲಾಪುರ - ಪುಟ ಸಂಖ್ಯೆ : ೧೮

ಆ ಗ್ರಾಮದಲ್ಲಿ ಸಿದ್ಧಗಜೇಶ್ವರ ದೇವಾಲಯವಿದ್ದು, ಅಲ್ಲೊಂದು ಶಿಲಾಹಾರರ ಕಾಲದ ಶಾಸನವಿದೆ. ಈ ದೇವರ ಪೂಜೆಗೆ ಇಂದರಸ ಎಂಬ ರಾಜನು ಈ ಗ್ರಾಮಕ್ಕೆ ಬಂದು, ಶ್ರೀ ಸಿದ್ಧಗಜೇಶ್ವರ ದೇವರ ಪೂಜೆಯನ್ನು ಮಾಡಿ, ಅನಂತರ ಸ್ವಲ್ಪ ಭೂಮಿಯನ್ನು ದಾನವಾಗಿ ಕೊಟ್ಟನು. ಗಜೇಶ್ವರ ಪೂಜೆಯನ್ನು ಮಾಡುತ್ತ ಬಂದ ಮನೆತನದವರನ್ನು 'ಗಜಾ' ಎಂಬ ಅಡ್ಡ ಹೆಸರಿನಿಂದ ಇಂದಿಗೂ ಕರೆಯುತ್ತಾರೆ.

ಗಜೇಶ ಮಸಣಯ್ಯನ ವಚನಗಳ ಅಂಕಿತ ಕೂಡಾ "ಮಹಾಲಿಂಗ ಗಜೇಶ್ವರ" ಎಂದು ಆಗಿದೆ. ಅವರ ಪುಣ್ಯಸ್ತ್ರೀ ಮಸಣಮ್ಮ "ಮಸಣಯ್ಯ ಪ್ರಿಯ ಗಜೇಶ್ವರ" ಎಂದು ಇಟ್ಟುಕೊಂಡಿದ್ದಾಳೆ. ಅವರಿಬ್ಬರು ಬಸವತತ್ವ ನಿಷ್ಠರಾಗಿ, ಕಾಯಕದಿಂದ ಬಂದ ಹಣವನ್ನು ದಾಸೋಹಕ್ಕಾಗಿ ವಿನಿಯೋಗಿಸುತ್ತಿದ್ದರು.

ಬಸವಣ್ಣನವರು ಸ್ತ್ರೀ ಸ್ವಾತಂತ್ರ್ಯವನ್ನು ಎತ್ತಿ ಹಿಡಿದು ಸ್ತ್ರೀ–ಪುರುಷರಿಗೆ ಅನುಭವ ಮಂಟಪದಲ್ಲಿ ಅನುಭಾವ ಗೋಷ್ಠಿಯನ್ನು ನಡೆಸುವ ಸಮಾನ ಅವಕಾಶವನ್ನು ಕಲ್ಪಿಸಿದರು. ಗಜೇಶ ಮಸಣಯ್ಯ ಹಾಗೂ ಆತನ ಧರ್ಮಪತ್ನಿ ಮಸಣಮ್ಮ ಇಬ್ಬರೂ ಕಲ್ಯಾಣದಲ್ಲಿ ನಡೆಯುತ್ತಿದ್ದ ಶರಣರ ಸಮ್ಮೇಳನದಲ್ಲಿ ಪಾಲ್ಗೊಂಡು, ಅಲ್ಲಿಯ ಗೋಷ್ಠಿಗಳ ತತ್ವಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರು.

"ಎನಗೆ ನಿಮ್ಮ ಶರಣರೇ ನೀವೆಂದು ಅರಿದರ್ಪುದೇ ಸಾಕು" ಎಂದು ಅವರು ಶಿವಭಕ್ತರಾದವರನ್ನು ಮಹಾಲಿಂಗ ಗಜೇಶ್ವರನೆಂದು ತಿಳಿದರು. ಮಸಣಯ್ಯ ರಚಿಸಿದ ವಚನಗಳಲ್ಲಿ ಕೇವಲ ೭೧ ವಚನಗಳು ಮಾತ್ರ ದೊರೆತಿವೆ. ಅವರ ವಚನಗಳಲ್ಲಿ **"ಸತಿಪತಿಗಳ ಒಂದಾದ ಭಕ್ತಿ ಹಿತವಪ್ಪುದುಚಿದು ಶಿವಂಗೆ"** ಎಂದು ತಿಳಿದು ಬರುತ್ತದೆ. ಮಸಣಮ್ಮಳ ವಚನಗಳು ದೊರೆತಿದ್ದು ಕೇವಲ ೯. ಅವಳ ವಚನಗಳಲ್ಲಿ ಹೊನ್ನು, ಹೆಣ್ಣು, ಮಣ್ಣು ಬಿಟ್ಟವರಿಗೆ ಪ್ರಶ್ನಿಸುತ್ತಾಳೆ. ತನ್ನ ಸ್ವತಂತ್ರನಾದ, ಧೀಮಂತವಾದ ವಿಚಾರದಿಂದ ಗಜೇಶ ಮಸಣಯ್ಯನ ಕೀರ್ತಿಗೆ ಮುಕುಟವನ್ನಿಟ್ಟಿದ್ದಾಳೆ. ಶಿವಾನುಭವದ ಅಮೃತವನ್ನು ಬಡಿಸಿದ್ದಾಳೆ. ನಿಜತತ್ವವನ್ನು ಬೀರಿದ್ದಾಳೆ. ಗುರುವಿನ ಕಾರುಣ್ಯಶಿಶುವಾಗಿ ಪತಿಯ ಪ್ರೇಮದ ಪುತ್ಥಳಿಯಾಗಿ, ಸಂಸಾರದಿಂದಲೇ ಸದ್ಗತಿ ಪಡೆದ ಸಂಸ್ಕೃತಿಯ ಪರಿಮಳ ಸೂಸಿದ ಶರಣೆ, ಪ್ರಜ್ಞಾವಂತ ಶರಣೆ ಎನಿಸಿಕೊಂಡಿದ್ದಾಳೆ.

೨.೩ ಅಮುಗಿ ದೇವಯ್ಯ ಹಾಗೂ ರಾಯಮ್ಮ :

೧೨ ನೇ ಶತಮಾನದಲ್ಲಿ ಆಗಿಹೋದ ಶರಣ ಈತ "ಪುಳಜೆ" ಎಂಬ ಊರಿನವರು. (ಹುಲಜಂತಿ) ಆ ಊರಿನಲ್ಲಿ ಲಿಂಗೇಶ್ವರ ದೇವಾಲಯವಿದೆ. ಹಿಂದೆ ಅದು ಸಿದ್ಧಸೋಮನಾಥನ

ದೇವಾಲಯವಿದ್ದ ಉಲ್ಲೇಖ ಶಾಸನಗಳಲ್ಲಿ ಬರುತ್ತದೆ. ಅದು ಅಮುಗಿದೇವಯ್ಯನ ಇಷ್ಟದೈವವಾಗಿದ್ದು, ಆ ಅಂಕಿತದಿಂದ ವಚನಗಳನ್ನು ರಚಿಸಿದನು.

ಅಮುಗಿದೇವಯ್ಯನು ಸೊನ್ನಲಿಗೆಯಲ್ಲಿ ನೇಯ್ಗೆ ಕಾಯಕ ಮಾಡುತ್ತ ಜಂಗಮದಾಸೋಹ ನಡೆಸುತ್ತಿದ್ದನು. ಒಮ್ಮೆ ಕಪಿಲಸಿದ್ಧ ಪರ್ವಕ್ಕೆ ಹತ್ತು ಕೊಳಗ ಭತ್ತ ಕುಟ್ಟಿ ಕೊಡಲು ಸಿದ್ಧರಾಮನು ಇವನ ಮನೆಗೆ ಕಳುಹಿಸಿದನು. ಇಷ್ಟಲಿಂಗ ಪೂಜಕನಾದ ಅಮುಗಿದೇವಯ್ಯನು ನಿರಾಕರಿಸಲು, ಅವನಿಗೆ ಊರು ಬಿಟ್ಟು ಹೋಗಲು ಸಿದ್ಧರಾಮನು ಆಜ್ಞೆ ಮಾಡಿದನು. ಆಗ ಅಮುಗೆದೇವಯ್ಯನು ತನ್ನ ಸಾಮಾನನ್ನೆಲ್ಲ ಮೂರು ಮೂಟೆ ಕಟ್ಟಿ ಒಂದನ್ನು ತಾನು, ಇನ್ನೊಂದನ್ನು ಹೆಂಡತಿ ಹೊತ್ತುಕೊಂಡರೆ, ಮತ್ತೊಂದನ್ನು ಶಿವನು ಹೊತ್ತುಕೊಂಡು ಬರಲೆಂದಿಟ್ಟು ಮುಂದಿನೂರಿಗೆ ಹೋದರು. ಅಷ್ಟರಲ್ಲಿ ಶಿವನು ಮೂರನೆಯ ಮೂಟೆಯನ್ನು ಹೊತ್ತು ಅಲ್ಲಿಗೆ ತೆರಳಿದ್ದನು. ಮರುದಿನ ಸಿದ್ಧರಾಮನು ಲಿಂಗಕ್ಕೆ ಎಣ್ಣೆಮಜ್ಜನ ಮಾಡಿಸುವಾಗ "ತಲೆಯನ್ನು ಮುಟ್ಟಬೇಡ, ಅಮುಗಿದೇವಯ್ಯನ ಹೊರೆ ಹೊತ್ತ ಕಾರಣ ನೋಯುತ್ತಿದೆ" ಎಂದು ಲಿಂಗವು ನುಡಿದಾಗ, ನಿನ್ನೆಯ ದಿನದ ಘಟನೆ ನೆನಪಾಗಿ ಬೆರಗಾದನು. ಅಮುಗಿದೇವಯ್ಯನ ಭಕ್ತಿಗೆ ಸಿದ್ಧರಾಮನು ತಲೆಬಾಗಿ ಅವನನ್ನು ಸೊನ್ನಲಿಗೆಗೆ ಕರೆತರಬೇಕೆಂದು ಹೋದರು. ಅವನು ಬರಲೊಪ್ಪುವುದಿಲ್ಲ.

ಅಮುಗಿದೇವಯ್ಯ ರಚಿಸಿದ ಸುಮಾರು ಮೂವತ್ತು ವಚನಗಳು ದೊರೆತಿವೆ. ಅವನ ವಚನಗಳ ಅಂಕಿತ "ಸಿದ್ಧ ಸೋಮನಾಥ" ಎಂದಿದೆ. ಸಿದ್ಧರಾಮನ ಒಂದು ವಚನದಲ್ಲಿ ಅಮುಗಿದೇವನ ಹೆಸರು ಬರುತ್ತದೆ. "ಅಂಗ ಲಿಂಗ ಒಂದೆಂದ ಬಳಿಕ ಅಂಗ ಕೆಟ್ಟು ಲಿಂಗ ಉಳಿಯುತ್ತು ನೋಡ ಲಿಂಗ ನಿರ್ವಯಲಾದಲ್ಲಿ ಲಿಂಗ ಭವಿಯಾದುದು ನೋಡಾ ಅಂಗಲಿಂಗ ನಿರ್ವಯಲಲ್ಲಡಿಸಬಲ್ಲರೆ ಭಕ್ತನೆಂಬೆ, ಮಹೇಶನೆಂಬೆ, ಮಲ್ಲಿಕಾರ್ಜುನನವನೆ ಎಂಬೆ ನೋಡಾ ಅಮುಗಿದೇವ" ಇದರಿಂದ ಇವರಿಬ್ಬರ ನಡುವೆ ಸಂಪರ್ಕ ಸಾನಿಧ್ಯ ಏರ್ಪಟ್ಟಿತ್ತೆಂದು ತೋರುತ್ತದೆ.

ಅಮುಗಿದೇವಯ್ಯನು ವಿದ್ವಾಂಸನು, ಬಹುಶ್ರುತನು, ವೇದ–ವೇದಾಂತ ತತ್ವಜ್ಞಾನಿಯೂ, ಘಟ್ಟರ್ಮನಿರತನೂ ಆದ ಜ್ಞಾನಸಂಪನ್ನನು ಆಗಿದ್ದನೆಂದು ಪುಳಜೆಯ ಶಾಸನದಿಂದ ತಿಳಿದು ಬರುತ್ತದೆ.

ಉದಾ : **"ಆದಿನಾ ಸಿದ್ಧಸೋಮನಾಥ**
ಪ್ರಭುದೇವರ ಕಾರುಣ್ಯವೆನಗಾಯಿತು
ಇದಾದ ಜಾಣನಿಚ್ಚೈಸಿ ಸಾಧಿಸಿಹ
ಆತನೆ ನಿತ್ಯಶಿವ ಶರಣೆನ್ನಿರಯ್ಯ"

ಅಮುಗಿರಾಯಮ್ಮ :

೧೨ ನೇ ಶತಮಾನದ ಶಿವಶರಣೆಯರಲ್ಲಿ ನೂರಕ್ಕಿಂತ ಹೆಚ್ಚು ವಚನಗಳನ್ನು ರಚನೆ ಮಾಡಿದವಳು. ಸೊನ್ನಲಿಗೆಯ ನಿಷ್ಠಾವಂತ ಶರಣ ನೇಕಾರ ಕುಲದ ಅಮುಗಿದೇವಯ್ಯನ ಪತ್ನಿ. "ರಾಯಮ್ಮನಿಗೆ 'ವರದಾನಿಯಮ್ಮ' – 'ದಾನಮ್ಮ' – ಎಂಬ ಇನ್ನೊಂದು ಹೆಸರು ಇರುವಂತೆ ತೋರುತ್ತದೆ. ಜನಪದ ಗೀತೆಯಲ್ಲಿ "ದಾನಮ್ಮ ಶಿವಶರಣೆ ನಾರಿಅಮುಗನ ಮಡದಿ" ಎಂಬ ಮಾತು ಬರುತ್ತದೆ. ಅಲ್ಲದೇ ಊರು ಬಿಟ್ಟು ಹೊರಡಲನುವಾದಾಗ ಅಮುಗಯ್ಯ ಮಡದಿಗೆ ಹೇಳಿದ. "ವರದಾನಿ ಹೆಂಡತಿಯ ತರವಲ್ಲ ಈ ಊರು" 'ಮಡದಿ ದಾನಿಯಕರೆದ' ಮಾತುಗಳನ್ನು ಗಮನಿಸಿದರೆ, ಮೊದಲು 'ದಾನಮ್ಮ' ಎಂಬ ಹೆಸರಿದ್ದು ಕಲ್ಯಾಣಕ್ಕೆ ಬಂದ ನೆಲೆಸಿದ ಮೇಲೆ 'ರಾಯಮ್ಮ' ಎಂಬ ಹೆಸರು ರೂಢಿಯಲ್ಲಿ ಬಂದಂತೆ ತೋರುತ್ತದೆ"[೨]. ರಾಯಮ್ಮನ ವಚನಗಳು ದೊರೆತದ್ದು ಒಂದನೂರಾ ಹದಿನಾರು, ವಚನಗಳ ಅಂಕಿತ "ಅಮುಗೇಶ್ವರ ಲಿಂಗ" ಎಂದಾಗಿದೆ.

ಸಾಧನೆಯ ಆರಂಭದಲ್ಲಿ ಭಕ್ತನಲ್ಲಿ ತಲೆದೋರುವ ಚಿತ್ತಚಾಂಚಲ್ಯ, ಅದನ್ನು ಮೀರಿಯೂ ಗುರಿ ತಲುಪಬೇಕೆಂಬ ಛಲ ರಾಯಮ್ಮನ ವಚನಗಳಲ್ಲಿ ಕಂಡು ಬರುತ್ತದೆ.

ಉದಾ : **"ಎನ್ನ ದೇಹದ ದಗ್ಧವ ಮಾಡಯ್ಯ**
ಎನ್ನ ಕಾಯಕದಲ್ಲಿಪ್ಪ ಕರ್ಮದ ತೊಡೆಯಯ್ಯಾ
ಎನ್ನ ಭಾವದಲ್ಲಿಪ್ಪ ಭ್ರಮೆಯ ಜರೆಯಯ್ಯಾ
ನಾ ಹಿಡಿದ ಛಲವ ಬಿಡದೆ ನಡೆಸಯ್ಯಾ ಅಮುಗೇಶ್ವರ".

ತನು ಮನ ಶುದ್ಧಗೊಳಿಸಿ ಛಲ ಮೆರೆಸಬೇಕೆಂದು ಪರಮಾತ್ಮನಲ್ಲಿ ಮೊರೆ ಇಟ್ಟವರು ರಾಯಮ್ಮ.

ನಾವು ಹೆದರದೆ, ಅಂಜದೆ, ಕೈ ಹಿಡಿದ ಕಾರ್ಯದಲ್ಲಿ ಎಂತಹ ತೊಂದರೆ ಬಂದರೂ ಛಲದಿಂದ ಮುಂದೆ ಸಾಗಬೇಕೆಂದು ರಾಯಮ್ಮ ಹೇಳುತ್ತಾಳೆ. ಆತ್ಮವಿಶ್ವಾಸದಿಂದ ಅರಿವು ಕರಗತ ಮಾಡಿಕೊಂಡು ಜೀವನ ಸಾಗಿಸಿದ್ದಾಳೆ.

ವ್ಯಕ್ತಿಯ ಗುಣ–ಶೀಲಾದಿಗಳನ್ನು ಗಮನಿಸಿದೆ ಉಳ್ಳವರನ್ನು ಓಲೈಸುವುದು ಸಮಾಜದಲ್ಲಿನ ರೂಢಿ. ಇದನ್ನು ಸಹಿಸದ ರಾಯಮ್ಮ, "ಇಮ್ಮೈಯ ಸಿರಿವಂತರ ಕಂಡಡೆ ಪಾನಯ್ಯಾ ಇತ್ತ ಬನ್ನಿ

೨. ಶರಣ ಸೊಲ್ಲಾಪುರ : ಸಂ. ಗುರಲಿಂಗಪ್ಪಾ ಧಟಾಲೆ : ಪುಟ ಸಂಖ್ಯೆ : ೧೨೦

ಎಂಬರಯ್ಯಾ ಕರ್ಮಿಗಳ ಕಂಡಡೆ ಕತ್ತ ಹಿಡಿದು ನೂಕೆಂಬಯ್ಯಾ" ಎಂದು ಸಮಾಜದ ಲೋಪದೋಷಗಳನ್ನು ಎತ್ತಿ ತೋರಿಸಿದ್ದಾಳೆ. ಸಮಾಜದಲ್ಲಿನ ಅನ್ಯಾಯ, ಅಸಮಾನತೆಗಳನ್ನು ಖಂಡಿಸಿ, ಸೌಜನ್ಯ ಸತ್‌ಶೀಲಗಳಿಗೆ ಪ್ರಾಧಾನ್ಯತೆ ಕೊಟ್ಟು ರಾಯಮ್ಮನ ಸಾಮಾಜಿಕ ಕಳಕಳಿ, ಇಲ್ಲಿ ವ್ಯಕ್ತವಾಗಿದೆ.

ರಾಯಮ್ಮನ ವಿಷಯ ನಿರೂಪಣೆಯಲ್ಲಿ ಪಶು-ಪಕ್ಷಿ-ಪ್ರಾಣಿಗಳ ಸಾಂಕೇತಿಕ ಬಳಕೆ. ಕಾಗೆಯ ಮರಿ ಕೋಗಿಲೆಯಾಗಬಲ್ಲುದೆ? ಆಡಿನ ಮರಿ ಆನೆಯಾಗಬಲ್ಲುದೆ? ಸೀಳನಾಯಿ ಸಿಂಹದ ಮರಿಯಾಗಬಲ್ಲುದೆ? ಎಂಬ ವಿಚಾರಗಳನ್ನು ತನ್ನ ವಚನಗಳಲ್ಲಿ ವಿವರಿಸಿದ್ದಾಳೆ.

ಒಟ್ಟಿನಲ್ಲಿ ರಾಯಮ್ಮನ ವಚನಗಳಲ್ಲಿ ಮೃದು ಮಧುರ ಭಾವಗಳ ಅಭಿವ್ಯಕ್ತಿಗೆ ಆಸ್ಪದ ದೊರೆತಿಲ್ಲ. ವಿಡಂಬನೆಯು ಆಕೆಯು ಬಹುತೇಕ ವಚನಗಳ ಮೂಲ ಆಶಯವಾದ್ದರಿಂದ ಸಹಜವಾಗಿಯೇ ವ್ಯಂಗೋಕ್ತಿಗೆ ಪ್ರಾಧಾನ್ಯತೆ ಸಂದಿದೆ. ಅವಳ ಭಾಷೆಯ ಒರಟುತನವೇ ಅವಳ ಅಭಿವ್ಯಕ್ತಿಗೆ ನಾವೀನ್ಯತೆಯನ್ನು ತರುತ್ತದೆ ಎಂದು ನಾವು ಹೇಳಬಹುದು.

೨.೪ ಹಾವಿನಾಳ ಕಲ್ಲಯ್ಯ :

೧೨ ನೇ ಶತಮಾನದಲ್ಲಿ ಆಗಿಹೋದ ಶಿವಶರಣ ಹಾವಿನಾಳ ಕಲ್ಲಯ್ಯ. ಇವನ ತಂದೆ ಶಿವಯ್ಯ ಮತ್ತು ಸೋಮವ್ವ. ಅವರಿಗೆ ಬಹಳ ದಿನಗಳವರೆಗೆ ಮಕ್ಕಳಾಗಲಿಲ್ಲ. ಆದುದರಿಂದ ಹಾವಿನಾಳದ ಗ್ರಾಮದೇವತೆಗೆ ಹರಕೆಹೊತ್ತುಕೊಂಡರು. ಆಗ ಗಂಡು ಮಗುವಿನ ಜನ್ಮವಾಯಿತು. ಅವನೇ ಹಾವಿನಾಳ ಕಲ್ಲಯ್ಯ ಆತನು ಬಾಲ್ಯದಿಂದಲೇ ಶಿವಭಕ್ತ ಸಂಪನ್ನಾಗಿ ಬೆಳೆದನು.

ಹಾವಿನಾಳ ಕಲ್ಲಯ್ಯನನ್ನು ಕುರಿತು ಹರಿಹರ ರಗಳೆ ರಚಿಸಿದ್ದಾನೆ. ರೇವಣಸಿದ್ಧ, ಸಿದ್ಧರಾಮರ ಸಂಪರ್ಕ, ಸಾನಿಧ್ಯ ಪಡೆದಿದೆ. ಕಲ್ಲಯ್ಯ ಸಕಲ ಜೀವಿಗಳಿಗೆ ಲೇಸನೆ ಬಯಸಿದ ಪರಮಶಿವ ಭಕ್ತನಾಗಿದ್ದನು. ಬಾಲ್ಯದಿಂದಲೂ ಕಲ್ಲಯ್ಯ ಶಿವನನ್ನು ಪೂಜಿಸುವುದು, ಧ್ಯಾನ ಮಾಡುವುದರಲ್ಲಿಯೇ ಅವನಿಗೆ ಸಂತೋಷ. ಎಲ್ಲ ಮಕ್ಕಳಂತೆ ಕಲ್ಲಯ್ಯ ಆಟ ಪಾಠಗಳಲ್ಲಿ ತೊಡಗುತ್ತಿರಲಿಲ್ಲ. ಸದಾ ದೇವರಧ್ಯಾನದಲ್ಲಿ ಇರುತ್ತಿದ್ದನು. ಕಲ್ಲಯ್ಯ ದೊಡ್ಡವನಾದ ಮೇಲೆ ತಂದೆಯ ಕೆಲಸದಲ್ಲಿ ಸಹಕಾರಿಯಾಗುತ್ತಾನೆ ಎನ್ನುವ ಮಾತು ಸುಳ್ಳಾಗುತ್ತದೆ.

ಆಗ ಹಾವಿನಾಳದಿಂದ ಬಹು ಸಮೀಪದಲ್ಲಿರುವ ಮಂಗಳವಾಡದಲ್ಲಿ ಬಿಜ್ಜಳನು ರಾಜ್ಯಭಾರ ಮಾಡುತ್ತಿದ್ದನು. ಆತನು ಒಮ್ಮೆ ಶಿವಯ್ಯನಿಗೆ ಚಿನ್ನದ ಆಭರಣಗಳನ್ನು ಮಡಿಕೊಡುವಂತೆ ಕೇಳಿದನು. ಆದಾಗಲೇ ಆ ಅಕ್ಕಸಾಲಿಗ ವಿದ್ಯೆಯನ್ನು ಕರಗತ ಮಾಡಿಕೊಂಡ ಕಲ್ಲಯ್ಯನಿಗೆ ಆತನು ಹೇಳಿದನು. ಆದರೆ ಶಿವಭಕ್ತ ಧ್ಯಾನಗಳಲ್ಲಿ ಸದಾ ಮಗ್ನನಾಗಿರುತ್ತಿದ್ದ ಕಲ್ಲಯ್ಯ ಅದನ್ನು ಮಾಡಲು ಒಪ್ಪಲಿಲ್ಲ. ಆಗ ಶಿವಯ್ಯ ಮಗನಿಗೆ ತಿಳಿಹೇಳಿದರು ಕೇಳದಿರಲು, ಕೋಪದಿಂದ ಹೊಡೆದನು. ಇದರಿಂದ ಅತ್ಯಂತ ನೊಂದುಕೊಂಡು ಕಲ್ಲನಾಥನ ದೇವಾಲಯಕ್ಕೆ ಹೋಗಿ ಸುರಗಿಯಿಂದ ಹೊಟ್ಟೆಯನ್ನು ತಿವಿದುಕೊಂಡನು. ಆತನ ಶಿವಭಕ್ತಿ ನಿಷ್ಠೆಗೆ ಮೆಚ್ಚಿ ಕಲ್ಲಿನಾಥನು ಕಾಪಾಡಿದವನಷ್ಟೇ ಅಲ್ಲ. 'ಸಿದ್ಧರೇವಣದೇವನಣುಗನೆಂದೆನಿಸಿದ ಅಗಾಧ ಜ್ಞಾನಿ ರುದ್ರಮುನಿದೇವರ ಶಿಷ್ಯನಾಗು' ಎಂದು ಹೇಳಿದನು. ಅದರಂತೆ ಅವನು ಮಾಸನೂರಿಗೆ ಹೋಗಿ ರೇವಣಸಿದ್ಧರ ಕರುಣೆ ಪಡೆದು, ರುದ್ರಮುನಿದೇವರಿಂದ ದೀಕ್ಷೆಯನ್ನು ಪಡೆದನು. ಶಿವಲಿಂಗ ಪೂಜೆಗೈಯುತ್ತ ಮೈಮರೆತಾಗ ಕಲ್ಲಯ್ಯನಿಗೆ ಹಾವು ಕಚ್ಚಿ ಅದೇ ಸಾಯಲು, ಆತನು ಆರ್ತನಾಗಿ ಶಿವನಲ್ಲಿ ಮೊರೆಯಿಟ್ಟು ಹಾವನ್ನು ಬದುಕಿಸಿದನು. 'ಸಕಲಜೀವಾತ್ಮರಿಗೆ ಲೇಸ ಬಯಸಬೇಕೆಂಬ ಶರಣವಾಣಿ' ಇಲ್ಲಿ ಸಾರ್ಥಕವಾಗಿದೆ.

ಶಿವಯ್ಯ ಕಲ್ಲಯ್ಯನಿಗೆ ಮದುವೆ ಮಾಡಲು ಯೋಚಿಸಿದಾಗ ಆತನು ನಿರಾಕರಿಸಿದನು. ಸೊನ್ನಲಿಗೆಯ ಸಿದ್ಧರಾಮನ ಅಪೂರ್ವ ವ್ಯಕ್ತಿತ್ವ, ಸಾಧನೆ ಆತನನ್ನು ಆಕರ್ಷಿಸಿತು. ಅದಕ್ಕಾಗಿ ಆತನು ತನ್ನೂರನ್ನು ಬಿಟ್ಟು ಸೊನ್ನಲಿಗೆಗೆ ಬಂದು, ಸಿದ್ಧರಾಮನ ಶಿಷ್ಯನಾದನು. ಅಲ್ಲಿ ಶಿವಾನುಭವ ಗೋಷ್ಠಿಗಳನ್ನು ನಡೆಸುತ್ತ ಸತ್ಕಲಾಕ್ಷೇಪ ಗೈಯುತ್ತಿರುವಾಗ ಕಲ್ಲಯ್ಯನು ಶಿವಭಕ್ತೆಯೊಬ್ಬಳಲ್ಲಿ ಅನುರಕ್ತನಾದನು. ಅದನ್ನು ತಿಳಿದು ಸಿದ್ಧರಾಮನು ನಸುನಕ್ಕು "ಭಕ್ತನ ಮನ ಹೆಣ್ಣಿನೊಳಗಾಡದೆ ವಿವಾಹವಾಗಿ ಕೂಡುವುದು, ಭಕ್ತನ ಮನ ಮಣ್ಣಿನೊಳಗಾಡದೆಕೊಂಡು ಆಲಯವ ಮಾಡುವುದು, ಭಕ್ತನ ಮನ ಹೊನ್ನಿನೊಳಗಾಡದೆ ಬಳಲಿ ದೊರಕಿಸುವುದು" ಎಂಬ ವಚನವನ್ನು ನುಡಿದು ಒಪ್ಪಿಗೆಯನ್ನಿಯಲು, ಕಲ್ಲಯ್ಯನು ಲಗ್ನವಾದನು. ಆ ದಂಪತಿಗಳಿಗೆ ಕಲ್ಲವ್ವೆಯೆಂಬ ಶಿವಭಕ್ತಿನಿಷ್ಠಳಾದ ಮಗಳು ಹುಟ್ಟಿ ಬೆಳೆದು ದೊಡ್ಡವಳಾದಳು.

ಒಮ್ಮೆ ಕಲ್ಲವ್ವೆ ಲಿಂಗಾರ್ಚನೆಗೆಂದು ನೀರು ತುಂಬಿಕೊಂಡು ಬರುವಾಗ, ಬೀದಿಯಲ್ಲಿ ಸೋಮಯಾಜಗಳ ಸ್ಪರ್ಶವಾಗಲು, ಅವಳು ಹರಿವಿಯನ್ನೊಡೆದಳು. ಇದರಿಂದ ಕೋಪಗೊಂಡ ವಿಪ್ರರು ಕಲ್ಲಯ್ಯನ ಮುಂದೆ ಹೇಳಿ ವಾದಕ್ಕಿಳಿದು ಆಗ ಆತನು ನಾಯಿಯಿಂದ ವೇದವನ್ನು ಓದಿಸಿದನು. "ಜ್ಞಾನೇಶ್ವರನು ಕೋಣನಿಂದ ವೇದವನ್ನು ಓದಿಸಿದ್ದು ನಿಜವಾದರೆ, ಕಲ್ಲಯ್ಯನಾಗಲಿ ಕಲ್ಲಯ್ಯನಂತಹ ಬೇರೊಬ್ಬ ಶರಣನಾಗಲಿ ನಾಯಿಯಿಂದ ವೇದವನ್ನೋದಿಸಿದ್ದು ಸುಳ್ಳೆನ್ನುವುದೇಕೆ ಎಂದಿದ್ದಾರೆ, ಸಿಂಪಿಲಿಂಗಣ್ಣನವರು.

ಕಲ್ಲಯ್ಯನು ಸುಮಾರು ೧೦೨ ವಚನಗಳು ದೊರೆತಿವೆ ಅವುಗಳಲ್ಲಿ –

ಉದಾ : **"ಅತ್ಯಾಶೆಯೆಂಬುದು ಪಾಪ, ಬೇರೆ ಪಾಪವೆಂಬುದಿಲ್ಲ, ಕಂಡಿರಾ ಅಯ್ಯಾ,**
ಪರಿಣಾಮವೆಂಬುದೆ ಪರಮಾನಂದ, ಬೇರೆ ಪರಲೋಕವಿಲ್ಲ, ಕಂಡಿರಾ ಅಯ್ಯಾ,
ಇಹಪರದಾಶೆಯಿಲ್ಲದಿಹುದೆ ಶಿವಯೋಗ.
ಮಹಾಲಿಂಗ ಕಲ್ಲೇಶ್ವರ ಬಲ್ಲ, ಸಿದ್ಧರಾಮನ ಪರಿಯ"

ಎಂದು ರಚಿಸಿದ್ದಾನೆ.

೨.೫ ದೇಶಿಕೇಂದ್ರ ಸಂಗನಬಸಯ್ಯ :

ವಚನ ಸಾಹಿತ್ಯದ ದ್ವಿತೀಯ ಘಟ್ಟದಲ್ಲಿ ಬರುವ ವಚನಕಾರರಲ್ಲಿ ದೇಶಿಕೇಂದ್ರ ಸಂಗನಬಸವಯ್ಯರು ಒಬ್ಬರಾಗಿದ್ದಾರೆ. "೧೫–೧೬ ನೆಯ ಶತಮಾನದ ಕಾಲದಲ್ಲಿ ಬಸವಾದಿ ಶರಣರ ವಚನ ಸಾಹಿತ್ಯದ ಸಂಪಾದನೆ, ಸಂಕಲನ, ವಿಂಗಡಣೆ, ವ್ಯಾಖ್ಯಾನ, ಟೀಕೆ ಮತ್ತು ಸಂಪಾದನೆ ಇವು ಧರ್ಮದ ಪುನರುಜ್ಜೀವನಕ್ಕಾಗಿ ಕೈಕೊಂಡ ಕಾರ್ಯಗಳಾಗಿವೆ"[೩]. ೧೨ ನೇ ಶತಮಾನದಲ್ಲಿಯ ವಚನಕಾರ ವಚನಗಳನ್ನು ಮತ್ತೊಮ್ಮೆ ಜನರ ಮುಂದಿಡುವ ಕಾಯಕ ದೇಶಿಕೇಂದ್ರ ಸಂಗನಬಸವಯ್ಯನವರು ಮಾಡಿದ್ದಾರೆ.

ಅಕ್ಕಲಕೋಟ ತಾಲ್ಲೂಕಿನ ಕರಜಗಿ ಗ್ರಾಮದಲ್ಲಿ ದೇಶಿಕೇಂದ್ರ ಸಂಗನಬಸವಯ್ಯನವರ ವಚನಗಳ ಕಟ್ಟು ದೊರೆತಿದೆ. ಆದ್ದರಿಂದ ಅವರು ಕರಜಗಿಯವರೇ ಆಗಿರಬಹುದು. ಕರಜಗಿಯ ವಿರಕ್ತಮಠದ ಪರಂಪರೆಯ ಹೆಸರಿನಲ್ಲಿ ಇರುವ ಸಂಗನಬಸವಯ್ಯ ಎಂಬ ಹೆಸರು, ಅವರು ಆ ಮಠದ ಕರ್ತೃ ಎಂಬುದನ್ನು ರುಜುವಾತುಪಡಿಸುತ್ತದೆ. ಕರಜಗಿ ಮತ್ತು ಸುತ್ತಮುತ್ತಲಿನ ಆಧ್ಯಾತ್ಮಿಕ ಪರಿಸರಕ್ಕೆ ಮನಸೋತು ಅವರು ಕರಜಗಿ ಮಠದಲ್ಲಿ ನೆಲೆನಿಂತಿರಬಹುದು. ಇಲ್ಲಿಯವರೆಗೆ ಅವರ ಹೆಸರಿನಲ್ಲಿ ಒಟ್ಟು ೧೨೪೨ ವಚನಗಳು ದೊರೆತಿವೆ. 'ಗುರುನಿರಂಜನ ಚನ್ನಬಸವಲಿಂಗ' ಎಂಬುದು ಅವರ ವಚನಗಳ ಅಂಕಿತವಾಗಿದೆ.

ಉದಾಹರಣೆಗೆ ಒಂದು ವಚನ –

ಹಮ್ಮಿಲ್ಲದೆ ಬಿಮ್ಮಲ್ಲದೆ ಸೊಮ್ಮಿಲ್ಲದೆ
ನಿರ್ಮಲದ ನಿಲುವಿಂಗೆ ಕರುಹು ನಿಂದೆಯ್ದಿ ಬಂದ
ಸ್ತುತಿ ನಿಂದೆ ಅಪವಾದ ಬಾಧೆಗೆ
ಹಿಗ್ಗದೆ ಕುಗ್ಗದೆ ನೋಯದೆ ಬೇಯದೆ

---

೩. ಶರಣ ಸೊಲ್ಲಾಪುರ : ಪುಟ ಸಂಖ್ಯೆ : ೧೪೧

ಲಿಂಗವಿನೋದವೆಂದು ನಿತ್ಯಾನಿಜಾನಂದವಾಗಿರ್ದ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ ॥ ೬೯ ॥

ಎನ್ನವಂಥ ವಿಶಾಲ ಹೃದಯದ ಉದಾರ, ಸ್ಥಿತಿಪ್ರಜ್ಞಾ ಸ್ವಭಾವ ಅವರದು.

"ಸಂಗನಬಸವಯ್ಯನವರು ೧೨ ನೇ ಶತಮಾನದ ಶರಣರ ವಚನ ಸಾಹಿತ್ಯದಿಂದ ಪ್ರಭಾವಿತರಾಗಿ ಅಪ್ಪಟ ವೀರಶೈವ ಧರ್ಮದ ತತ್ವಗಳ ಅನುಯಾಯಿಯಾಗಿದ್ದಾರೆ. ಪುರಾತನರ ಅನುಭಾವದ ಬೆಳಗಿನಲ್ಲಿ ಮುನ್ನಡೆದಿದ್ದಾರೆ. ಅವರು ಶರಣ ಸಾಹಿತ್ಯವನ್ನು ಗಾಢವಾಗಿ ಅಧ್ಯಯನ ಮಾಡಿದ್ದಾರೆಂಬುದರಲ್ಲಿ ಎರಡು ಮಾತಿಲ್ಲ. ಅವರ ಪರಂಪರೆಯಂತೆ ಷಟಸ್ಥಲ ಮಾರ್ಗದಲ್ಲಿಯೇ ವಚನಗಳನ್ನು ರಚಿಸಿದ್ದಾರೆ"[೪]. ಈ ವಿಚಾರದ ಮೇಲಿಂದ ಅವರು ಬಸವಣ್ಣನವರ ಆಚಾರ – ವಿಚಾರಗಳನ್ನು ಅರಿತು ಮುಂದೆ ಸಾಗಿದ್ದಾರೆ.

ದೇಶಿಕೇಂದ್ರ ಸಂಗನಬಸವಯ್ಯನವರು ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ, ಷಟಸ್ಥಲಮಾರ್ಗ, ಭಕ್ತಸ್ಥಲ – ಮಹೇಶ್ವರಸ್ಥಲ, ಐಕ್ಯಸ್ಥಲ, ಶಿವಯೋಗ, ಗುರು–ಜಂಗಮ–ಲಿಂಗ–ಪಾದೋದಕ–ಪ್ರಸಾದ, ವಿಭೂತಿರುದ್ರಾಕ್ಷಿ, ಮಂತ್ರ, ಪಂಚಾಚಾರ, ಲಿಂಗಾಚಾರ, ಸದಾಚಾರ, ಗಣಾಚಾರ, ಶಿವಾಚಾರ ಮುಂತಾದ ವಿಚಾರಗಳನ್ನು ಕುರಿತು ಜನಸಾಮಾನ್ಯರಿಗೆ ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಅದೇ ತೆರನಾಗಿ ವೀರಶೈವ ಧರ್ಮದ ತತ್ವಗಳನ್ನು ಕುರಿತು ಹೇಳಿದ್ದಾರೆ.

ಈ ಮೇಲಿನ ಎಲ್ಲ ಶಿವಶರಣರು ಸೊನ್ನಲಗಿಯ ಪರಿಸರದಲ್ಲಿ ಬಾಳಿ ಬೆಳೆದವರು. ಅವರೊಂದಿಗೆ ಗಜೇಶ ಮಸಣಯ್ಯ ಹಾಗೂ ಮಸಣಮ್ಮನವರು ಇದ್ದು, ಜೀವನ ಸಾಗಿಸಿ ಕಲ್ಯಾಣ ಕ್ರಾಂತಿಯಲ್ಲಿ ಭಾಗವಹಿಸಿದ್ದಾರೆ.

---

೪. ದೇಶಿಕೇಂದ್ರ ಸಂಗನ ಬಸವಯ್ಯ : ಜಿ. ಎಸ್. ಸ್ವಾಮಿ : ಪುಟ ಸಂಖ್ಯೆ : ೨೦

ಅಧ್ಯಾಯ – ೩

ಗಜೇಶ ಮಸಣಯ್ಯನ ಚಾರಿತ್ರಿಕ ಸಂಗತಿಗಳು

ಅಧ್ಯಾಯ – ೩

ಗಜೇಶ ಮಸಣಯ್ಯನ ಚಾರಿತ್ರಿಕ ಸಂಗತಿಗಳು

೧೨ ನೇ ಶತಮಾನದಲ್ಲಿ ಬಸವಣ್ಣನವರು ಪ್ರಾರಂಭಿಸಿದ ಸಾಮಾಜಿಕ ಹಾಗೂ ಧಾರ್ಮಿಕ ಚಳುವಳಿಗಳಲ್ಲಿ ಪಾಲ್ಗೊಂಡು ಅನುಭವ ಮಂಟಪದ ಗೋಷ್ಠಿಗಳಲ್ಲಿಯೂ ಪಾಲ್ಗೊಂಡು ಹಲವು ವಚನಗಳನ್ನು ರಚನೆ ಮಾಡಿದ ಕ್ರಿಯಾಶೀಲ ಸದಸ್ಯರಲ್ಲಿ "ಲಿಂಗಮಧ್ಯೆ ಜಗತ್ ಸರ್ವಂ" ತತ್ವದ ಪತಾಕೆಯನ್ನು ಎತ್ತಿ ಹಿಡಿದ ಶರಣ ಗಜೇಶ ಮಸಣಯ್ಯನು ಒಬ್ಬನಾಗಿದ್ದಾನೆ.

ಗಜೇಶ ಮಸಣಯ್ಯನ ಜೀವನ ಚರಿತ್ರೆಗೆ ಸಂಬಂಧಪಟ್ಟ ಅಂಶಗಳು ಬಹಳ ಕಡಿಮೆ ದೊರೆತಿವೆ. ಆದರೂ ವಿವಿಧ ಕವಿಗಳು ಹಾಗೂ ಲೇಖಕರು ಹೇಳಿದಂತೆ ಆತನ ಜನ್ಮಸ್ಥಳ ಕರಜಗಿ ಎಂದು ತಿಳಿದು ಬರುತ್ತದೆ. ಗಣಸಹಸ್ರನಾಮದಲ್ಲಿ ಬಸವ ಸಮಕಾಲೀನವರ ಜೊತೆ ಇವನು ಸ್ತುತ್ಯಗೊಂಡಿರುವದರಿಂದ ಇವನ ಕಾಲ ಸುಮಾರು ೧೧೬೦ ಎಂದು ಹೇಳಲಾಗಿದೆ.

"ಮಸಣಯ್ಯನ ಸ್ಥಳವನ್ನು ಕುರಿತಂತೆಯೂ ಏಕಾಭಿಪ್ರಾಯವಿಲ್ಲ. ವೀರಶೈವ ಪುರಾಣಗಳಲ್ಲಿ ಅವನ ಸ್ಥಳ 'ಕರಜಿಗೆ' ಎಂದು ಹೇಳಲಾಗಿದೆ. ಈಗ ಕರ್ನಾಟಕದಲ್ಲಿ ಈ ಹೆಸರಿನ ಮೂರು ಊರುಗಳಿವೆ. ಒಂದು ಧಾರವಾಡ ಜಿಲ್ಲೆಗೆ ಸೇರಿದ ಹಾವೇರಿ ತಾಲ್ಲೂಕಿನಲ್ಲಿ ವರದಾ ನದಿಯ ದಂಡೆಯ ಮೇಲಿರುವ ಕರಜಿಗೆ. ಮತ್ತೊಂದು ವಿಜಾಪೂರ ಜಿಲ್ಲೆಯ ಅಕ್ಕಲಕೋಟೆ ಸಂಸ್ಥಾನದ ಕರಜಿಗೆ. ಇನ್ನೊಂದು ಧಾರವಾಡ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಹಿರೇಹಳ್ಳಿಯ ಸಮೀಪದಲ್ಲಿರುವ ಕರಜಿಗೆ. ಈ ಮೂರಲ್ಲಿ ಮಸಣಯ್ಯನ ಸ್ಥಳ ಯಾವುದು"[೧]? ಎಂಬ ವಿಚಾರವನ್ನು ಕುರಿತು ವಿವಿಧ ವಿದ್ವಾಂಸರ ವಿಚಾರ ಸರಣಿ ಹೀಗಿದೆ.

ಡಾ॥ ಫ. ಗು. ಹಳಕಟ್ಟಿಯವರು 'ಕನ್ನಡನಾಡಿನಲ್ಲಿ ಎರಡು ಕರಜಿಗೆ ಗ್ರಾಮಗಳಿವೆ. ಇವುಗಳಲ್ಲಿ ಅಕ್ಕಲಕೋಟೆ ಸಂಸ್ಥಾನದಲ್ಲಿಯ ಕರಜಿಗೆಯು ಮಸಣಯ್ಯನದೆಂದು ನಮಗೆ ತೋರುತ್ತದೆ. ಈಚೆಗೆ ಪ್ರಸಿದ್ಧವಾದ ಶಿಲಾಹಾರರ ಒಂದು ಶಿಲಾಗ್ರಾಮ ಶಾಸನದಿಂದ ಮಸಣಯ್ಯನ ಇಷ್ಟ ದೇವತೆಯಾದ 'ಗಜೇಶ್ವರ' ದೇವಾಲಯವು ಈ ಕರಜಿಗೆಯಲ್ಲಿಯೇ ಇದ್ದುದ್ದು ಗೊತ್ತಾಗುತ್ತದೆ. ಇದಲ್ಲದೇ ಈ ಗ್ರಾಮದಲ್ಲಿ

೧. ಬಸವೇಶ್ವರ ಸಮಕಾಲೀನರು : ಪುಟ ಸಂಖ್ಯೆ : ೨೫೦

'ಗಜೇಶ್ವರ' ಎಂಬ ಹೆಸರಿನ ದೇವಾಲಯವು ಈಗಲೂ ಇರುತ್ತದೆ. ಈ ಗ್ರಾಮದಿಂದ ಪೂರ್ವಕ್ಕೆ ೪೦ ಮೈಲುಗಳ ಮೇಲೆ 'ಮುನವಳ್ಳಿ' ಎಂಬ ಗ್ರಾಮವಿದ್ದು ಅಲ್ಲಿ ಮಸಣಯ್ಯನ ದೇವಾಲಯವು ಉಂಟು. ಇಲ್ಲಿ ಮಸಣಯ್ಯ ಕೆಲಕಾಲ ವಾಸಿಸಿರಬಹುದೆಂದು ತೋರುತ್ತದೆ. ಈ ಗ್ರಾಮದಿಂದ ೬ ಮೈಲುಗಳ ಮೇಲೆ 'ತೊರೆ' ಅಥವಾ 'ಬೆಣ್ಣೆತೊರೆ' ಎಂಬ ಹೆಸರಿನ ಒಂದು ದೊಡ್ಡ ಹಳ್ಳವು ಹರಿಯುತ್ತದೆ. ಮಸಣಯ್ಯನ ಲಿಂಗ ಪೂಜೆಗೋಸ್ಕರ ಕುಳಿತ ನದಿಯು ಇದೇ ಆಗಿರಬಹುದೆಂದು ತೋರುತ್ತದೆ. ಇವೆಲ್ಲ ಸಂಗತಿಗಳನ್ನು ನಿರೀಕ್ಷಿಸಿದಲ್ಲಿ ಮಸಣಯ್ಯನ ಗ್ರಾಮವು ಅಕ್ಕಲಕೋಟೆಗೆ ಸಮೀಪವಿರುವ ಕರಜಿಗೆಯೇ ಇರುತ್ತದೆಂದು ತೋರುತ್ತದೆ ಎಂದು ಹೇಳಿದ್ದಾರೆ.[೨]

ಡಾ|| ಎಂ. ಎಂ. ಕಲಬುರ್ಗಿ ಅವರು ಧಾರವಾಡ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಹಿರೇಹಳ್ಳೀ ಗ್ರಾಮದಲ್ಲಿ ದೊರೆತ ಶಾಸನವೊಂದರಲ್ಲಿ ಬರುವ 'ಗಜೇಶ್ವರ' ಹೆಸರಿನ ದೇವಾಲಯದ ಉಲ್ಲೇಖವನ್ನು ಗಮನಿಸಿ ಗಜೇಶ ಮಸಣಯ್ಯನು ಬಹುಶಃ ಈ ಊರಿನ ದೇವರ ಭಕ್ತನಾಗಿರಬೇಕು ಎಂದು ಊಹಿಸಿದ್ದಾರೆ. ಅಲ್ಲದೇ ಅವರು ಮುಂದುವರೆದು ಶಾಸನೋಕ್ತ ದೇವರ ಪ್ರತಿಷ್ಠಾಪನೆಯ ಕಾಲ ಕ್ರಿ. ಶ. ೧೧೨೧. ಇದರಿಂದ ಕಲ್ಯಾಣದ ಕ್ರಾಂತಿಯ ಕಾಲದಲ್ಲಿ ಬಾಳಿದ ಮಸಣಯ್ಯನ ಕಾಲಕ್ಕೆ ವ್ಯತ್ಯಯ ಬರುವುದಿಲ್ಲ. ಮಸಣಯ್ಯನ ಊರು ಕರಜಿಗೆ ಎಂದು ವೀರಶೈವ ಪುರಾಣಗಳು ಹೇಳುತ್ತವೆ. ಕರಜಗಿ (ಸ್ಟೇಷನ್) ಹೆಸರಿನ ಗ್ರಾಮವೊಂದು ಹಿರೇಹಳ್ಳಿಗೆ ಸಮೀಪವಾಗಿ ೨೨ ಮೈಲುಗಳ ಅಂತರದಲ್ಲಿದೆ ಎಂದು ತಿಳಿಸಿ ಅಡಿಟಿಪ್ಪಣೆಯಲ್ಲಿ "ಅಕ್ಕಲಕೊಟ ತಾಲ್ಲೂಕಿನ ಕರಜಿಗೆಯಲ್ಲಿ ಶ್ರೀ ಸಿದ್ಧಗಜೇಶ್ವರ ಹೆಸರಿನ ದೇವಾಲಯವಿದೆಯೆಂದು ಹೇಳುವ ಶಾಸನ ಹಾಗೂ ಈ ಶಾಸನದ ಶಿಲ್ಪಗಳನ್ನು ಪರೀಕ್ಷಿಸಿ ಮಸಣಯ್ಯನ ಗ್ರಾಮವನ್ನು ಖಚಿತಪಡಿಸಿಕೊಳ್ಳಲು ಅವಕಾಶವಿದೆ ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ"[೩]. ಆದರೆ ಈಗ ನಾವು ವೀರಶೈವ ಪುರಾಣಗಳಲ್ಲಿ ಬರುವ ಮಸಣಯ್ಯನ ಕಥೆಯ ಪ್ರಕಾರ ಅಕ್ಕಲಕೋಟೆಯ ಸಂಸ್ಥಾನಕ್ಕೆ ಸೇರಿದ ಕರಜಿಗೆಯೇ ಮಸಣಯ್ಯನ ಸ್ಥಳವೆಂದು ನಿರ್ಧರಿಸಬೇಕಾಗುತ್ತದೆ. ಊರಿನಲ್ಲಿರುವ ಅವನ ಇಷ್ಟದೈವ ಗಜೇಶ್ವರ ದೇವಾಲಯ ಸಮೀಪದ ಮುನಹಳ್ಳಿಯಲ್ಲಿರುವ ಮಸಣಯ್ಯನ ಹೆಸರಿನ ದೇವಾಲಯ ಗುರುದರ್ಶನಕ್ಕೆ ಹೋಗುವಾಗ ಮಧ್ಯೆ ಲಿಂಗ ಪೂಜೆಗೆ ಕುಳಿತನೆಂದು ಹೇಳುವ 'ಬೆಣ್ಣೆತೊರೆ' ಇವೆಲ್ಲ ಮೇಲಿನ ನಿರ್ಧಾರಕ್ಕೆ ಪ್ರಬಲ ಅಂಶಗಳಾಗಿವೆ.

ವಿದ್ವಾಂಸರ ಅಭಿಪ್ರಾಯದಂತೆ ಗಜೇಶ ಮಸಣಯ್ಯನ ಕಾಲ ೧೧೬೦ ಎಂದು ಒಪ್ಪಿಕೊಳ್ಳಬೇಕು. ಅದೇ ರೀತಿಯಾಗಿ ಬಸವಣ್ಣನ ಸಮಕಾಲೀನವನೆಂದು ನಾವು ಹೇಳಬಹುದು. ಗಜೇಶ ಮಸಣಯ್ಯನ ನಿಲುಮೆಯನ್ನು ಕುರಿತು ಅವನ ವಚನ ಹೀಗಿದೆ. –

---

೨. ಶಿವಶರಣರ ಚರಿತ್ರಗಳು : ೨ ಪುಟ ಸಂಖ್ಯೆ : ೨೩೧ – ೧೪.

೩. ಅಂ+ಗಜೇಶ್ವರ ಮಸಣಯ್ಯ : ಕರ್ನಾಟಕ ಭಾರತಿ ೬–೭ : ಪುಟ ಸಂಖ್ಯೆ : ೧೨೯–೩೦

"ಎನ್ನ ಕರಸ್ಥಳವೇ ಬಸವಣ್ಣನಯ್ಯಾ
ಎನ್ನ ಮನಸ್ಥಳವೇ ಚೆನ್ನಬಸವಣ್ಣನಯ್ಯಾ
ಎನ್ನ ಭಾವಸ್ಥಳವೇ ಪ್ರಭುದೇವರಯ್ಯಾ
ಇಂತೆನ್ನ ಕರಮನಭಾವಂಗಳಲ್ಲಿ
ಇಷ್ಟಪ್ರಾಣ ಭಾವಂಗಳು ತಲ್ಲೀನವಾಗಿ
ಮಹಾಲಿಂಗ ಗಜೇಶ್ವರಾ ನಮ್ಮ ಶರಣರ ಘನವನು
ಎನ್ನ ಸರ್ವಾಂಗದಲ್ಲಿ ಕಂಡು ಪರಮಸುಖಿಯಾಗಿರ್ದೇನು"

ಎಂದು ಹೇಳುತ್ತಾನೆ. ಈ ವಚನದಿಂದ ಅವನ ಮನಸ್ಸು, ಭಾವನೆಯನ್ನು ನಾವು ತಿಳಿದುಕೊಳ್ಳಬೇಕು.

"ಗಜೇಶ ಮಸಣಯ್ಯನ ತಂದೆ-ತಾಯಿಗಳು ತಮ್ಮ ಆರಾಧ್ಯದೈವ 'ಸಿದ್ಧ ಗಜೇಶ್ವರ' ಹೆಸರನ್ನು ಆತನಿಗೆ ಇಟ್ಟಿರಬಹುದೆಂದು ಊಹಿಸಬಹುದಾಗಿದೆ. ಈಗ ಕರಜಗಿಯಲ್ಲಿರುವ 'ಸಿದ್ಧಗಜೇಶ್ವರ' ದೇವಸ್ಥಾನದ ಸುತ್ತಮುತ್ತ ಮಾಲಗಾರ ಸಮಾಜದವರು ಇರುತ್ತಿದ್ದು, ಅವರೆಲ್ಲರ ಅಡ್ಡ ಹೆಸರು 'ಗಜಾ' ಎಂದು ಇದೆ. ಇವರೆಲ್ಲ ಗಜೇಶ ಮಸಣಯ್ಯನ ವಂಶಜರು ಎಂದು ಊಹಿಸುವುದಾದರೆ ಗಜೇಶ ಮಸಣಯ್ಯ 'ಮಾಲಗಾರ' ಸಮಾಜಕ್ಕೆ ಸೇರಿದವನು ಎಂದಾಗುತ್ತದೆ"[೪].

ಗಜೇಶ ಮಸಣಯ್ಯನು ಹುಟ್ಟಿ ಬೆಳೆದದ್ದು ಕರಜಗಿಯಲ್ಲಾದರೂ ಸಹಿತ ಅವನ ಮುಂದಿನ ಜೀವನವೆಲ್ಲ ಕಳೆದದ್ದು ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಮುನವಳ್ಳಿ ಎಂಬ ಗ್ರಾಮದಲ್ಲಿ. ಗಜೇಶ ಮಸಣಯ್ಯನ ಕುರಿತು ರಚಿತವಾದ ಯಾವುದೇ ಗ್ರಂಥಗಳಲ್ಲಿ ಅವನ ವೈಯಕ್ತಿಕ ಜೀವನದ ವಿವರಗಳು ದೊರೆಯುವದಿಲ್ಲ. ಆದರೆ ಕ್ಷೇತ್ರ ಅಧ್ಯಯನದಿಂದ ಒಂದಿಷ್ಟು ಮಾಹಿತಿ ಲಭ್ಯವಾಗಿದ್ದು, ಅದರ ವಿವರಣೆ ಹೀಗಿದೆ.

ಗಜೇಶ ಮಸಣಯ್ಯನ ತಂದೆ-ತಾಯಿಗಳು ಬಾಲ್ಯದಲ್ಲಿಯೇ ತೀರಿಕೊಂಡರು. ಅನಾಥನಾದ ಆತ ಗುರು ಗಜೇಶ್ವರ ಬಳಿ ಇರುತ್ತಿದ್ದ. ಗುರುಗಳಿಗೆ ವಯಸ್ಸಾಯಿತು. ಗುರುಗಳು ಆತನಿಗೆ ಮುನವಳ್ಳಿಗೆ ಹೋಗಲು ಆಜ್ಞೆ ಮಾಡಿದರು. ಗುರುಗಳನ್ನು ಬಿಟ್ಟು ಹೋಗುವ ಮನಸ್ಸಿಲ್ಲದಿದ್ದರೂ ಗುರುಗಳ ಒತ್ತಾಯಕ್ಕೆ ಮಣಿದು ಮುನವಳ್ಳಿಗೆ ಹೋದ. ಅನಾಥನಾದ ಈತ 'ವಾಲೆ' ಎನ್ನುವವರ ಮನೆಯಲ್ಲಿ ಇರತೊಡಗಿದ. ಗಜೇಶ ಮಸಣಯ್ಯನು ಮದುವೆಯ ವಯಸ್ಸಿಗೆ ಬಂದ ಬಳಿಕ ಊರಿನವರೆಲ್ಲರ ಅಪೇಕ್ಷೆಯಂತೆ

೪. ಅಪ್ರಕಟಿತ ಲೇಖನ : ಜಿ. ಎಸ್. ಸ್ವಾಮಿ : ಪುಟ ಸಂಖ್ಯೆ : ೪೯.

ಅದೇ ಊರಿನ ಶಂಬುಲಿಂಗ ಸಂಗಮ್ಮ ದಂಪತಿಗಳ ಮಗಳಾದ ಮಸಣಮ್ಮನೊಂದಿಗೆ ವಿವಾಹವಾದ. ಕಡುಬಡವರಾದ ಇವರು ಕೂಲಿನಾಲಿ ಮಾಡಿ ಬದುಕುತ್ತಿದ್ದರು. ಒಮ್ಮೆ ಇವರ ಪರಿಸ್ಥಿತಿ ನೋಡಿ ಒಬ್ಬರು ಇವರ ಹೆಂಡತಿಗೆ ಹೆಚ್ಚಿಗೆ ಕೊಟ್ಟ ಕೂಲಿಯನ್ನು ಮಸಣಯ್ಯ ಮರಳಿ ಕೊಡಲು ಹೇಳಿದ. ಇದರಿಂದ ಅವನ ಪ್ರಾಮಾಣಿಕತೆ ಕಂಡು ಬರುತ್ತದೆ.

ಅಪ್ಪಟ ಲಿಂಗಪ್ರೇಮಿಯಾದ ಮಸಣಯ್ಯ ತನಗೆ ಹುಟ್ಟಿದ ಎರಡು ಮಕ್ಕಳನ್ನು ಭಸ್ಮ ಮತ್ತು ಲಿಂಗ ಇಲ್ಲವೆಂಬ ಕಾರಣಕ್ಕಾಗಿ ಬಾವಿಗೆ ಎಸೆದು ಹತ್ಯೆಗೈದ. ಅವನನ್ನು ಊರ ಜನರು ತುಂಬಾ ಟೀಕಿಸಿದರು. ಊರು ಬಿಟ್ಟು ಹೋಗಲು ಹೇಳಿದರು. ಊರಿನವರ ಅಪ್ಪಣೆಯಂತೆ ಮಸಣಯ್ಯ ಹೆಂಡತಿಯೊಂದಿಗೆ ಊರು ಬಿಟ್ಟು ಹೋಗಲು ನಿರ್ಧರಿಸಿದ. ಆದರೆ ಹೋಗುವುದೆಲ್ಲಿಗೆ? ಎಂಬ ಪ್ರಶ್ನೆ ಎದುರಾಯಿತು. ಈ ಹೊತ್ತಿಗಾಗಲೇ ಕಲ್ಯಾಣದಲ್ಲಿದ್ದ ಬಸವಣ್ಣನ ಕೀರ್ತಿ ದೂರ-ದೂರದವರೆಗೆ ಹಬ್ಬಿತ್ತು. ಆತನೂ ಅಲ್ಲಿಗೆ ಹೋಗಲು ನಿರ್ಧರಿಸಿದ. ಮುನವಳ್ಳಿಯನ್ನು ಬಿಟ್ಟು ಕಲ್ಯಾಣಕ್ಕೆ ಹೊರಟ. ಸುಮಾರು ಕಿ.ಮೀ. ದೂರ ಹೋಗುವಷ್ಟರಲ್ಲಿ 'ಬೆಣ್ಣೆತೊರೆ' ಎಂಬ ಹಳ್ಳ ಎದುರಾಯಿತು. ಅಲ್ಲಿಯ ನಿಸರ್ಗರಮ್ಯ ಪರಿಸರವನ್ನು ನೋಡಿ ಗಜೇಶ ಮಸಣಯ್ಯ ಭಾವುಕನಾದ. ಲಿಂಗಪೂಜೆಯನ್ನು ಮಾಡಿಕೊಳ್ಳಬೇಕೆಂಬ ಆಶೆಯನ್ನು ತಡೆಯಲಾಗಲಿಲ್ಲ. ಹಳ್ಳದ ಬದಿಯ ದಿನ್ನೆಯೊಂದರ ಮೇಲೆ ಕುಳಿತು ಲಿಂಗಪೂಜೆ ಆರಂಭಿಸಿದ. ಅಲ್ಲಿಯೇ ಹಳ್ಳದಲ್ಲಿ ಮಿಂದು, ಹಳ್ಳದ ದಂಡೆಯಲ್ಲಿಯ ಪುಷ್ಪಗಳನ್ನು ಎತ್ತಿಕೊಂಡು ಲಿಂಗಕ್ಕರ್ಪಿಸಿದ. ಶಿವಯೋಗ ಸಮಾಧಿಯನ್ನು ಮುಳುಗಿದ. ಅಷ್ಟರಲ್ಲಿ ಮಳೆ ಬರಲಾರಂಭಿಸಿತು. ಮಳೆ, ಗುಡುಗು, ಸಿಡಿಲು, ಮಿಂಚುಗಳಿಂದ ಕೂಡಿ ರಭಸದ ಮಳೆಯಿಂದಾಗಿ ಬೆಣ್ಣೆತೊರೆ ಹಳ್ಳಕ್ಕೆ ಮಹಾಪೂರ ಬಂದಿತು. ಹಳ್ಳದ ನೀರು ಗಜೇಶ ಮಸಣಯ್ಯನನ್ನು ಸುತ್ತುವರಿದು ಹರಿಯುತ್ತಿದ್ದು ಆತನ ಹತ್ತಿರ ಇಬ್ಭಾಗವಾಗಿ ಮತ್ತೆ ಮುಂದೆ ಕೂಡಿ ಹರಿಯಿತು. ಇಷ್ಟಾದರೂ ಸಹಿತ ಆತನಿಗೆ ಬಾಹ್ಯ ಪ್ರಪಂಚದ ಅರಿವು ಎಳ್ಳಷ್ಟು ಇರಲಿಲ್ಲ.

ರಭಸದ ಮಳೆ, ಸುತ್ತುವರಿದ ಹಳ್ಳದ ನೀರು ಇವುಗಳ ಪರಿವೆ ಇಲ್ಲದೇ ಲಿಂಗಪೂಜೆಗೆ ಕುಳಿತ ಶಿವಯೋಗ ಸಮಾಧಿಯಲ್ಲಿ ಮುಳುಗಿದ ಗಜೇಶ ಮಸಣಯ್ಯನನ್ನು ನೋಡಿದ ಜನ ಬೆರಗಾದರು. ಅವನ ಲಿಂಗಾಂಗ ಸಾಮರಸ್ಯದ ಕೀರ್ತಿ ಜನರ ಬಾಯಿಯಿಂದ ಬಾಯಿಗೆ ಬೆಂಕಿಯಂತೆ ಹಬ್ಬಿತು. ಅಲ್ಲಿಯವರೆಗೆ ಎಲೆಮರೆಯ ಕಾಯಿಯಂತೆ ಇದ್ದ ಗಜೇಶ ಮಸಣಯ್ಯ ಅನಂತರ ಲೋಕವಿಖ್ಯಾತನಾದ ಈ ಘಟನೆ ಅವನ ಕುರಿತು ರಚಿತವಾದ ಗ್ರಂಥಗಳಲ್ಲಿ ಹೇಳಲಾಗಿದೆ. ಲಿಂಗದಲ್ಲಿ ಮಗ್ನನಾದ ಮಸಣಯ್ಯನನ್ನು ಕುರಿತು ಹೀಗೆ ಹೇಳಿದ್ದಾರೆ.

“ಆಹಾ ಎನ್ನ ಸತ್ಯವೆ! ಆಹಾ ಎನ್ನ ನಿತ್ಯವೇ!
ಆಹಾ ಎನ್ನ ಪುಣ್ಯವೆ! ಆಹಾ ಎನ್ನ ಭಾಗ್ಯವೆ!
ಶಿವ ಶಿವ ಮಹಾದೇವ”
“ಎನ್ನ ಕುಲಗುರುವೆ ನೀ
ಎನ್ನ ವಿದ್ಯಾಗುರುವೆ
ಎನ್ನ ಭವಭವದಲ್ಲಿ ಬಿಡದ ಗುರುವೆ
ಎನ್ನ ದೀಕ್ಷಾ ಗುರುವೆ
ಎನ್ನ ಕರದೊಳಗಿರ್ದು ಏಕೆ ನುಡಿಯೆ!”
ಎನ್ನುತ್ತ ಭಾವಪರವಶನಾದ ಆತನಿಗೆ
‘ಓಂ ನಮಃ ಶಿವಾಯ’ ಎಂಬುದೇ ಮಂತ್ರವಾಯಿತು
‘ಓಂ ನಮಃ ಶಿವಾಯ’ ಎಂಬುದೇ ತಂತ್ರವಾಯಿತು
‘ಓಂ ನಮಃ ಶಿವಾಯ’ ಎಂಬುದೇ ಯಂತ್ರವಾಯಿತು
‘ಓಂ ನಮಃ ಶಿವಾಯ’ ಎಂಬುದೆ ವಶ್ಯ
‘ಓಂ ನಮಃ ಶಿವಾಯ’ ಎಂಬುದೆ ಸಕಲ ಸಿದ್ಧಿಯಾಯಿತು”[೫].

ಗಜೇಶ ಮಸಣಯ್ಯ ದಂಪತಿಗಳು ಮುಂದೆ ಕಲ್ಯಾಣಕ್ಕೆ ಬಂದು ಅನುಭವ ಮಂಟಪದಲ್ಲಿ ಸಕ್ರೀಯವಾಗಿ ಪಾಲ್ಗೊಂಡರು. ಕೆಲವು ಕಾಲ ಕಳೆದು ನಂತರ ಮಸಣಯ್ಯನ ಪತ್ನಿ ಮತ್ತೆ ಗರ್ಭಿಣಿಯಾದಳು. ಪ್ರಸೂತಿಯ ನಂತರ ಗಂಡನು ಮತ್ತೆ ಶಿಶುಗಳನ್ನು ಕೊಂದರೆ ಹೇಗೆ ಎಂಬ ಕಳವಳ ಅವಳನ್ನು ಕಾಡುತ್ತಿತ್ತು. ಈ ಸಲ ಅವಳು ಅವಳಿ ಮಕ್ಕಳಿಗೆ ಜನ್ಮವಿತ್ತಳು. ಒಂದು ಗಂಡು ಹಾಗೂ ಇನ್ನೊಂದು ಹೆಣ್ಣು ಮಗು. ಆ ಮಕ್ಕಳಿಗೆ ನೀಲಕಂಠ ಮತ್ತು ಕಮಲವ್ವ ಎಂದು ನಾಮಕರಣ ಮಾಡಿದರು. ಮಕ್ಕಳು ಬೆಳೆದು ದೊಡ್ಡವರಾದರು. ಆದರೆ ಅದೇಕೋ ಅವರಿಬ್ಬರ ವಿವಾಹಕ್ಕೆ ಜೋಡಿ ಸಿಗಲಿಲ್ಲ. ಈ ಕುರಿತು ದಂಪತಿಗಳಿಬ್ಬರ ಬಸವಣ್ಣನ ಸಲಹೆ ಕೇಳಿದರು. “ನಿಮ್ಮ ಭಕ್ತಿಗೆ ಮೆಚ್ಚಿ ಸಾಕ್ಷಾತ್ ಶಿವ–ಪಾರ್ವತಿಯರೇ ನಿಮ್ಮ ಉದರದಲ್ಲಿ ಜನಸಿ ಬಂದಿದ್ದಾರೆ. ಲೌಕಿಕವಾಗಿ ಅವರಿಬ್ಬರು ಅಣ್ಣ–ತಂಗಿ ಎನಿಸಿದರೂ ಸಹಿತ ಶಿವ–ಪಾರ್ವತಿಯರಾದ ಅವರು ದಂಪತಿಗಳೇ ಆಗಿದ್ದಾರೆ. ಆದ್ದರಿಂದ ಅವರಿಗೆ ಬೇರೆ ಜೋಡಿ ಹುಡುಕಿ ಬೇರೆ–ಬೇರೆ ಮದುವೆ ಮಾಡುವುದಕ್ಕಿಂತ ಅವರಿಬ್ಬರ ಮದುವೆಯನ್ನೇ ಮಾಡುವುದು ಒಳ್ಳೆಯದು ಎಂದು ಬಸವಣ್ಣ ಹೇಳಿದನಂತೆ”[೬]. (ಅಣ್ಣ–ತಂಗಿಯರ ವಿವಾಹವನ್ನು ಸಮ್ಮತಿಸಿದ ಬಸವಣ್ಣ ಈ ವಿಧಾನ ನಂಬಲು ಕಷ್ಟವೆನಿಸಿದರೂ ಸಹಿತ ವೇದಕಾಲದಲ್ಲಿ ಇಂತಹ ವಿವಾಹ ಪದ್ಧತಿ ಜಾರಿಯಲ್ಲಿತ್ತು ಎಂಬುದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬಹುದು. ಕೊಂಡಿಮಂಚಣ್ಣ ಮುಂತಾದವರು

---

೫. ಗಜೇಶ ಮಸಣಯ್ಯ : ಎಸ್. ಎಸ್. ಭೂಸರಡ್ಡಿ : ಪುಟ ಸಂಖ್ಯೆ : ೧೪
೬. ಗಜೇಶ ಮಸಣಯ್ಯ : ಜಿ. ಎಸ್. ಸ್ವಾಮಿ : ಪುಟ ಸಂಖ್ಯೆ : ೫೦

ಈ ಮದುವೆಗೆ ವಿರೋಧಿಸಿದರು. ಸ್ವತಃ ಪ್ರಭುದೇವರು ಈ ಮದುವೆಯನ್ನು ತಡೆಯಲು ಮುಂದಾದಾಗ ಶಿವನು ಗುರುವಿನ ವೇಷದಲ್ಲಿ ಬಂದು 'ಈ ವಿವಾಹವನ್ನು ತಡೆಯಬೇಡ' ಎಂದು ಹೇಳಿದನಂತೆ. ಅಕ್ಷತೆಯ ನಂತರ ಮದುವೆ ಮಂಟಪದಲ್ಲಿ ವಧು–ವರ ಅಂದರೆ ಅಣ್ಣ–ತಂಗಿಯರ ರೂಪದಲ್ಲಿದ್ದ ಶಿವ–ಪಾರ್ವತಿಯರು ನೆರೆದ ಜನರಿಗೆ ತಮ್ಮ ನಿಜ–ರೂಪದರ್ಶನ ನೀಡಿ ಅದೃಶ್ಯರಾದರು.

ಕಲ್ಯಾಣ ಕ್ರಾಂತಿಯ ನಂತರ ಗಜೇಶ ಮಸಣಯ್ಯ ದಂಪತಿಗಳು ಮುನವಳ್ಳಿಗೆ ಬಂದರು. ಜನರಿಂದ ತಿರಸ್ಕೃತರಾಗಿ ಕಲ್ಯಾಣಕ್ಕೆ ಹೋದ ಮಸಣಯ್ಯನಿಗೆ ಮುನವಳ್ಳಿಯಲ್ಲಿ ಇರಲು ಮನಸ್ಸು ಬರಲಿಲ್ಲವೋ ಅಥವಾ ಕರಜಗಿಯಲ್ಲಿದ್ದ ತನ್ನ ಗುರುವಿನ ನೆನಪು ಮರುಕಳಿಸಿತೋ ಮಸಣಯ್ಯನಿಗೆ ಮತ್ತೆ ಕರಜಗಿಗೆ ಹೋಗುವ ಮನಸ್ಸಾಯಿತು. ಮುನವಳ್ಳಿಯಿಂದ ಕರಜಗಿಗೆ ಹೋಗಬೇಕೆನ್ನುವಷ್ಟರಲ್ಲಿ ಗುರುಗಳು ಲಿಂಗೈಕ್ಯರಾದ ಸುದ್ದಿ ತಿಳಿಯುತ್ತದೆ. ಗುರುವಿನ ನಿಧನದ ವಾರ್ತೆಯನ್ನು ಕೇಳಿದ ಮಸಣಯ್ಯನ ಮನಸ್ಸಿಗೆ ಆಘಾತವಾಯಿತು. ಸುದ್ದಿ ಕೇಳಿದ ಸ್ಥಳದಲ್ಲಿಯೇ ಆತನೂ ಲಿಂಗೈಕ್ಯನಾದನಂತೆ ಹಿಂದಿನಿಂದ ಬಂದ ಪತ್ನಿಯೂ ಇವರಿಬ್ಬರ ನಿಧನದ ಸುದ್ಧಿ ಕೇಳಿ ಅವಳೂ ಲಿಂಗೈಕ್ಯಳಾದಳು.

ಹೀಗೆ ಗಜೇಶ ಮಸಣಯ್ಯ ಕರಜಗಿಯಲ್ಲಿ ಹುಟ್ಟಿ ಮುನವಳ್ಳಿಯಲ್ಲಿ ವೈವಾಹಿಕ ಜೀವನ ನಡಸಿ ಕಲ್ಯಾಣದಲ್ಲಿ ಕೆಲವು ಕಾಲ ಕಳೆದು ಮತ್ತೆ ಮುನವಳ್ಳಿಗೆ ಬಂದು ಬದುಕಿನ ಕೊನೆಯುಸಿರು ಎಳೆಯುತ್ತಾನೆ. ಅವನ ಪತ್ನಿ ಅವನನ್ನು ನೆರಳಿನಂತೆ ಹಿಂಬಾಲಿಸುತ್ತಾಳೆ.

ಕಲ್ಯಾಣಕ್ಕೆ ಬಂದ ಗಜೇಶ ಮಸಣಯ್ಯ ದಂಪತಿಗಳು ಅನುಭವ ಮಂಟಪದಲ್ಲಿ ಸಕ್ರೀಯವಾಗಿ ಪಾಲ್ಗೊಂಡರು ಎಂಬುದರ ಬಗ್ಗೆ ಎರಡು ಮಾತಿಲ್ಲ. ಆದರೆ ಅವರು ಯಾವ ಕಾಯಕ ಮಾಡುತ್ತಿದ್ದರು ಎಂಬುದು ಮಾತ್ರ ಸ್ಪಷ್ಟವಾಗಿ ತಿಳಿದು ಬರುವುದಿಲ್ಲ. ಗಜೇಶ ಮಸಣಯ್ಯ ಮಾವುತನಾಗಿದ್ದ. ಈ ಮಾತಿಗೆ ಸಾಕಷ್ಟು ಆಧಾರಗಳು ದೊರೆಯುವುದಿಲ್ಲ.

ಇಲ್ಲಿಯವರೆಗೆ ಗಜೇಶ ಮಸಣಯ್ಯನ ೭೧ ವಚನಗಳು ದೊರೆತಿವೆ. ಅವನ ಅಂಕಿತನಾಮ 'ಮಹಾಲಿಂಗ ಗಜೇಶ್ವರ' ಎಂದಿದೆ. ಅವನ ಹೆಂಡತಿ ಮಸಣಮ್ಮನ ಹೆಸರಿನಲ್ಲಿ ಕೇವಲ ೯ ವಚನಗಳು ಮಾತ್ರ ದೊರೆತಿವೆ. ಗಜೇಶ ಮಸಣಯ್ಯನ ವಚನಗಳು ಭಾವಗೀತೆಗಳಾಗಿವೆ. ಅವನ ವಚನಗಳನ್ನು ಓದಿದರೆ ಇನ್ನೂ ನೂರಾರು ಸಂಖ್ಯೆಯಲ್ಲಿ ವಚನಗಳನ್ನು ಬರೆದಿರಬಹುದು ಎಂದು ಅನಿಸುತ್ತದೆ.

ಈಗ ಮುನವಳ್ಳಿಯಲ್ಲಿ ಗಜೇಶ ಮಸಣಯ್ಯನ ಹೆಸರು ಜನರ ಬಾಯಲ್ಲಿ 'ಮಸಣಸಿದ್ಧ' ಎಂದು ಉಳಿದಿದೆ. ಶರಣ ವಚನಕಾರನೆಂದು ಹೆಸರಾದ ಈತ ಈಗ ಗ್ರಾಮದೇವತೆ ಸಿದ್ಧಗಜೇಶ್ವರ

ದೇವಾಲಯ ಸದ್ಯ ಹಾಳು ದೇಗುಲ, ಮುನವಳ್ಳಿಯಲ್ಲಿ ಮಸಣಯ್ಯನ ಗುರುವಿನ ಸ್ವತಂತ್ರ ದೇವಾಲಯ ಹಾಳುಬಿದ್ದ ಸ್ಥಿತಿಯಲ್ಲಿದೆ. ಮಸಣಯ್ಯ ಲಿಂಗೈಕ್ಯ ಆದ ಸ್ಥಳದಲ್ಲಿ ಒಂದು ಗುಡಿ ಇದ್ದು, ಅದಕ್ಕೆ 'ಮುತ್ತ್ಯಾ ಮಸಣಯ್ಯ'ನ ಗುಡಿ ಎಂದು ಕರೆಯುತ್ತಾರೆ. ಇದರ ಮೇಲಿಂದ ಗಜೇಶ ಮಸಣಯ್ಯ ಮುಪ್ಪಾವಸ್ಥೆಯವರೆಗೆ ಬದುಕಿರಬಹುದು ಎಂದು ಊಹಿಸಬಹುದಾಗಿದೆ. ಮುನವಳ್ಳಿಯಲ್ಲಿ ಮಸಣಯ್ಯ ದಂಪತಿಗಳ ಸಮಾಧಿಗಳು ಇವೆ.

ಮುನವಳ್ಳಿಯಲ್ಲಿ ಈಗಲೂ ಹುಣ್ಣಿಮೆ, ಅಮವಾಸ್ಯೆ ಸೋಮವಾರ ಮತ್ತು ಚತುರ್ದಶಿಯ ದಿನ ಭಜನೆ ನಡೆಯುತ್ತದೆ. ಬಸವ ಜಯಂತಿಯನ್ನು ಆಚರಿಸಲಾಗುತ್ತದೆ. ಹನುಮ ಜಯಂತಿಯಂದು ಜಾತ್ರೆ ಆರಂಭವಾಗುತ್ತದೆ. (ಜಾತ್ರೆಗೆ ನಿಶ್ಚಿತ ದಿವಸಗಳಿಲ್ಲ. ೧೦ ರಿಂದ ೧೫ ದಿವಸ ನಿಶ್ಚಿತ ವಾರಗಳಿಗೆ ಅನುಸರಿಸಿ ಜಾತ್ರೆ ನಡೆಯುತ್ತದೆ). ಹನುಮ ಜಯಂತಿಯಾದ ಬಳಿಕ ೫ನೇ ದಿನಕ್ಕೆ ತೊಟ್ಟಿಲು ಹೋಗುತ್ತದೆ. ನಂತರ ಎರಡನೆಯ ಸೋಮವಾರ ದೀಪ, ಮರುದಿವಸ (ತೇರು) ರಥೋತ್ಸವ, ಬುಧವಾರ ಕುಸ್ತಿ, ಶುಕ್ರವಾರ ತೊಟ್ಟಿಲು ಊರಲ್ಲಿ ಹೋಗುತ್ತದೆ. ಸೋಮವಾರ ನೈವೇದ್ಯ ಸಮರ್ಪಣೆ ಮತ್ತು ಕಳಸ ಇಳಿಸಿ ಜಾತ್ರೆ ಸಮಾಪ್ತಿ ಮಾಡುತ್ತಾರೆ.

ದೇವಸ್ಥಾನದ ಹೆಸರಿನಲ್ಲಿ ೨೦ ಎಕರೆ ಹೊಲವಿದೆ. ३/೪ ಎಕರೆ ಹೊಲವನ್ನು ಶಾಲೆಗಾಗಿ ಕೊಟ್ಟಿದ್ದಾರೆ. ಮದ್ದಿನ ಹೊಲ, ಎಣ್ಣೆ ಹೊಲ, ಕುಂಭದ ಹೊಲಗಳಿಂದ ಆಯಾ ಸಾಹಿತ್ಯ ತರುತ್ತಾರೆ. ರಥ ಇತ್ತೀಚೆಗೆ ಪ್ರಾರಂಭವಾಗಿದೆ. ವೀರಭದ್ರ ದೇವಸ್ಥಾನದಿಂದ ನಂದಿಕೋಲ ಮತ್ತು ತೊಟ್ಟಿಲು ಕೂಡಾ ಇತ್ತೀಚೆಗೆ ಆರಂಭಿಸಲಾಗಿದೆ. ಮುನವಳ್ಳಿ ಜನರಿಗೆ ಮಸಣಯ್ಯನ ಕುರಿತು ಭಯಭಕ್ತಿ ಇದ್ದು, ಕಟ್ಟು ನಿಟ್ಟಿನ ನಿಯಮಗಳು ಚಾಲ್ತಿಯಲ್ಲಿವೆ. ತೊಟ್ಟಿಲು ಗುಡಿಗೆ ಹೋದ ಮೇಲೆ ಯಾವುದೇ ವ್ಯವಹಾರಗಳು ನಡೆಯುವ ಹಾಗಿಲ್ಲ. ಜಾತ್ರೆಯ ಮೊದಲ ದಿನ ಇದ್ದವರು ಕೊನೆಯ ದಿನ ಇರಲೇಬೇಕೆಂಬ ನಿಯಮವಿದೆ.

ಮುನವಳ್ಳಿಯಲ್ಲಿ ಅಂಗಡಿ ಹಾಗೂ ಮನೆಗಳಿಗೆ ಮಸಣಯ್ಯನ ಹೆಸರು ಇಟ್ಟಿದ್ದಾರೆ. ಊರಿನ ಮಹಾದ್ವಾರಕ್ಕೂ ಮಸಣಯ್ಯನ ಹೆಸರು ಇದೆ. ಬಹುತೇಕ ವ್ಯಕ್ತಿಯ ಹೆಸರು ಮಸಣಯ್ಯ ಎಂದು ಇಟ್ಟಿರುವುದು ಮಸಣಯ್ಯನ ಮೇಲಿನ ಭಕ್ತಿಯನ್ನು ಸೂಚಿಸುತ್ತದೆ. ಇಲ್ಲಿ ನಡೆಯುವ ಭಜನೆ ಹಾಡುಗಳಲ್ಲಿ ಮಸಣಯ್ಯನ ಕುರಿತಾದ ಹಾಡುಗಳು ಇವೆ.

ಗಜೇಶ ಮಸಣಯ್ಯ ಮತ್ತು ಬಸವಣ್ಣನ ಜೀವನದಲ್ಲಿ ಕೆಲವು ಸಾಮ್ಯಗಳು ಕಂಡು ಬರುತ್ತವೆ. ಬಸವಣ್ಣ ಬಾಗೇವಾಡಿಯಲ್ಲಿ ಹುಟ್ಟಿ ಸಂಗಮಕ್ಕೆ ಹೋದಂತೆ ಮಸಣಯ್ಯ ಕರಜಗಿಯಲ್ಲಿ ಹುಟ್ಟಿ ಮುನವಳ್ಳಿಗೆ

ಹೋಗಿ ನೆಲೆಸಿದ. ಬಸವಣ್ಣ ಸಂಗಮನಾಥನ ಆಜ್ಞೆಯಂತೆ ಸಂಗಮದಿಂದ ಮಂಗಳವೇಡೆಗೆ ಹೋದಂತೆ, ಮಸಣಯ್ಯ ಗುರುವಿನ ಆಜ್ಞೆಯಂತೆ ಕರಜಗಿಯಿಂದ ಮುನವಳ್ಳಿಗೆ ಹೋದನು. ಕಲ್ಯಾಣ ಕ್ರಾಂತಿಯ ನಂತರ ಬಸವಣ್ಣ ಸಂಗಮಕ್ಕೆ ಹೋಗಿ ಲಿಂಗೈಕ್ಯನಾಗುತ್ತಾನೆ. ಈ ಸುದ್ದಿ ತಿಳಿದ ಅವನ ಸತಿ ನೀಲಾಂಬಿಕೆ ಕೂಡಾ ಲಿಂಗೈಕ್ಯಳಾಗುತ್ತಾಳೆ. ಅದರಂತೆ ಕಲ್ಯಾಣ ಕ್ರಾಂತಿಯ ನಂತರ ಮುನವಳ್ಳಿಗೆ ಮರಳಿದ ಮಸಣಯ್ಯ ಗುರುವಿನ ನಿಧನದ ವಾರ್ತೆ ಕೇಳಿ ಅವನು ಕೂಡಾ ಲಿಂಗೈಕ್ಯನಾಗುತ್ತಾನೆ. ಪತಿಯ ನಿಧನದ ವಾರ್ತೆ ಕೇಳಿದ ಮಸಣಮ್ಮ ಅವಳು ಕೂಡಾ ಲಿಂಗೈಕ್ಯಳಾಗುತ್ತಾಳೆ.

ಆಯ್ದಕ್ಕಿ ಲಕ್ಕಮ್ಮ ತನ್ನ ಪತಿಗೆ "ಈಸಕ್ಕಿ ಆಸೆ ನಿಮಗೇಕೆ"? ಎಂದು ತಿಳಿ ಹೇಳಿದಂತೆ ಮಸಣಯ್ಯ ತನ್ನ ಸತಿಗೆ ಹೆಚ್ಚಿಗೆ ತಂದ ಕೂಲಿ ಹಣವನ್ನು ಮರಳಿ ಕೊಡಲು ತಿಳಿಸುತ್ತಾನೆ. ಈ ರೀತಿಯಾಗಿ ಗಜೇಶ ಮಸಣಯ್ಯ ದಂಪತಿಗಳು ಶರಣ ಸಂಪ್ರದಾಯದಲ್ಲಿದ್ದು ಚಟುವಟಿಕೆ ಶೀಲರಾಗಿ ಬಾಳಿದ್ದರೂ ಚರಿತ್ರೆಕಾರರು ರಚಿಸಿದ ಚರಿತ್ರೆಯ ಪುಟಗಳಲ್ಲಿ ಅಷ್ಟೊಂದು ಎದ್ದು ಕಾಣದೆ ಎಲೆಯ ಮರೆಯ ಕಾಯಿಯಂತೆ ಉಳಿದು ಬಿಟ್ಟಿದ್ದಾರೆ.

ಅಧ್ಯಾಯ – ೪

ಗಜೇಶ ಮಸಣಯ್ಯನ ವಚನಗಳ ವಿವೇಚನೆ

ಅಧ್ಯಾಯ – ೪

ಗಜೇಶ ಮಸಣಯ್ಯನ ವಚನಗಳ ವಿವೇಚನೆ

ಗಜೇಶ ಮಸಣಯ್ಯ ಶರಣನಾಗಿದ್ದಂತೆ ಸಂಸಾರಿಯೂ ಕೂಡಾ ಆಗಿದ್ದ. ಅದೇ ರೀತಿಯಾಗಿ ಒಬ್ಬ ಉತ್ತಮ ವಚನಕಾರನೂ ಹೌದು. ತನ್ನ ಹೆಸರಿನೊಂದಿಗೆ ಸೇರಿಸಿಕೊಂಡ 'ಗಜೇಶ' ಎಂಬ ತನ್ನ ಆರಾಧ್ಯದೈವದ ಹೆಸರನ್ನೇ 'ಮಹಾಲಿಂಗ ಗಜೇಶ್ವರ' ಎಂದು ಅಂಕಿತವನ್ನಾಗಿ ಇರಿಸಿಕೊಂಡು ಉತ್ಕೃಷ್ಟವಾದ ವಚನಗಳನ್ನು ರಚಿಸಿದ್ದಾನೆ. ಆ ವಚನಗಳ ಬಗ್ಗೆ ವಿಮರ್ಶೆ ಅಷ್ಟಾಗಿ ನಡೆದಿಲ್ಲ. ಅವನಿಗೆ ಸಲ್ಲಬೇಕಾದ ಗೌರವ ದೊರೆತಿಲ್ಲ. ಅವನ ೭೧ ವಚನಗಳು ದೊರೆತಿವೆ. (ಸಂಕೀರ್ಣ ವಚನ ಸಂಪುಟ – ಎರಡು, ಸಂಪಾದಕರು ಡಾ. ಎಸ್. ವಿದ್ಯಾಶಂಕರ) ಆ ವಚನಗಳಲ್ಲಿ ವ್ಯಕ್ತವಾಗಿರುವ ವ್ಯಕ್ತಿತ್ವ, ಮನೋಭಾವ, ಪ್ರತಿಭೆ, ಮಧುರ ಶೈಲಿಗಳನ್ನು ಗಮನಿಸಿದರೆ ಮಸಣಯ್ಯನೊಬ್ಬ ಸಾಮಾನ್ಯ ವಚನಕಾರನಲ್ಲ. ಅವನೊಬ್ಬ ಮೇಲ್ಮಟ್ಟದ ವಚನಕಾರನೆಂದು ತಿಳಿದುಬರುತ್ತದೆ.

ಗಜೇಶ ಮಸಣಯ್ಯನ ವಚನಗಳಲ್ಲಿ ವಿಶೇಷವಾಗಿ ಲಿಂಗಾಂಗ ಸಾಮರಸ್ಯ ಕಂಡುಬರುತ್ತದೆ. ಸತಿ–ಪತಿ ಭಾವ ಅಲ್ಲಿಯ ಪ್ರಮುಖ ಲಕ್ಷಣವಾಗಿದೆ. "ಸಾಧಕ ಹೆಣ್ಣಿರಲಿ ಅಥವಾ ಗಂಡಿರಲಿ ತಾನು ಸತಿ ಲಿಂಗವೇ ಪತಿ ಎಂದು ಭಾವಿಸಿ ಆಚರಿಸುವುದು. ಈ ಭಾವದ ವೈಶಿಷ್ಟ್ಯ. ಇದೊಂದು ಮಧುರ ಭಾವ. ಈ ಭಾವದಲ್ಲಿ ಮುಳುಗಿದ ಶರಣನ ಅವಸ್ಥೆಗೆ ಲಿಂಗವಿಕಳಾವಸ್ಥೆಯೆಂದು ಕರೆಯಲಾಗುತ್ತದೆ. ಈ ಅವಸ್ಥೆಯಲ್ಲಿ ಸತಿಯು ಅಗಲಿದ ತನ್ನ ಪತಿಗಾಗಿ ವಿರಹ ಅನುಭವಿಸುವಂತೆ ಆತ್ಮ ಪರಮಾತ್ಮನಿಗಾಗಿ ಹಂಬಲಿಸುತ್ತಾನೆ. ಅವನೊಡನೆ ಬೆರೆತು ಬೇರಿಲ್ಲದಂತಾಗಲು ತವಕಿಸುತ್ತಾನೆ. ಆ ಸಮಯದಲ್ಲಿ ಪತಿಯನ್ನು ಅಗಲಿದ ಸತಿಯಲ್ಲಿ ಉಂಟಾಗುವ ಕಾತರ, ಕಳವಳ, ಕೊರಗು, ವ್ಯಥೆ, ಹುಸಿ ಮುನಿಸು ಪತಿಯನ್ನು ಬೆರೆತೊಡನೆ ಅವಳಲ್ಲಾಗುವ ಆನಂದ, ಅನುರಾಗ, ಪುಳಕ, ನಡುಕ, ರೋಮಾಂಚನ, ಪರವಶತೆ ಎಲ್ಲವೂ ಶರಣಸತಿಯಲ್ಲಿ ಕಾಣಿಸಿಕೊಳ್ಳುತ್ತವೆ"[೧]. ಒಟ್ಟಿನಲ್ಲಿ ಗಜೇಶ ಮಸಣಯ್ಯನ ವಚನಗಳನ್ನು ಐದು ವಿಭಾಗಗಳಾಗಿ ವಿಂಗಡಿಸಬಹುದು.

೧) ಲಿಂಗಪತಿಗಾಗಿ ಶರಣಸತಿಯ ಹಂಬಲ

೨) ಲಿಂಗಪತಿಯನ್ನು ಶರಣಸತಿ ಒಲಿಸಿಕೊಳ್ಳುವ ರೀತಿ

೩) ಲಿಂಗಪತಿಯೊಡನೆ ಶರಣಸತಿ ಬೆರೆತಿರುವುದು.

---

೧. ಶರಣ ಸೊಲ್ಲಾಪೂರ : ಸಂ : ಡಾ. ಜಿ. ಎಸ್. ಧಬಾಲೆ : ಪುಟ ಸಂಖ್ಯೆ : ೧೩೨

೪) ಲಿಂಗಪತಿಯಲ್ಲಿ ಶರಣಸತಿ ಸಮರಸ ಹೊಂದಿ ಸುಖಿಸುವುದು.

೫) ಲಿಂಗಪತಿಯಲ್ಲಿ ಶರಣಸತಿ ಬೆರೆತು ಬೇರಿಲ್ಲದಂತಾಗುವುದು.

೧) ಲಿಂಗಪತಿಗಾಗಿ ಶರಣಸತಿಯ ಹಂಬಲ :

ಗಜೇಶ ಮಸಣಯ್ಯ ತನ್ನ ವಚನಗಳಲ್ಲಿ ಸತಿಪತಿಗಳ ಒಂದಾಗುವ ಸಂದರ್ಭ ನಿಮಿತ್ಯಮಾಡಿಕೊಂಡು ತನ್ನ ದೇವರಾಜ ಮಹಾಲಿಂಗ ಗಜೇಶ್ವರನನ್ನು ಕೂಡುವ ಹಂಬಲವನ್ನು ಹಲವಾರು ವಚನಗಳಲ್ಲಿ ವ್ಯಕ್ತಪಡಿಸಿದ್ದಾನೆ. ಲಿಂಗಪತಿ ಶರಣಸತಿಯಿಂದ ದೂರಾಗಿದ್ದಾನೆ. ಅವಳಿಗೆ ಅವನ ನೆನೆಮೊಂದೇ ಸರ್ವಸ್ವವಾಗಿದೆ. ಅವನನ್ನು ಬೇಗ ಬೆರೆಯಬೇಕೆಂಬ ಹಂಬಲದಲ್ಲಿಯೇ ಅವಳು ಮುಳುಗಿದ್ದಾಳೆ. ಅವನಿಲ್ಲದ ಒಂದೊಂದು ಕ್ಷಣಗಳು ಅವಳಿಗೆ ಸಹಿಸಲು ಅಸಾಧ್ಯವಾದ ಬಿರುಬಿಸಿಲ ಯುಗಗಳಾಗಿವೆ. ವಿರಹದುರಿ ಅವಳ ಅಂತರಂಗದಲ್ಲಿ ಸುಡುತೊಡಗಿದೆ. ಈಗ ಅವಳಲ್ಲುಂಟಾದ ಕಳವಳ, ಕಾತರ, ವೇದನೆ ವರ್ಣನಾತೀತ ಒಳಗಿನಬೇಗುದಿ ಅವಳಿಗೆ ಮಾತ್ರ ಗೊತ್ತು.

ಅಪ್ಪಿನ ಸೋಂಕಿನ ಸುಖವನಗಲುವ ಮನಕ್ಕಿಂದ
ಬಂಜೆಯಾಗಿಪ್ಪುದು ಕರಸುಖ ನೋಡವ್ವಾ.
ಕಂಗಳ ನೋಟ ಮನಕ್ಕೆ ಸೈರಿಸದು,
ಎಣೆಗೊಂಡು ಬಸವಾದ ಪರಿಯ ನೋಡವ್ವಾ.
ತುಪ್ಪುಳನಿಕ್ಕಿದ ಹಂಸೆಯಂತಾದೆನವ್ವಾ
ಮಹಾಲಿಂಗ ಗಜೇಶ್ವರನುಳಿದಡೆ.

ಅಗಲಿದ ನಲ್ಲನ ಕನಸಿನಲಪ್ಪಿ ಸುಖಿಯಾದಿರವ್ವಾ
ಕಂಡ ಕನಸು ದಿಟವಾದಡೆ ಅವ ನಮ್ಮ ನಲ್ಲನವ್ವಾ
ಮನಸುಳ್ಳವರು ನೀವು ಪುಣ್ಯಗೈದಿರವ್ವಾ
ಮಹಾಲಿಂಗ ಗಜೇಶ್ವರನನಗಲಿದಡೆ ನಿದ್ರೆಯೆಮಗಿಲ್ಲ
ಕನಸಿನ್ನೆಲ್ಲಿ ಬಹುದವ್ವಾ.

ಆಲಿಕಲ್ಲು ಮರದಡಿಯಲಿಹ ಘಮಘಮಿಸುವ ಗಿಳಿವಿಂಡು
ಉರವಣಿಸುವ ಪಕ್ಷಿಗಳು, ಸರಸಗೈವ ಕೋಗಿಲೆ, ಗಗನದ ಚಂದ್ರಮ;
ಅಗಲಲಾರೆನು ಸಖಿಯೆ ಬೆಳುದಿಂಗಳು ಬಿಸಿಲಾದವೆ?

ಗಗನದ ದಶರಥನ ಬೀಡಿನಲ್ಲಿ ಕಾಮಿನಿ ಕೈ ವೋದಳೆ?
ದಶಾವಸ್ಥೆಗೊಂಡೆನು ಮಹಾಲಿಂಗ ಗಜೇಶ್ವರನುಳಿದಡೆ.

ಮಾಘಮಾಸದ ನವಿಲಿನಂತಾದೆ ನೋಡವ್ವಾ !
ಇರುಳು ತೊಳಲುವ ಜಕ್ಕವಕ್ಕಿಯಂತೆ ಹಲುಬುತಿರ್ದೆ ನೋಡವ್ವಾ !
ಮಾಗಿಯ ಕೋಗಿಲೆಯಂತೆ ಮೂಗಿಯಾಗಿರ್ದೆ ನೋಡವ್ವಾ !
ಮಹಾಲಿಂಗ ಗಜೇಶ್ವರನ ಅನುಭಾವ ಸಂಬಂಧಿಗಳ ಬರವು
ಎನ್ನ ಪ್ರಾಣದ ಬರವು ನೋಡವ್ವಾ !

ಋತುಕಾಲ ತಪ್ಪಿದ ಕೋಗಿಲೆಯಂತೆ
ನುಡಿಯದಂತಿರ್ದಳಲ್ಲಾ !
ಪರಿಮಳ ತಪ್ಪಿದ ಭ್ರಮರನಂತೆ
ಸುಳಿಸುಳಿಗೊಳುತಿರ್ದಳಲ್ಲಾ !
ಫಲವು ತಪ್ಪಿದ ಬಂಜೆ ಬನದೊಳಗಣ ಅರಗಿಳಿಯಂತಿರ್ದಳಲ್ಲಾ !
ಧುರಭಾರದ ಜವ್ವನದಲ್ಲಿ ತೋರಣದೆಲೆಯಂತೆ
ಮಹಾಲಿಂಗ ಗಜೇಶ್ವರನ ನೆರೆವ ಭರದಿಂದ
ಅಳಿಕಾವೃದ್ಧೆಯಾಗಿರ್ದಳಲ್ಲಾ !

ದೇವರ ನೆನೆದು ಮುಕ್ತರಾದೆವೆಂಬ
ಯುಕ್ತಿಶೂನ್ಯರ ಮಾತ ಕೇಳಲಾಗದು.
ಅದೇನು ಕಾರಣವೆಂದೆಡೆ;
ದೇವರ ನೆನೆವಂಗೆ ದೇವರುಂಟೆ?
ದೂರ ದೂರದಲ್ಲಿದ್ದವರ ನೆನೆವರಲ್ಲದೆ
ಸಮೀಪದಲ್ಲಿದ್ದವರ ನೆನೆವವರಿಲ್ಲ.
ಇದನರಿದು ನೀನೆನ್ನೊಳಗಡಗಿ
ನಾ ನಿನ್ನ ನೆನೆಯಲಿಲ್ಲ;
ನೀನೆನಗೆ ಮುಕ್ತಿಯನೀಯಲಿಲ್ಲ.
ನೀನಾನೆಂದೆನಲಿಲ್ಲ ಮಹಾಲಿಂಗ ಗಜೇಶ್ವರಾ.

ಈ ಮೇಲಿನ ಎಲ್ಲ ವಚನಗಳಲ್ಲಿ ಕೆಲವು ಸತಿಯರು ತಮ್ಮ ಅಗಲಿದ ನಲ್ಲನನ್ನು ಕನಸಿನಲ್ಲಿ ಅಪ್ಪಿಸುಖಿಸುವರೆಂದು ಹೇಳುತ್ತಾರೆ. ಅದರಂತೆ ತಾನೂ ಕನಸಿನಲ್ಲಾದರೂ ಅಪ್ಪಿ ತೃಪ್ತಿಪಡಬೇಕೆಂದರೆ ಈ ಶರಣಸತಿಗೆ ಲಿಂಗಪತಿಯನ್ನಗಲಿದರೆ ನಿದ್ರೆಯೆಂಬುದೆ ಇಲ್ಲವಂತೆ, ನಿದ್ರೆಯಲ್ಲದಿದ್ದರೆ ಕನಸೆಲ್ಲಿಂದ ತಾನೆ ಬರಬೇಕು ಅವಳಿಗೆ ಋತುಕಾಲ ತಪ್ಪಿದ ಮಾಗಿಯ ಕೋಗಿಲೆಯಂತೆ ಮೂಗಿಯಾಗಿದ್ದಾಳೆ. ಫಲವು ತಪ್ಪಿದ ಬಂಜೆ ಬನದೊಳಗಣ ಅರಗಿಳಿಯಂತಾಗಿದ್ದಾಳೆ. ಪರಿಮಳ ತಪ್ಪಿದ ದುಂಬಿಯಂತೆ ಸುಳಿಗೊಳ್ಳುತ್ತಿದ್ದಾಳೆ. ಮಾಘಮಾಸದ ನವಲಿನಂತಾಗಿ ಇರುಳ ತೊಳಲುವ ಚಕ್ರವಾಕ ಪಕ್ಷಿಯಂತೆ ಹಲವ ಹಲಬುತ್ತಿದ್ದಾಳೆ. ಅವಳ ಯೌವ್ವನ, ಸೊಬಗು ಸೌಂದರ್ಯಗಳೆಲ್ಲ ವ್ಯರ್ಥವೆನೆಸಿದೆ. ಸುವಾಸನೆ ಇಲ್ಲದ ಹೂವಿನಂತೆ, ಚಂದ್ರನಿಲ್ಲದ ನಕ್ಷತ್ರಗಳಂತೆ ಅವಳ ಜೀವನ ನೀರಸವಾಗಿದೆ. ಮನಕ್ಕೆ ಸಂತೋಷವನ್ನು ನೀಡುವ ಆಲಿಕಲ್ಲು, ಮರದ ಗಿರಿಯಲ್ಲಿಹ ಮಗಮಗಿಸುವ ಗಾಳಿ, ಉಂಡು ಉರವಣಿಸುವ ಪಕ್ಷಿಗಳು, ಸರಗೈವ ಕೋಗಿಲೆ, ಗಗನ ಚಂದ್ರಮ ಇವೆಲ್ಲ ಈಗವಳಿಗೆ ಬೇಡವಾಗಿವೆ. ಬೆಳದಿಂಗಳು ಈಗ ಬಿಸಿಲಂತೆ ಭಾಸವಾಗುತ್ತದೆ. ಮಂದವಾದ ಗಾಳಿ ಛಳಿಯಾಗಿ ಕಾಣಿಸುತ್ತದೆ. ಕೋಗಿಲೆಯ ಮಧುರಗಾನ ಕಾಗೆಯ ಕರ್ಕಶದ ಕೂಗಿನಂತೆನಿಸುತ್ತದೆ. ಇವು ಅವಳ ವಿರಹದುರಿಯನ್ನು ಶಮನಗೊಳಿಸುವ ಬದಲು ಮತ್ತಷ್ಟು ಪುಟಗೊಳಿಸುತ್ತವೆ. ಅದಕ್ಕಾಗಿ ಅವಳು ಆವುಗೆಯ ಕಿಚ್ಚಿನಂತೆ ಹೃದಯ ಕಾದು ಕೆಂಪಾಗಿದೆ ಎಂದು ಹೇಳುತ್ತ ಲಿಂಗಪತಿಗಾಗಿ ಶರಣಸತಿಯ ಹಂಬಲವನ್ನು ಗಜೇಶ ಮಸಣಯ್ಯ ವಿವರಿಸಿದ್ದಾನೆ.

೨) ಲಿಂಗಪತಿಯನ್ನು ಶರಣಸತಿ ಒಲಿಸಿಕೊಳ್ಳುವ ರೀತಿ :

ಗಜೇಶ ಮಸಣಯ್ಯ ಮಹಾಶರಣ ಸಹೃದಯಿ ಲಿಂಗಪತಿಯನ್ನು ತನ್ನೆಡೆ ಒಲಿಸಿಕೊಳ್ಳುವ ಸದಾ ಆತನನ್ನು ತನ್ನ ಹೃದಯದಲ್ಲಿರಿಸಿದ ಮಹಾನುಭಾವ, ದೇವರ ಪ್ರೀತಿಗೆ ಪಾತ್ರರಾಗಬೇಕಾದರೆ ನಾವು ಯಾವಾಗಲೂ ವಿನಯದಿಂದ ಇರಬೇಕು.

ಒಳಗೆ ಶೋಧಿಸಿ, ಹೊರಗೆ ಧವಳಿಸಿ
ಭಾವದಿಂದ ಗುಡಿತೋರಣವ ಕಟ್ಟಿದೆನಯ್ಯಾ.
ಲಿಂಗ ಬಾರಯ್ಯಾ, ಎನ್ನ ದೇವಾ ಬಾರಯ್ಯಾ,
ಅಂತರಂಗದ ಪರಂಜ್ಯೋತಿಯನಿದಿರುಗೊಂಬೆನೆನ್ನ
ಮಹಾಲಿಂಗ ಗಜೇಶ್ವರನ !

ಗಿಡ ಮರದ ಕುರುಬಿತ್ತಿಯ ಜವ್ವನದಂತ
ನುಡಿಯಲರಿಯದ ಮುಗ್ದೆಯಾಗಿರ್ದೆನವ್ವಾ

ಹಗಲನರಿಯದ ಜಕ್ಕವಕ್ಕಿಯಂತೆ
ಮನ ಬಯಸುತ್ತಲಿದೇನವ್ವಾ.
ಹಲವು ಕಾಲ ಎಲವದಮರನ ಸಾರಿರ್ದ ಗಿಳಿಯಂತಾದೆನವ್ವಾ.
ಇಂದು ಮಹಾಲಿಂಗ ಗಜೇಶ್ವರದೇವನ ನೆರೆಯಲರಿಯದೆ
ಇವರೆಲ್ಲರ ವಿಧಿಯ ಹೊತ್ತೆನವ್ವಾ.

ಚಂದ್ರಮನ ಕಂಡು ಮಂಡೆಯ ಬಿಟ್ಟು
ಏಳು ಬಂಧವ ತೋರಿ ಬೆದರಿಸಿದನವ್ವಾ.
ಮಗಳ ಕುಂಕುಮ ತಿಲಕವ ಕಂಡು
ನಿನ್ನ ನೊಸಲಲ್ಲಿ ಎಸೆಯಬಂದ ಕಾಮ ಕೈಮರೆದನವ್ವಾ.
ಸಟ್ಟುಪದಿಯ ಸಂಗ ಮಹಾಲಿಂಗ ಗಜೇಶ್ವರನ
ಸಂಪಗೆಯ ವನಕ್ಕೆ ಬಂದು ಶರಣೆನ್ನು ಮಗಳೆ.

ಚಕೋರನಂತೆ ದಿನವನೆಣಿಸುತ್ತಿರ್ದಳವ್ವೆ
ದರುವಕ್ಕಿ ಕಂಡ ಕನಸಿನಂತಿರ್ದಳವ್ವೆ
ಮೋಡಂ ಬೊಕ್ಕ ಚಂದ್ರನಂತಿರ್ದಳವ್ವೆ
ಎಂಟನೆಯವಸ್ಥೆಯ ಆಚೆಯ ತಡಿಯಲಿರ್ದವರನು
ಈಚೆಯ ತಡಿಗೆ ಕರೆದುಕೊಂಬಂತೆ ಇದು
ನಮ್ಮ ಮಹಾಲಿಂಗ ಗಜೇಶ್ವರ
ಕಂಗಳ ಕಾಮ ಕಂಗಾಹಿಂಗಂಡವ್ವಾ.

ನೀನೊಲಿದು ಕೂರ್ತವರು ನಿಮಗೊಲಿದು ಕೂರ್ತವರು.
ನಿಮ್ಮ ಪರಿಯೇ ಅವರು, ನಿಮ್ಮ ರೂಹೇ ಅವರು.
ಅವರನೇನ ಹೇಳುವೆ.
ಆಳಾರು ಅರಸಾರು ಎಂದರಿಯಬಾರದು.
ನಿಮ್ಮ ರೂಹೆ ಅವರು.
ಮಹಾಲಿಂಗ ಗಜೇಶ್ವರನೊಲಿದು ಪೂಜಿಸಿದವರು.
ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯ ಪದವಿಗಳ ಪಡೆವರು.
ಎನಗೆ ನಿಮ್ಮ ಶರಣರೇ ನೀವೆಂದು ಅರಿದಿರ್ಪುದೇ ಸಾಕು.

ಈ ಮೇಲಿನ ವಚನಗಳಲ್ಲಿ ಒಳಹೊರಗು ಶುದ್ಧಳಾದ ಅವಳ ಮೊರೆ ಈಗ ಅವನಿಗೆ ಕೇಳುತ್ತದೆ. ತನಗಾಗಿ ಹಂಬಲಿಸುವ ಶರಣಸತಿಯ ಬಳಿಗೆ ಒಲಿದು ಬರುತ್ತಾನೆ. ಅವನ ಬರವು ಅವಳ ಪ್ರಾಣದ ಬರವಾಗುತ್ತದೆ. ಮನಕ್ಕೆ ಕವಿದ ಮೋಡ ಹರಿದು ಹಾಲ ಬೆಳದಿಂಗಳು ಸುರಿಯುತ್ತದೆ. ಹುಸಿಮುನಿಸು ಮಾಯವಾಗಿ ಅನುರಾಗದ ಹೊಳೆ ತುಂಬಿ ಹರೆಯುತ್ತದೆ. 'ಲಿಂಗದೇಹಿ ಸದಾ ಶುಚಿ' ಎಂಬಂತೆ ಲಿಂಗವನ್ನು ಎಂದಿಗೂ ಅಗಲಕೂಡದೆಂಬ ಭಾವ ಅರಳಿದೆ. ಪರಮಳ ಬೀರಿದೆ. ಅವನು ಬಳಿಯಲ್ಲಿದ್ದರೆ ಅವಳಿಗೆ ಬೇರಾವ ಪದವಿಯೂ ಬೇಕಿಲ್ಲ, ಬೇರಾವ ಸುಖದ ಸುಪ್ಪತ್ತಿಗೆಗೆ ಅವಳು ಆಶೆ ಮಾಡುವುದಿಲ್ಲ. ಅವನ ತೊತ್ತುತನವೊಂದೆ ಅವಳಿಗೆ ಸಾಕಂತೆ. ಮಡಿಕೆ ದೈವ, ಬೀದಿಯ ಕಲ್ಲು ದೈವ, ದೈವ ದೈವವೆಂದು ಕಾಲಿಡಲು ಇಂಬಿಲ್ಲ ಅನಂತ ದೈವಗಳಿವೆ. ಆದರೆ ದೇವನೊಬ್ಬನೆ ಆತನೆ ಮಹಾಲಿಂಗ ಗಜೇಶ್ವರ ಎಂದಿದ್ದಾನೆ ಗಜೇಶ ಮಸಣಯ್ಯ.

ಲಿಂಗಪತಿ ಅವಳನ್ನು ತನ್ನ ಎದೆಯಲ್ಲಿರಿಸಿಕೊಂಡಿದ್ದಾನೆ. ಈಗ ಅವನ ಮೇಲಿದ್ದ ಅವಳ ಸಿಟ್ಟೆಲ್ಲ 'ಇಂದುವನಲ್ಲಿ ಉದಯವಾದ ವಾರಿಕಲ್ಲು ಕರಗಿದಂತೆ' ಸಂಪೂರ್ಣವಾಗಿ ಕರಗಿ ಹೋಗುತ್ತದೆ. ಅವ ಅಗಲಿದಾಗ ಏನೇನನ್ನೋ ಬಡಬಡಿಸಿದ ಅವಳೀಗ ಅವನನ್ನು ಕುರಿತು ಒಂದು ಮಾತನ್ನು ಆಡದೆ ಮೌನವಾಗಿದ್ದಾಳೆ.

೩) ಲಿಂಗಪತಿಯೊಡನೆ ಶರಣಸತಿ ಬೆರೆತಿರುವುದು :

ಲಿಂಗಪತಿ ಅವಳನ್ನು ತನ್ನ ಎದೆಯಲ್ಲಿರಿಸಿಕೊಳ್ಳುತ್ತಾನೆ. ಈಗ ಅವನ ಮೇಲಿದ್ದ ಅವಳ ಸಿಟ್ಟೆಲ್ಲ 'ಇಂದುವಿನಲ್ಲಿ ಉದಯವಾದ ವಾರಿಕಲ್ಲು ಕರಗಿದಂತೆ' ಸಂಪೂರ್ಣವಾಗಿ ಕರಗಿ ಹೋಗುತ್ತದೆ. ಅವ ಅಗಲಿದಾಗ ಏನೇನನ್ನೋ ಬಡಬಡಿಸಿದ ಅವಳಿಗೆ ಮಹಾಲಿಂಗ ಗಜೇಶ್ವರನನ್ನು ಕುರಿತು ಒಂದು ಮಾತನ್ನು ಆಡದೆ ಮೌನವಾಗಿದ್ದಾಳೆ. ಕಾರಣವೇನಿರಬಹುದು? ಹಗಲು ಮನಸಿಗಂಜಿ ಇರುಳು ಕನಸಿಗಂಜಿ ಧ್ಯಾನಮೌನಿಯಾಗಿದ್ದಳಂತೆ ಕಂಡು ಬರುತ್ತಾಳೆ.

ಉದರವ ತಾಗಿದ ಮಾತು ಅಧರದಲ್ಲಿ ಬೀಸರವೋದೀತೆಂದು
ಅಧರವ ಮುಚ್ಚಿ ಕೊಂಡಿರ್ದಳವ್ವೆ.
ಕಂಗಳ ಕೊನೆ ಬೀಸರವೋದೀತೆಂದು
ಕಂಗಳ ಮುಚ್ಚಿ ಕೊಂಡಿರ್ದಳವ್ವೆ.
ಪರಿಮಳ ಬೀಸರವೋದೀತೆಂದು
ಅಳಿಗೆ ಬುದ್ಧಿಯ ಹೇಳಿದಳವ್ವೆ.

ಮನ ಬೀಸರವೋದೀತೆಂದು
ದಿನಕರನ ಕಾವಲಕೊಟ್ಟಳವ್ವೆ.
ಇಂದು ನಮ್ಮ ಮಹಾಲಿಂಗ ಗಜೇಶ್ವರನ ನೆರೆವ ಭರದಿಂದ.

ಇಂದುವಿನಲ್ಲಿ ಉದಯವಾದ ಕಲ್ಲಿನಂತೆ ಮುನಿಸ ಮರೆದಿರ್ದಳವ್ವೆ.
ಅವನ ಸೋಂಕಿನಲ್ಲಿ ಸುಖಿಯಾದಳು.
ಅಗಲಿದಡೆ ಕರೆಗೊಂಡಳು.
ಮಹಾಲಿಂಗ ಗಜೇಶ್ವರದೇವರಲ್ಲಿ
ಮನಸೋಂಕಿ ಮನ ಲೀಯವಾದಳವ್ವೆ.

ಇರುಳಿನ ಚಕ್ಕವಕ್ಕಿಯಂತೆ ಅಗಲಿ ಹಲುಬುತಿರೆ
ಇರುಳಿನ ತಾವರೆಯಂತೆ ಮುಖ ಬಾಡಿ,
ಇರುಳಿನ ನೆಯ್ದಿಲಂತೆ ಕಣ್ಣ ಮುಚ್ಚದೆ,
ಇರುಳಿನ ಸಮುದ್ರದಂತೆ ಘನವಾಗಿ,
ಸಲೆ ಉಮ್ಮಳಿಸಿ ಸಂಜೆವರಿದು
ಮಹಾಲಿಂಗ ಗಜೇಶ್ವರನ ಬರವಿಂಗೆ ಬೆಳಗಾಯಿತ್ತು.

ಎಲೆ ಎಲೆ ತಾಯೆ ನೋಡವ್ವಾ !
ಇರುಳು ತೊಳಲುವ ಚಕ್ಕವಕ್ಕಿಯಂತೆ ಹಲಬುತ್ತಿದ್ದೆ ನೋಡವ್ವಾ !
ಮಾಗಿಯ ಕೋಗಿಲೆಯಂತೆ ಮೂಗಿಯಾಗಿದ್ದೆ ನೋಡವ್ವಾ !
ಮಹಾಲಿಂಗ ಗಜೇಶ್ವರನ
ಅನುಭಾವಸಂಬಂಧಿಗಳ ಬರವೆನ್ನ
ಪ್ರಾಣದ ಬರವು ನೋಡಯ್ಯ.

ಆತನ ಬೆರಸಿದ ಕೂಟವನೇನೆಂದು ಹೇಳುವೆನವ್ವಾ,
ಹೇಳಲೂಬಾರದು, ಕೇಳಲೂಬಾರದು ;
ಏನ್ ಹೇಳುವೆನವ್ವಾ, ಶಿಖಿ ಕರ್ಪೂರ ಬೆರಸಿದಂತೆ
ಮಹಾಲಿಂಗ ಗಜೇಶ್ವರನ ಕೂಡಿದ ಕೂಟವ ಹೇಳಲಿಬಾರದವ್ವಾ.

ಆತನ ನೋಡಿದಂದು ದೆಸೆಗಳ ಮರೆದೆನಿನ್ನೆಂತವ್ವಾ
ಅವ್ವಾ ಅವ್ವಾ ಆತನ ನುಡಿಸಿದಡೆ ಮೈಯೆಲ್ಲಾ ಬೆವತುದಿನ್ನೆಂತವ್ವಾ
ಅವ್ವಾ ಅವ್ವಾ ಆತನ ಕೈಯ ಹಿಡಿದಡೆ
ಎನ್ನ ನಿರಿಗಳು ಸಡಿಲಿದವಿನ್ನೆಂತವ್ವಾ
ಇಂದೆಮ್ಮ ಮಹಾಲಿಂಗ ಗಜೇಶ್ವರನನಪ್ಪಿದೆನೆಂದಡೆ
ನಾನಪ್ಪ ಮರೆದೆನಿನ್ನೆಂತವ್ವಾ.

ಈ ಮೇಲಿನ ವಚನಗಳಲ್ಲಿ ಹೆಣ್ಣುಗಳು ತಮ್ಮ ಗಂಡಿರು ಅಂಥವರು, ಇಂಥವರು, ಅಷ್ಟೊಂದು ಚೆಲುವರು ಇಷ್ಟೊಂದು ಚದುರರು ಎಂದು ಬಣ್ಣಿಸುತ್ತಾರೆ. ಅವರು ಪುಣ್ಯ ಜೀವಿಗಳು ಏಕೆಂದರೆ ಅವರು ತಮ್ಮ ತಮ್ಮ ಗಂಡರ ರೂಪಾತಿಶಯಗಳನ್ನು ಕಂಡಿದ್ದಾರೆ. ಕಂಡು ಸಂತೋಷದಿಂದ ವರ್ಣಿಸುತ್ತಾರೆ. ಆದರೆ ಇವಳಿಗೆ ತನ್ನ ಗಂಡ ಎಂಥವನೆಂಬುದೇ ಗೊತ್ತಿಲ್ಲ. ಇನ್ನು ಅವನನ್ನು ವರ್ಣಿಸುವದಾದರೂ ಹೇಗೆ? ಇವಳಿಗೆ ಇಷ್ಟು ಮಾತ್ರ ಗೊತ್ತು. ಅವರೆಲ್ಲರ ಗಂಡರಿಗಿಂತಲೂ ತನ್ನ ಗಂಡ ಅತಿ ಚೆಲುವ. ಅತಿ ಚತುರನೆಂದು ಅವಳ ಕಣ್ಣಿಗೆ ಕಾಣದಿದ್ದರೂ ಇವಳೊಡನೆ ಬೆರೆತು ಆನಂದವೀಯುತ್ತಾನೆ. ಅವ ಬಂದು ಇವಳ ಸೀರೆಯ ಸೆರಗ ಸಡಲಿಸಿದೊಡನೆ ತನ್ನ ಇರವನ್ನೆ ಮರೆಯುತ್ತಾಳೆ. ಅವನು ಮಾತನಾಡಿಸಿದರೆ ಇವಳ ಮೈಯೆಲ್ಲ ರೋಮಾಂಚಿತವಾಗಿ ಬೆವರುತ್ತದೆ. ಅವನು ಬಂದು ಅಪ್ಪಿದರಂತೂ ತೀರಿತು. ಇವಳು ತನ್ನನ್ನು ಸಂಪೂರ್ಣ ಮರೆತು ಬಿಡುತ್ತಾಳೆ. ಹೀಗೆ ಲಿಂಗಪತಿಯ ಸಂಗ ಸುಖದಲ್ಲಿ ಉತ್ತುಂಗ ಆನಂದವನ್ನು ಅನುಭವಿಸುತ್ತಿರುವ ಶರಣಸತಿಗೆ ಯಾರೋ ನಿನ್ನನಲ್ಲ ಮತ್ತೆ ಅಗಲಿದ ಎಂದು ಹೇಳಿದಂತಾಗುತ್ತೆ. ಆಗ ಅವಳು 'ಉದಕದೊಳಗೆ ತಾವರೆ ಬಾಡಿದಂತೆ' ಬಾಡಿ ಬಸವಳಿಯುತ್ತಾಳೆ. ಆದರೆ ಅವನು ಅಗಲಿರುವುದಿಲ್ಲ. ಮೆಚ್ಚಿ ವರಿಸಿದ ಅವಳನ್ನು ಅಗಲುವುದೆ? ಅವನೇನು ಕಲುಮನದವನೆ? ಕಠಿಣ ಹೃದಯಿಯೆ? ಅಲ್ಲ. ಒಲಿದವರಿಗೆ ಹೂವಿಗಿಂತ ಮೃದು ಎಂದು ಅಗಲದ ನಲ್ಲನವನು. ಸದಾ ತನ್ನವಳನ್ನು ಎದೆಯಲ್ಲಿರಿಸಿಕೊಂಡು ಸಂತೋಷವನ್ನು ನೀಡಿದ ಸಖಿನಿವಾಸ. ಅವನ ಕಣ್ಣ ಕರುಣೆಯ ನೆಳಲಲ್ಲಿ ಅವಳು ಪರಮ ಪಜ್ಜಳವರ್ಣ ನೈದಿಲೆಯಂತಿದ್ದಾಳೆ. ತುಂಬಿ ಮುತ್ತನುಗಳುವಂತೆ, ಬಂಗಾರಕ್ಕೆರಗಿದ ರತ್ನದಂತೆ ಇದ್ದಾಳೆ. ಅವನ ಒಲವಿನ ಸಾಮ್ರಾಜ್ಯದ ಹೂಮಂಚದ ಮೇಲೆ ಪುಳಕ ರೋಮಾಂಚನಗಳನ್ನು ಪ್ರಕಟಿಸುತ್ತ ನಲಿದಾಡುತ್ತಿದ್ದಾಳೆ.

೪) ಲಿಂಗಪತಿಯಲ್ಲಿ ಸಮರಸಹೊಂದಿ ಸುಖಿಸುವುದು :

ಮಸಣಯ್ಯ ಲಿಂಗಪತಿಯಲ್ಲಿ ಕೂಡಿ ಅದರಲ್ಲಿ ಸಿಗುವ ಸುಖವನ್ನು ಕುರಿತು ಹೀಗೆ ಹೇಳುತ್ತಾಳೆ. ಇಬ್ಬರ ಮೈಮನ ನೋಟ ಎಲ್ಲವೂ ಒಂದಾಗುತ್ತದೆ. ಇಬ್ಬರೂ ಸಾಮರಸ್ಯದ ಸುಖದ ಸೀಮೆಯನ್ನು

ದಾಟುತ್ತಾರೆ. ಬಹಿರಂಗದ ವಿಕಾರಗಳೆಲ್ಲ ಮಾಯವಾಗುತ್ತವೆ. ಲಿಂಗಪತಿ ಈಗ ಅಂತರಂಗದಲ್ಲಿ ಬೆರೆಯುತ್ತಾನೆ. ಆಗ ಅವಳಿಗಾದ ಅನುಭವದ ಕುರಿತು ಹೇಳುವ ವಚನಗಳಿವು.

ನೇಹವಳದಾಯಿತ್ತಾಗಿ ನೋಟ ವಿಪುಳವಾಯಿತ್ತ ಕಂಡೆ.
ಅಂಗದ ಕಳೆ ಕಂಗಳ ಮೋಹ ಎವೆಗೆವೆ ಸೈರಿಸದು.
ಬೆಳಕಿನ ಮೇಲೆ ಕೆಂಪಡರಿತ್ತು
ಉದಕ ಪಲ್ಲಟ, ಮತ್ಸ್ಯಬೆನ್ನು ಬಸುರ ತೋರಿತ್ತು.
ಮಾಗಿಯ ಕೋಗಿಲೆಯಂತೆ ಮೂಗನಾಗಿದ್ದೆನವ್ವಾ.
ಮಹಾಲಿಂಗ ಗಜೇಶ್ವರನೊಲವಿಂದೆನಗೆ ರಣದಣಕನವ್ವಾ.

ಮಾಗಿಯ ಹುಲ್ಲಿನ ಸೋಂಕಿನಂತೆ
ತನು ಪುಳಕಿತಾದಳವ್ವೆ.
ನುಡಿ ತೊದಳು ಆತನ ಒಲವೆ ಆಧಾರವಾಗಿದ್ದಳವ್ವೆ.
ಬಿಳಿಯ ತುಂಬಿ ಕುಂಕುಮ ರಸದಲ್ಲಿ ಬಂಡುಂಡಂತೆ.
ಮಹಾಲಿಂಗ ಗಜೇಶ್ವರನಲ್ಲಿ
ತನ್ನಲ್ಲಿ ತಾನೆ ರತಿಯಾಗಿರ್ದಳವ್ವೆ.

ಬಟ್ಟಬಯಲೊಂದು ದೃಷ್ಟವಪ್ಪ ಮೂರುತಿಯಾಗಿ
ನಾನೊಂದು ಅಪ್ಪತನುವ ಪಡೆದೆ.
ಬಾಳೆಯ ದಿಂಡು ಲಾಳಿಲು ನೂಲು ಘಳಿಯ ಶಬುದ
ಉದಕದ ಬಿಂದು ಓ ಓ ಬಾಳೆ
ಮಹಾಲಿಂಗ ಗಜೇಶ್ವರನಲ್ಲಿ ಉದಕ ದಿಟವೆಂದೆನು.

ನೋಟಕ್ಕೆಯೂ ಕೂಟಕ್ಕೆಯೂ ಕಣ್ಣು ಮನವೆರಸವವ್ವಾ
ಅವ್ವಾ, ಕಂಗಳು ತಪ್ಪಿ ನೋಡಲಮ್ಮೆ ;
ಅಮ್ಮೆ ಕೇಳೆಲೆಯವ್ವಾ
ಅವ್ವಾ, ಕಿವಿಗಳ ತಪ್ಪಿ ಕೇಳಲಮ್ಮೆ ;
ಅಮ್ಮೆ ಕೇಳೆಲೆಯವ್ವಾ.
ಅವ್ವಾ, ಕಲಿಗಳಾಗದಲ್ಲಿ ಸೋತಂತೆ
ತನು ಮನ ಧನದ ಭಂಗವಳಿದು ನೆರೆಯನವ್ವಾ
ಮಹಾಲಿಂಗ ಗಜೇಶ್ವರನವ್ವಾ.

ನೆನಹಿನ ನಲ್ಲನು ಮನೆಗೆ ಬಂದಡೆ ನೆನೆವುದಿನ್ನಾರ ಹೇಳವ್ವಾ.
ನೆರೆವ ಕ್ರೀಯೆಲ್ಲಿ ಸುಖಿಸುವದಲ್ಲದೆ, ನೆನವುದಿನ್ನಾರ ಹೇಳವ್ವಾ.
ನೆನೆದೆನೆಂಬ ಭರವೇಕವ್ವಾ.
ಮಹಾಲಿಂಗ ಗಜೇಶ್ವರದೇವರ ಕಂಡಲ್ಲಿ ಅಗಲಿದಡೆ
ಕರಿಗೊಂಬಲ್ಲಿ ನಾನೇನು ಕಲುಮನದವಳೆ ಕೇಳವ್ವಾ.

ಭಕ್ತಿ ಸಮ್ಮೇಳ ಎತ್ತಿದ ಹಳವಿಗೆ ಸುತ್ತಲೂ ಬೇವಿನ ದಂಡೆ
ರಣರಂಗ ಹಾಸಿನ ಮೇಲೆ.
ಸಮಕಳೆ ಸಮರತಿ ನೆರೆವ ಭರದಲ್ಲಿ.
ಎಲೆ ಬಿದ್ದ ಮಸಿಯನರಿಯದಿದ್ದಳು.
ರಣರಂಗ ಸಂಯೋಗ ವಿಯೋಗ ಬ್ರಹ್ಮಸಮಾಧಿ
ಮಹಾಲಿಂಗ ಗಜೇಶ್ವರನೇಕೋಭಾವ.

ಈ ಮೇಲಿನ ವಚನಗಳಲ್ಲಿ ಅಂಗಾಂಗಗಳೆಲ್ಲವು ಲಿಂಗಮಯವಾದ ಪರಿಯಿದು ಮಾಂಸಪಿಂಡವಳಿದು ಮಂತ್ರಪಿಂಡವಾದ ಬಗೆ ಇದಾಗಿದೆ. ಮನುಷ್ಯ ಜನ್ಮ ತೊಡೆದು ದೇವಜನ್ಮ ಮಾಡಿದ ನಿಲವಿದು. ಜೀವಾತ್ಮ ಪರಮಾತ್ಮನಾದ ರೀತಿ ಇದಾಗಿದೆ. ಲಿಂಗಾಂಗ ಸಾಮರಸ್ಯದ ಚರಮ–ಪರಮ ಸೀಮೆ ಇದು. ಇದಕ್ಕಿಂತ ಕಾವ್ಯಮಯವಾಗಿ ಹೇಳಲು ಸಾಧ್ಯವಿಲ್ಲ. ಅದೆಷ್ಟು ಸೂಕ್ಷ್ಮವಾಗಿ ನವಿರಾಗಿ ಭಾವನೆಗಳ ಅಲೆಗಳನ್ನು ಇಲ್ಲಿ ಜೋಡಿಸಿದ್ದಾನೆ ಮಸಣಯ್ಯ. ಅವನ ಅನುಭವ–ಅನುಭಾವ ವೈಶಿಷ್ಟ್ಯ ಪೂರ್ಣವಾಗಿವೆ – ಅರ್ಥಪೂರ್ಣವಾಗಿವೆ. ದೇವನೊಂದಿಗೆ ಒಂದಾದ ಬಗೆಯನ್ನು ತಿಳಿಸುವ ಮೋಡಿ, ವೈಖರಿ, ಆಶ್ಚರ್ಯಕರ. ಮಾನವನು ಮಹಾಮಾನವನ್ನಾಗಿ ದೇವಮಾನವನಾಗಬೇಕಾದರೆ ಲಿಂಗತತ್ವವನ್ನು ಅಳವಡಿಸಿಕೊಂಡಾಗಲೇ ಸಾಧ್ಯವಾಗುವುದು. ಇದು ಅತ್ಯಂತ ಸರಳವಾದ, ಸುಲಭವಾದ ಮಾರ್ಗ. ಅಂತೆಯೇ ಹಠಯೋಗ, ಲಯಯೋಗ, ರಾಜಯೋಗ, ಮಂತ್ರಯೋಗ ಮೊದಲಾದವುಗಳಿಗಿಂತಲೂ 'ಲಿಂಗಾಂಗಯೋಗ' ಶ್ರೇಷ್ಠವಾದದ್ದು. ಇದು ಶಿವಯೋಗ ಆದುದರಿಂದಲೇ ಮೈಲಾರ ಬಸವಲಿಂಗ ಶರಣರು –

"ಹಲವುಯೋಗವ ಮಾಡಿ ಫಲವೇನು ಮಗನೆಯೆ
ದೊಲಿದು ಲಿಂಗಾಂಗ ಸುಲಭ ಯೋಗದ ನೋಡ
ಗಲಿಸಿದ ಗುರುವೆ – ಕೃಪೆಯಾಗು"[೨].

ಎಂಬುದಾಗಿ ಮುಕ್ತಕಂಠದಿಂದ ಹಾಡಿಹೊಗಳಿರುವುದನ್ನು ಇಲ್ಲಿ ಗಮನಿಸಬೇಕು. 'ಶಿವಯೋಗ' ಭಾರತೀಯ ಆಧ್ಯಾತ್ಮ ಕ್ಷೇತ್ರಕ್ಕೆ ಶರಣರು ಕೊಟ್ಟ ಅಮೋಘ ಕಾಣಿಕೆಯೆಂಬುದನ್ನು ಮರೆಯಲಾಗದು.

೨. ಮೈಲಾರ ಬಸವಲಿಂಗ ಕೃತಿಗಳು : ಸಂ : ಶಿ. ಶಿ. ಬಸವನಾಳ. ಪುಟ ಸಂಖ್ಯೆ : ೧೦೬.

ನೋಟ ಮತ್ತು ಕೂಟಕ್ಕೆ ಕಣ್ಣು ಮತ್ತು ಮನಸ್ಸು ಬೆರೆಸುವೆನು. ಕಣ್ಣುಗಳು ತಪ್ಪಿ ನೋಡಬಹುದು. ಕಿವಿಗಳ ತಪ್ಪಿ ಕೇಳಬಹುದು. ಆದರೆ ಕಲಿಗಳಾಗದಲ್ಲಿ ಸೋತಂತೆ ನಾನು ತನು-ಮನ-ಧನ ಕಳೆದುಕೊಂಡಾಗ ಮಾತ್ರ ಮಹಾಲಿಂಗ ಗಜೇಶ್ವರನನ್ನು ಸೇರಲು ಸಾಧ್ಯವೆಂದು ಗಜೇಶ ಮಸಣಯ್ಯ ಹೇಳುತ್ತಾನೆ.

೫) ಲಿಂಗಪತಿಯಲ್ಲಿ ಶರಣಸತಿ ಬೆರೆತು ಬೇರಿಲ್ಲದಂತಾಗುವುದು :

ಮಸಣಯ್ಯ ಲಿಂಗಪತಿಯೊಡನೆ ಅಂತರಂಗದಲ್ಲಿ ಬೆರೆತು ಬೇರಿಲ್ಲದಂತಾಗಿ ಸುಖಿಸಿದ ಶರಣಸತಿ ತನ್ನ ಇರವನ್ನ ಸಂಪೂರ್ಣ ಅವನಲ್ಲಿ ಇಲ್ಲವಾಗಿಸುತ್ತಾಳೆ; ಲಿಂಗವಾಗುತ್ತಾಳೆ. ಅವನಲ್ಲಿ ಬೆರೆತು ಅಭೇದ ಸ್ಥಿತಿಯನ್ನು ಹೊಂದಿದಾಗ ಪತಿ ಯಾರು ಎಂಬುದೇ ತಿಳಿಯುವುದಿಲ್ಲ. ಎರಡು ಒಂದಾಗುತ್ತದೆ. ಹೀಗಿರುವಾಗ ಹೇಳಿದ ವಚನಗಳು –

ಬಾಲಕ ಹಾಲ ಸವಿದಂತೆ,
ಮರುಳಿನ ಮನದ ಹರ್ಷದಂತೆ,
ಮೂಗರು ಕಂಡ ಕನಸಿನಂತೆ,
ಬಂಜೆಯ ಮನದ ನೇಹದಂತೆ,
ನೆಯಿ ಆರಿದ ನೆಳಲಂತೆ,
ಮಹಾಲಿಂಗ ಗಜೇಶ್ವರನೊಲವು ನೋಡವ್ವಾ.

ಎನ್ನ ಕಡೆಗಣ್ಣು ಕೆಂಪಾಯಿತವ್ವಾ.
ಎನ್ನ ನಳಿತೋಳು ಉಡುಗಿದವವ್ವಾ.
ಇಕ್ಕಿದ ಹವಳದ ಸರ ಬೆಳುಹಾದವವ್ವಾ.
ಮುಕ್ತಾಫಳ ಹಾರದಿಂದ ಅನು ಬೆಂದೆನವ್ವಾ
ಇಂದೆನ್ನ ಮಹಾಲಿಂಗ ಗಜೇಶ್ವರನು
ಬಹಿರಂಗವನೊಲ್ಲದ ಅಂತರಂಗದಲಿ ನೆರೆದ ಕಾಣೆ ಅವ್ವಾ !

ಅಖಂಡ ಪರಿಪೂರ್ಣಲಿಂಗ ತಾನೆಯಾದ ಶರಣಂಗೆ
ಲಿಂಗವೆಂಬುದೇನು ಹೇಳಾ?
ಲಿಂಗ ಒಳಗೊ ಹೊರಗೊ ಎಂದು ಶಂಕಿಸಿ ನುಡಿವ ಶಂಕಿತರಂತಿರಲಿ.

ಮುನ್ನ ಮುನ್ನವೆ ಮಹಾಲಿಂಗವಾದ ಬಳಿಕ ಮತ್ತೇನೆಂದು ನೆನೆಯಲಿಲ್ಲ.
ಮಹಾಲಿಂಗ ಗಜೇಶ್ವರನಲ್ಲಿ ನಿಜೈಕ್ಯವಾದ ಶರಣಂಗೆ
ಮುಂದೆ ಒಂದೂ ಇಲ್ಲ, ಮಾಣು.

ಸಮರಸದೊಳಗಣ ಸ್ನೇಹ
ಮತ್ಸ್ಯ ಕೂರ್ಮ ವಿಹಂಗದಂತೆ;
ಸ್ನೇಹದ ನೋಟದಲ್ಲಿಯೇ ತೃಪ್ತಿ,
ಸ್ನೇಹದ ನೆನಹಿನಲ್ಲಿಯೇ ತೃಪ್ತಿ,
ಸ್ನೇಹದ ಸ್ಪರ್ಶನದಲ್ಲಿಯೇ ತೃಪ್ತಿ,
ಈ ಪರಿಯಲ್ಲಿ ಎಮ್ಮ ಮಹಾಲಿಂಗ ಗಜೇಶ್ವರನಲ್ಲಿ ಲಿಂಗೈಕ್ಯವು
ವಾರಿಕಲ್ಲ ಪುತ್ಥಳಿ ಕರಗಿ ಅಪ್ಪುವನೊದಗೂಡಿದಂತಾಯಿತ್ತು.

ಹಗಲು ಮನಿಸಿಂಗಂಜಿ ಇರುಳು ಕನಸಿಂಗಂಜಿ
ಧ್ಯಾನ ಮೋನಿಯಾಗಿರ್ದಳವ್ವೆ.
ಸಖಿ ಬಂದು ಬೆಸಗೊಂಡಡೆ,
ಏನೆಂದು ಹೇಳುವಳವ್ವೆ ಏನೆಂದು ನುಡಿವಳವ್ವೆ?
ಸಾಕಾರದಲ್ಲಿ ಸವೆಸವೆದು ನಿರಾಕಾರದಲರ್ಪಿಸಿದೆಡೆ
ಮಹಾಲಿಂಗ ಗಜೇಶ್ವರನುಮೇಶ್ವರನಾಗಿರ್ದನವ್ವೆ.

ಹೊಸ ಮದುವೆ ಹಸೆಯುಡುಗದ ಮುನ್ನ,
ಹೂಸಿದ ಅರಿಸಿನ ಬಿಸಿಲಿಂಗೆ ಹರಿಯದ ಮುನ್ನ,
ತನು ಸಂಚಲವಡಗಿ ಮನವು ಗುರುಕಾರುಣ್ಯವ ಪಡೆದು
ಹುಸಿಯಿಲ್ಲದಿರ್ದಡೆ ಭಕ್ತನೆಂಬೆ !
ಹಿಡಿಹಿಂಗಿಲ್ಲದಿರ್ದಡೆ ಮಾಹೇಶ್ವರನೆಂಬೆ !
ತನುವಿಲ್ಲದಿರ್ದಡೆ ಪ್ರಸಾದಿಯೆಂಬೆ !
ಜೀವವಿಲ್ಲದಿರ್ದಡೆ ಪ್ರಾಣಲಿಂಗಿಯೆಂಬೆ !
ಆಶೆಯಿಲ್ಲದಿರ್ದಡೆ ಶರಣನೆಂಬೆ !
ಈ ಐದರ ಸಂಪರ್ಕ ನಿರ್ಭೋಗವಾದಡೆ ಐಕ್ಯನೆಂಬೆ !
ಐಕ್ಯದ ಸಂತೋಷ ಹಿಂಗಿದಡೆ ಜ್ಯೋತಿರ್ಮಯನೆಂಬೆ !

ಈ ಹೀಂಗಾದ ದೇಹವನಿರಿದಡರಿಯದು ತರಿದಡರಿಯದು.
ಬೈದಡಿರಿಯದು ; ಹೊಯ್ದಡರಿಯದು.
ನಿಂದಿಸಿದಡಿರಿಯದು ; ಸ್ತುತಿಸಿದಡರಿಯದು.
ಸುಖವನರಿಯದು ; ದುಃಖವನರಿಯದು.
ಇಂತಿವರ ತಾಗು ನಿರೋಧವನರಿಯದಿರ್ದಡೆ
ಅವರ ಮಹಾಲಿಂಗ ಗಜೇಶ್ವರನೆಂಬೆ.

ಲಿಂಗಪತಿಯಲ್ಲಿ ಶರಣಸತಿಯ ಐಕ್ಯವು ಆಲಿಕಲ್ಲು ಪುತ್ಥಳಿ ಕರಗಿ ಅಪ್ಪುವಿಗೊಡಗೂಡಿದಂತಾಗುತ್ತದೆ. ಜ್ಯೋತಿ ಪರಂಜ್ಯೋತಿಯಲ್ಲಿ ಬೆರೆತು ಹೋಗುತ್ತದೆ. ಬಯಲಿನಲ್ಲಿ ಬಯಲು ಕೂಡಿ ಕುರುಹಳಿದು ಪರಮಶಾಂತಿ ಮಾತ್ರ ಉಳಿಯುತ್ತದೆ.

ನಿಜವಾಗಿಯೂ ಇದೊಂದು ಅವರ್ಣನೀಯ ಅನುಪಮವಚನ. ಭಾವ–ಭಾಷೆ ಶಕ್ತಿಪೂರ್ಣವಾಗಿದೆ – ಮಾರ್ಗದರ್ಶಿಯಾಗಿದೆ. ಸೂತ್ರಪ್ರಾಯ ವಿಭೂತಿರುದ್ರಾಕ್ಷಿ ಮಂತ್ರದಿಂದ ಜಪಿಸಿ, ಪಾದೋದಕ ಪ್ರಸಾದ ಪಡೆಯುವುದೇ ವೀರಶೈವ ಧರ್ಮದಲ್ಲಿ ಬೆಳೆದುಬಂದ ರೀತಿ–ನೀತಿಯಾಗಿದೆ. ಗುರಿ ಸಾಧನೆಗಾಗಿ ಅಷ್ಟಾವರಣಗಳೇ ಲಿಂಗ, ಪಂಚಾಚಾರವೇ ಪ್ರಾಣ, ಷಟಸ್ಥಳಗಳೇ ಆತ್ಮವಾಗಿವೆ. ಇಲ್ಲಿ ಪತಿ ಯಾರು, ಸತಿ ಯಾರು ಎಂಬ ಭೇದ – ಭಾವನೆಗಳೇ ಅಳಿದು ಹೋಗಿವೆ. ಎರಡೂ ಒಂದಾದ ಸ್ಥಿತಿಯನ್ನು ವರ್ಣಿಸಲಾಗಿದೆ. ಬಯಲು ಬಯಲನೇ ಬೆರೆತ ರೀತಿಯಿದು. ಕೊನೆಗವಳ ಕೂಗು ಕೇಳಿತು, ಲಿಂಗದೇವನಿಗೆ. ಅಂಗದ ಕೂಗು ಅಂತರಂಗದ ಕೂಗಾಗುತ್ತಲೆ ಸಾಗಿ ಬಂದ ಲಿಂಗಯ್ಯ.

ಗಜೇಶ ಮಸಣಯ್ಯ ತನ್ನ ದೈವವಾದ ಮಹಾಲಿಂಗ ಗಜೇಶ್ವರನಲ್ಲಿ ಸೇರಿಕೊಂಡ ಮೇಲೆ ಲಿಂಗ ದೇಹದ ಒಳಗೂ ಹೊರಗೂ ಎಂದು ಸಂಶಯ ತಾಳುವ ಅವಶ್ಯಕತೆಯಿಲ್ಲ ಎಂದೆನ್ನುತ್ತಾನೆ. ತಾನು ಬೇರೆ ದೈವವನ್ನು ಸ್ಮರಿಸದೆ ತನ್ನಲ್ಲಿಯೇ ಗಜೇಶ್ವರ ಅಡಗಿಕೊಂಡಿದ್ದಾನೆ. ಸಮಾನವಾದ ಭಾವನೆಗಳಿಂದ ಪ್ರೀತಿ, ಮೀನು, ಆಮೆಗಳು, ನೀರಿನಲ್ಲಿ ಪ್ರೀತಿಯಿಂದ ಇರುತ್ತವೆ. ಮಹಾಲಿಂಗ ಗಜೇಶ್ವರನ ಸ್ನೇಹದ ನೋಟ, ನೆನಹು, ಸ್ಪರ್ಶದಿಂದ ತೃಪ್ತಿಸಿಗುತ್ತದೆಂದು ಮಸಣಯ್ಯನ ಅಭಿಪ್ರಾಯ.

ಹಗಲಿನಲ್ಲಿ ಮನಸ್ಸಿಗಂಜುವುದು, ರಾತ್ರಿಯಲ್ಲಿ ಕನಸಿಗಂಜುವುದು. ಆದರೆ ನನ್ನ ದೇಹವನ್ನು ಮಹಾಲಿಂಗ ಗಜೇಶ್ವರನಿಗೆ ಅರ್ಪಿಸಿದರೆ ಜೀವನ ಸಾರ್ಥಕವಾಗುತ್ತದೆ. ಕೊನೆಯ ವಚನದಲ್ಲಿ ಮಸಣಯ್ಯ ಷಟಸ್ಥಲದ ಮರ್ಮವನ್ನೆಲ್ಲ ಸ್ಪಷ್ಟಪಡಿಸಿದ್ದಾನೆ.

ಮಸಣಯ್ಯನಲ್ಲಿ ಕಂಡುಬರುವ ಮತ್ತೊಂದು ವಿಶೇಷ ಗುಣವೆಂದರೆ ಸಣ್ಣ ಸಣ್ಣ ನುಡಿಗಳಲ್ಲಿ ದೊಡ್ಡ ಅರ್ಥವನ್ನು ತುಂಬುವ ಕಲೆಗಾರಿಕೆ ಅವನದು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಒಟ್ಟಿನಲ್ಲಿ ಗಜೇಶ ಮಸಣಯ್ಯ ವಿಶಿಷ್ಟ ಭಾವ–ಸ್ವಭಾವ, ವಚನ ರಚನೆ ಹಾಗೂ ಭಾಷಾ–ಶೈಲಿಗಳಿಂದ ಶಿವಶರಣರಲ್ಲಿ ಒಬ್ಬ ಶ್ರೇಷ್ಠ ವಚನಕಾರ ಎಂದು ಸ್ಥಾನ ಗಳಿಸಕೊಂಡಿದ್ದಾನೆ. 'ತತ್ವಕ್ಕೆ ತೊತ್ತಾಗಿ, ಸತ್ಯಕ್ಕೆ ತೊತ್ತಾಗಿ, ನಿತ್ಯಕ್ಕೆ ತೊತ್ತಾಗಿ ಬಾಳಿ ಮುಕ್ತರಾದವರ ಮಾಲಿಕೆಯಲ್ಲಿ ಮಸಣಯ್ಯನವರಿಗೊಂದು ಮನ್ನಣೆಯ ಸ್ಥಾನವಿದೆ'[೧].

ಅಖಂಡ ಪರಿಪೂರ್ಣ ತಾನೆಯಾದ ಶರಣ ಸ್ಥಿತಿ ಬಯಲು ಬೆರಸಿದಂತೆ, ಕ್ಷೀರ ಕ್ಷೀರಬೆರೆಸಿದಂತೆ ಉರಿಕರ್ಪೂರ ಸಂಯೋಗವಾದಂತೆ ನದಿ ನದಿಯ ಕೂಡಿದಂತೆ ಜ್ಯೋತಿ ಜ್ಯೋತಿ ಒಂದಾದಂತೆ, ಮಸಣಯ್ಯ ಮಹಾಲಿಂಗ ಗಜೇಶ್ವರನಲ್ಲಿ ನಿಜೈಕ್ಯನಾದನು.

---

೧. ಶರಣ ಚರಿತಾಮೃತ – ಸಿದ್ಧಯ್ಯಾ ಪುರಾಣಿಕ : ಪುಟ ಸಂಖ್ಯೆ : ೧೯೫

ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ ಮಸಣಮ್ಮನ ವಚನಗಳು :

೧

ಸರ್ವಜನಸನುಮತವೆಂಬ ಮಾತು ಸಾಮಾನ್ಯವೆ ಅವ್ವಾ?
ತಾಮೆಚ್ಚ; ಕಲಿಯಾಗಿಪ್ಪವರ ಕೆಲ ಮೆಚ್ಚ
ಸುಖಿಯಾಗಿಪ್ಪವರ ಒಬ್ಬರನಾದಡೂ ಕಾಣೆನವ್ವಾ
ತಾಸತ್ತು ಹೆರರ ಕೊಂದವಸ್ಥೆಯ ಚಂದವ ಚಂದ್ರಮತಿಯಲ್ಲಿ ಕಂಡೆನು
ಇಂದು ಕಂಡೆನು ಮಹಾಲಿಂಗ ಮಸಣಯ್ಯಗಳಲ್ಲಿ
ಗಜೇಶ್ವರದೇವರು ಮಾಡಿತ್ತ.

ಈ ವಚನದಲ್ಲಿ ಸೃಷ್ಟಿಯ ಉತ್ಪತ್ತಿಯನ್ನು ಕುರಿತು ಹೇಳಿ, ಎಲ್ಲರೂ ಸಮಾನರು ಎಂಬ ಮಾತನ್ನು ತಿಳಿಸಿ, ತಾನು ಕಷ್ಟದಲ್ಲಿದ್ದರೂ ಇತರರಿಗೆ ಸಹಾಯ ಅಥವಾ ಸುಖ ಬಯಸುವವನು ಮಸಣಯ್ಯ. ಅದು ಗಜೇಶ್ವರನಿಂದ ಸಾಧ್ಯ ಎಂದು ಹೇಳಿದ್ದಾನೆ.

೨

ಪಶದಿಂದಲಾಯಿತ್ತು ಪರಶಕ್ತಿ
ಪರಶಕ್ತಿಯಿಂದಲೊದಗಿದ ಭೂತಂಗಳು
ಭೂತಂಗಳಿಂದಲೊದಗಿದ ಅಂಗ
ಅಂಗಕ್ಕಾದ ಕರಣೇಂದ್ರಿಯಂಗಳು
ಇಂದ್ರಿಯಂಗಳಿಂದೊದಗಿದ ವಿಷಯಂಗಳು
ಆ ವಿಷಯಂಗಳ ಪರಮುಖಕ್ಕೆ ತಾ ಶಕ್ತಿಯಾಗಿ ಭೋಗಿಸಬಲ್ಲಡೆ
ಆತ ನಿರ್ಲೇಪ ಮಸಣಯ್ಯ ಗಜೇಶ್ವರಾ.

ಪರರಿಂದ ಪರಶಕ್ತಿ, ಪರಶಕ್ತಿಯಿಂದ ಪಂಚಭೂತಂಗಳು, ಪಂಚಬೂತಂಗಳಿಂದ ಅಂಗ, ಅಂಗದಿಂದ ಕರಣೇಂದ್ರಿಯಂಗಳು, ಇಂದ್ರಿಯಗಳಿಂದ ವಿಷಯಂಗಳು – ಉತ್ಪತ್ತಿಯಾಗಿವೆ. ಆದರೆ ಆ ವಿಷಯಂಗಳನ್ನು ಪರಮ ಸುಖಕ್ಕೆ ಶಕ್ತಿಯಾಗಿ ಭೋಗಿಸಬೇಕು. ಅಂದಾಗಲೇ ಮೋಕ್ಷ ಎಂಬುದು ಇಲ್ಲಿ ಪ್ರತಿಪಾದಿತವಾದ ವಿಷಯವಾಗಿದೆ.

೩

ಗುರು ಕೊಟ್ಟ ಪಾದ ತೀರ್ಥಪ್ರಸಾದ ವಿಭೂತಿ ರುದ್ರಾಕ್ಷಿ
ಪ್ರಣವ ಪಂಚಾಕ್ಷರಿಯ ಅನ್ಯರಿಗೆ ಕೊಡಬಹುದೆ? ಕೊಡಬಾರದು
ಆ ಗುರುವಿಂಗೆ ಕೊಡಬೇಕು : ಆಗುರುವಲ್ಲದೆ ಈಸಿಕೊಳ್ಳಲರಿಯನಾಗಿ
ಇಂತಲ್ಲದೆ ಗುರುಸಂಬಂಧಕ್ಕೆ ಬೆರೆವ ಗುರುದ್ರೋಹಿಯನೇನೆಂಬೆ
ಮಸಣಯ್ಯ ಪ್ರಿಯ ಗಜೇಶ್ವರಾ.

ಈ ವಚನದಲ್ಲಿ ಗುರು ಶಿಷ್ಯರ ಸಂಬಂಧವನ್ನು ಕುರಿತು ಹೇಳಿದ್ದಾಳೆ. ಗುರು ಕೊಡುವ ಪಂಚಾಕ್ಷರಿಯನ್ನು ಬೇರೆಯವರಿಗೆ ಕೊಡಬಾರದೆಂದು ಹೇಳಿ, ಗುರುದ್ರೋಹಿಯಾಗಬಾರದೆಂದು ತಿಳಿಸಿದ್ದಾಳೆ.

೪

ಪರಂಜ್ಯೋತಿ ಗುರುವಿನಿಂದ ತನಗೆ
ಲಿಂಗಾನುಗ್ರಹ ಪ್ರಣವ ಪಂಚಾಕ್ಷರಿ ಅಳವಟ್ಟಿರಲು
ಅದಕಂಡು ಮತ್ತೊಬ್ಬ ಗುರುಕರುಣವಾದಾತ ಬರಲು
ಆ ಲಿಂಗಾನುಗ್ರಹ ಪ್ರಣವ ಪಂಚಾಕ್ಷರಿಯನಾತಂಗೀಯಲು
ಆತಂಗೆ ತಾನು ಗುರುವೆನಬಹುದೇ? ಎನ್ನಬಾರದು
ಆತನೂ ತಾನೂ ಆ ಪರಂಜ್ಯೋತಿಯ ಅಣತಿವಿಡಿದವರಾಗಿ
ಇಬ್ಬರೂ ದಾಯಾದರು.
ಆ ಪರಂಜ್ಯೋತಿಯ ಅಡಗಿದರಾಗಿ
ಗುರುವಿಂಗೆಯೂ ಶಿಷ್ಯಂಗೆಯೂ ಲಿಂಗಕ್ಕೂ ಭೇದವಿಲ್ಲ
ಮಸಣಯ್ಯಪ್ರಿಯ ಗಜೇಶ್ವರಾ.

ಈ ವಚನದಲ್ಲಿ ಒಬ್ಬ ಗುರುವಿನಿಂದ ದೀಕ್ಷೆ ಪಡೆದ ಮೇಲೆ ಬಂದ ಮತ್ತೊಬ್ಬ ಗುರುಕರುಣವಾದಾತನಿಗೆ ಆ ಲಿಂಗಾನುಗ್ರಹ ಪ್ರಣವ ಪಂಚಾಕ್ಷರಿಯನ್ನೇ ಕೊಟ್ಟು, ತಾನು ಗುರುವಾಗುವುದು ಸಾಧ್ಯವಿಲ್ಲ. ಏಕೆಂದರೆ ಅವರಿಬ್ಬರೂ ಆ ಪರಂಜ್ಯೋತಿಯ ಅಣತಿವಿಡಿದರಾಗಿ ಇಬ್ಬರೂ ರಕ್ತಸಂಬಂಧಿಗಳಾದರು. ಆದ್ದರಿಂದ ಅವನು ಲಿಂಗಾನುಗ್ರಹವನ್ನು ಮಾಡಬಾರದು ಎಂದು ಹೇಳಿ ಕೊನೆಯಲ್ಲಿ ಗುರು–ಶಿಷ್ಯ–ಲಿಂಗ ಮೂರು ಆ ಪರಂಜ್ಯೋತಿಯಲ್ಲಿ ಅಡಗಿದುದರಿಂದ ಅವರ ನಡುವೆ ಯಾವ ಭೇದವಿಲ್ಲ ಎಂದಿದ್ದಾಳೆ.

೫

ಹೊನ್ನ ಬಿಟ್ಟ ಲಿಂಗವನೊಲಿಸಬೇಕೆಂಬರು
ಹೊನ್ನಿಂಗೆಯೂ ಲಿಂಗಕ್ಕೆಯೂ ವಿರುದ್ಧವೇ?
ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು.
ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೇ?
ಮಣ್ಣ ಬಿಟ್ಟು ಲಿಂಗವನೊಲಿಸಬೇಂಕೆಬರು.
ಮಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೇ?
ಅಂಗವ ಬಿಟ್ಟು ಲಿಂಗವನೊಲಿಸಬೇಕೆಂಬರು
ಅಂಗಕ್ಕೆಯೂ ಲಿಂಗಕ್ಕೆಯೂ ವಿರುದ್ಧವೇ?
ಇಂದ್ರಿಯಗಳ ಬಿಟ್ಟು ಲಿಂಗವನೊಲಿಸಬೇಕೆಂಬರು
ಇಂದ್ರಿಯಗಳಿಗೂ ಲಿಂಗಕ್ಕೆಯೂ ವಿರುದ್ಧವೇ?
ಜಗವ ಬಿಟ್ಟು ಲಿಂಗವನೊಲಿಸಬೇಕೆಂಬರು
ಜಗಕ್ಕೆಯೂ ಲಿಂಗಕ್ಕೆಯೂ ವಿರುದ್ಧವೇ?
ಇದು ಕಾರಣ. ಪರಂಜ್ಯೋತಿ ಪರಮ ಕರುಣೆ, ಪರಮಶಾಂತನೆಂಬಲಿಂಗವು
ಕೋಪದ ಮುನಿಸನರಿದಡೆ ಕಾಣಬಹುದು. ಮರೆದಡೆ ಕಾಣಬಾರದು.
ಅರಿವಿಂದೆ ಕಂಡೊದಗಿದ ಸುಖವು ಮಸಣಯ್ಯಪ್ರಿಯ ಗಜೇಶ್ವರಾ.

ಈ ವಚನದಲ್ಲಿ ಹೊನ್ನು, ಹೆಣ್ಣು, ಮಣ್ಣು, ಅಂಗ, ಇಂದ್ರಿಯ, ಜಗತ್ತು ಇವುಗಳಿಗೂ ಲಿಂಗಕ್ಕೂ ವಿರೋಧವಿಲ್ಲ. ಇವುಗಳನ್ನು ಹೊಂದಿಯೇ ಲಿಂಗವನ್ನು ಕಾಣುವುದು ವೀರಶೈವ ಸಿದ್ಧಾಂತದ ವಿಶಿಷ್ಟತೆ. ಅದನ್ನು ಈಕೆ ಇಲ್ಲಿ ವಿಸ್ತೃತವಾಗಿ ವಿವರಿಸಿದ್ದಾಳೆ. ಅರಿವಿಂದ ಕಂಡೊದಗಿದ ಸುಖವೇ ನಿಜ ಸುಖ ಎಂಬುದನ್ನು ಸಾರಿದ್ದಾಳೆ.

೬

ಗುರುವಿಗೆ ಗುರುವಾಗಿ ಎನಗೆ ಗುರುವಾದನಯ್ಯಾ ಬಸವಣ್ಣನು
ಜಂಗಮಕ್ಕೆ ಜಂಗಮವಾಗಿ ಎನಗೆ ಜಂಗಮವಾದನಯ್ಯಾ ಪ್ರಭುದೇವರು
ಪ್ರಸಾದಕ್ಕೆ ಪ್ರಸಾದವಾಗಿ ಎನಗೆ ಪ್ರಸಾದವಾದನಯ್ಯಾ ಮರುಳಶಂಕರದೇವರು
ಬಸವಣ್ಣನಿಂದ ಶುದ್ಧ ಪ್ರಸಾದಿಯಾದೆನು

ಚನ್ನಬಸವಣ್ಣನಿಂದ ಸಿದ್ಧಪ್ರಸಾದಿಯಾದೆನು
ಪ್ರಭುದೇವರಿಂದ ಪ್ರಸಿದ್ಧಪ್ರಸಾದಿಯಾದೆನು
ಮರುಳಶಂಕರದೇವರಿಂದ ಮಹಾ ಪ್ರಸಾದಿಯಾದೆನು
ಇಂತೀ ಚತುರ್ವಿಧವೆನ್ನ ಸರ್ವಾಂಗದಲ್ಲಿ ಕರೆಗೊಂಡು
ಎಡದೆರಹಿಲ್ಲದೆ ಪರಿಪೂರ್ಣವಾಯಿತ್ತು
ಮಸಣಯ್ಯಪ್ರಿಯ ಗಜೇಶ್ವರಾ
ನಿಮ್ಮ ಶರಣರ ಪಾದಕ್ಕೆ ನಮೋ ನಮೋ ಎನುತಿರ್ದೆನು.

ಈ ವಚನದಲ್ಲಿ ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭು, ಮರುಳಶಂಕರದೇವರಿಂದ ಪಡೆದ ಪ್ರಸಾದವನ್ನು ಕುರಿತು ವಿವರಿಸಿದ್ದಾಳೆ.

೭

ಎನ್ನನರಿಯಿಸದಿರುವೆ, ಎನ್ನನರಿಯಿಸು, ನಿನ್ನನರಿಯಿಸಬೇಡ
ಎನ್ನನರಿಯದವ ನಿನ್ನನರಿಯ
ಎನ್ನನರಿಯಿಸದೆ ನಿನ್ನನರಿಯಿಸಿದಡೆ
ನೀನೆನಗೆ ಗುರುವಲ್ಲ. ನಾ ನಿನಗೆ ಶಿಷ್ಯನಲ್ಲ.
ಎನ್ನನರಿಯಿಸಿದಡೆ. ನೀನೆನಗೆ ಗುರು. ನಾ ನಿನಗೆ ಶಿಷ್ಯ
ಮಸಣಯ್ಯಪ್ರಿಯ ಗಜೇಶ್ವರಾ.

ಈ ವಚನದಲ್ಲಿ ಗುರು-ಶಿಷ್ಯರ ಸಂಬಂಧವನ್ನು ಕುರಿತು ವಿವರಿಸಲಾಗಿದೆ. ಗುರು ನಿರ್ವಹಿಸಬೇಕಾದ ಕಾರ್ಯವನ್ನು ಸ್ಪಷ್ಟವಾಗಿ ಹೇಳಲಾಗಿದೆ. ಗುರು-ಶಿಷ್ಯನು ತನ್ನನ್ನು ತಾನು ತಿಳಿದುಕೊಳ್ಳುವಂತೆ ಮಾಡಬೇಕೇ ಹೊರತು ಗುರುವನ್ನು ಅರಿಯುವಂತಾಗಬಾರದು. ತನ್ನನ್ನು ತಾನು ತಿಳಿದುಕೊಂಡಾಗಲೆ ಪರಶಿವನನ್ನು ತಿಳಿಯಲು ಸಾಧ್ಯ. ಹೀಗೆ ತನ್ನನ್ನು ತಿಳಿಸಿಕೊಡುವ ಗುರು ಕೊಟ್ಟ ಲಿಂಗದಿಂದ ಬದುಕನ್ನು ಸಾಗಿಸಬೇಕು ಎಂದಿದ್ದಾಳೆ. ಹೀಗೆ ಇಲ್ಲಿ ಗುರುವಿನ ಅನುಗ್ರಹದ ಮಹತ್ವವನ್ನು ಸಾರಲಾಗಿದೆ.

೮

ಅಂಗದ ಮೇಲಣ ಲಿಂಗವು ಲಿಂಗವಲ್ಲ,
ಮನದ ಮೇಲಣ ಲಿಂಗವು ಲಿಂಗವಲ್ಲ,
ಭಾವದ ಮೇಲಣ ಲಿಂಗ ಲಿಂಗವಲ್ಲ,
ಅಂಗದ ಮೇಲಣ ಲಿಂಗ ವ್ಯವಹಾರ,
ಮನದ ಮೇಲಣ ಲಿಂಗ ಸಂಕಲ್ಪ,
ಭಾವದ ಮೇಲಣ ಲಿಂಗ ಭ್ರಾಂತುತತ್ವ
ಆಳಿನ ಆಳು ಅರಸನಪ್ಪನೆ, ಆಳನಾಳುವನರಸಲ್ಲದೆ?
ಅಂಗ, ಪ್ರಾಣ, ಭಾವಂಗಳನೊಳಕೊಂಡಿರ್ಪುದೆ ಲಿಂಗ
ಕಾಣಾ, ಮಸಣಯ್ಯಪ್ರಿಯ ಗಜೇಶ್ವರಾ.

ಈ ವಚನದಲ್ಲಿ ಲಿಂಗತತ್ವದ ವಿಚಾರ ಮೂಡಿಬಂದಿದೆ. 'ಅಂಗ ಪ್ರಾಣ ಭಾವಂಗಳನೊಳಕೊಂಡಿರ್ಪುದೆ ಲಿಂಗ' ಎನ್ನುವ ಮಾತು ಮನೋಜ್ಞ; ಮನೋಹರ. ಆಕೆಯ ಅನುಭವಕ್ಕೆ ಉದಾಹರಣೆ ಅಂಗಗಳೆಲ್ಲವೂ ಲಿಂಗಮಯವಾಗಬೇಕು. ಸರ್ವಾಂಗಗಳು ಲಿಂಗಮಯವಾಗಬೇಕೆಂಬ ಭಾವ ಇಲ್ಲಿ ಮೂಡಿಬಂದಿದೆ. ಹಾಗೆಯೇ ಆಳಿನ ಆಳು ಅರಸನಪ್ಪನೆ ಆಳನಾಳುವನರಪನಲ್ಲವೆ? ಎಂಬ ಪ್ರಶ್ನೆಯು ಕೂಡಾ ವಿಚಾರ ಪ್ರಚೋದಕ. ಆಕೆಯ ಸ್ವತಂತ್ರವಾದ ಆಲೋಚನಾ ಶಕ್ತಿ ಇಲ್ಲಿ ವ್ಯಕ್ತವಾಗಿದೆ.

೯

ಶಿವನೆ ನೀನು ಗುರುವಾದೆ ಲಿಂಗವಾದೆ ಜಂಗಮವಾದೆ ಭಕ್ತನಾದೆ
ಗುರುವಾಗಿದ್ದು ಭಕ್ತನೊಳಡಗಿದೆ
ಅದೇನು ಕಾರಣವೆಂದಡೆ;
ಗುರುವಿಂಗೆ ಅರ್ಥಪ್ರಾಣಾಭಿಮಾನವನು ಕೊಟ್ಟು
ಆತ ಭೋಗಿಸಿದ ಬಳಿಕ
ತಾನಾ ಪ್ರಸಾದ ಮುಂತಾಗಿ ಭೋಗಿಸುವನಾಗಿ
ಆ ಗುರುವು ತನ್ನೊಳಡಗಿದ.
ಲಿಂಗವಾಗಿದ್ದೂ ಭಕ್ತನೊಳಡಗಿದೆ.

ಅದೇನು ಕಾರಣವೆಂದಡೆ;
ಲಿಂಗಕ್ಕೆ ಅರ್ಥಪ್ರಾಣಾಭಿಮಾನವನು ಕೊಟ್ಟ
ಆತ ಭೋಗಿಸಿದ ಬಳಿಕ
ತಾನಾ ಪ್ರಸಾದ ಮುಂತಾಗಿ ಭೋಗಿಸುವನಾಗಿ
ಆ ಲಿಂಗವು ಭಕ್ತನೊಳಡಗಿದೆ
ಅದೇನು ಕಾರಣವೆಂದಡೆ;
ಜಂಗಮಕ್ಕೆ ಅರ್ಥಪ್ರಾಣಾಭಿಮಾನವನು ಕೊಟ್ಟ
ಆ ಜಂಗಮವು ಭೋಗಿಸಿದ ಬಳಿಕ
ತಾನಾ ಪ್ರಸಾದ ಮುಂತಾಗಿ ಭೋಗಿಸುವನಾಗಿ
ಆ ಜಂಗಮವು ಭಕ್ತನೊಳಡಗಿದ
ಇಂತಡಗುವರೆ ಹಿರಿಯರು. ಇಂತಡಗುವರೆ ಗುರುವರು
ಇಂತಡಗುವರೆ ಮಹಿಮರು;
ಇವರಿಗೆ ಭಾಜನವೊಂದೆ ಭೋಜನವೊಂದೆ
ಈ ನಾಲ್ಕು ಒಂದಾದ ಘನಕ್ಕೆ ಪರಿಯಾಣ ಬೇರೆಂಬ
ಶಾಸ್ತ್ರದ ಸೂತಕಿಗಳನೆನಗೆ ತೋರದಿರಯ್ಯಾ
ಮಸಣಯ್ಯಪ್ರಿಯ ಗಜೇಶ್ವರಾ.

ಈ ವಚನದಲ್ಲಿ ಪರಮ ಶಿವನು ಗುರು–ಲಿಂಗ–ಜಂಗ ರೂಪಿನಲ್ಲಿರುವುದನ್ನು ವಿವರಿಸಿದ್ದಾಳೆ. ಶಿವನು ಗುರು ಲಿಂಗ ಜಂಗಮ ರೂಪದಲ್ಲಿ ಭೋಗಿಸಿದ ಪ್ರಸಾದವನ್ನ, ಭಕ್ತನು ಸ್ವೀಕರಿಸುವುದರಿಂದ ಆ ಮೂರು ಆತನಲ್ಲಡಗುವವು. ಇವರಿಗೆ ಭಾಜನವೊಂದೆ, ಭೋಜನವೊಂದೆ ಹೀಗೆ ಸ್ವೀಕರಿಸಿದ ನಂತರ ಗುರು–ಲಿಂಗ–ಜಂಗಮ ಮತ್ತು ಭಕ್ತ ಈ ನಾಲ್ಕು ಒಂದೇ ಆಗುವುದರಿಮದ ಅವು ಬೇರೆ ಎಂದು ಗಣಿಸಬಾರದು ಎಂಬುದನ್ನು ಇಲ್ಲಿ ಒತ್ತಿ ಹೇಳಿದ್ದಾಳೆ.

ಒಟ್ಟಿನಲ್ಲಿ ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ ಶ್ರೇಷ್ಠ ಶಿವಾನುಭವಿ, ಉತ್ತಮ ವಚನಕಾರ್ತಿ, ವೀರಶೈವ ಸಿದ್ಧಾಂತವನ್ನು ಸುಲಭವಾಗಿ ಸರಳವಾಗಿ ವಿವರಿಸಿದ್ದಾಳೆ. ‘ಲಿಂಗಾಂಗ ಯೋಗ’ದ ಲಕ್ಷಣಗಳನ್ನು ತನ್ನ ವಚನದಲ್ಲಿ ಹೇಳಿದ್ದಾಳೆ. “ಹೀಗೆ ಸೃಷ್ಟಿಯ ಉತ್ಪತ್ತಿ ಲಿಂಗಲಿಂಗ ಸಂಬಂಧ, ಗುರುವಿನ ಮಾರ್ಗದರ್ಶನ ಮೊದಲಾದವು ಈಕೆಯ ವಚನಗಳ ಮುಖ್ಯ ಆಶಯವಾಗಿದೆ”[೪].

---

೪. ಬಸವೇಶ್ವರರ ಸಮಕಾಲೀನರು – ವೀರಣ್ಣ ರಾಜೂರ.

ವಚನಗಳಲ್ಲಿ ಬರುವ ಕಾವ್ಯಾಂಶಗಳು :

ಗಜೇಶ ಮಸಣಯ್ಯನ ವಚನಗಳಲ್ಲಿ ಬರುವ ಸೂಳ್ನುಡಿಗಳು, ಉಪಮೆಗಳು, ಅಲಂಕಾರಗಳು ಮತ್ತು ನುಡಿಮುತ್ತುಗಳು ಕೊಡುವ ಅರ್ಥಗಳು ವಿಶಾಲವಾದವುಗಳು. ಇವು ಶಿವಾನುಭವದ ಅಪಾರ ಅನುಭವವನ್ನು ತಿಳಿಸುವ ನುಡಿಗಳಾಗಿವೆ.

೧) **ಸೂಳ್ನುಡಿಗಳು :**

೧. ಉಪ್ಪಿಲ್ಲದ ಊಟ ಸಪ್ಪೆ ಕಾಣಿರೋ.

೨. ತನು–ಮನ–ಧನ ಭಂಗವಳಿಯದೆ ನೆರೆಯನವ್ವಾ.

೩. ದೇವರ ನೆನೆದು ಮುಕ್ತರಾದೆವೆಂಬ
ಯುಕ್ತಿ ಶೂನ್ಯರ ಮಾತು ಕೇಳಲಾಗದು.

೪. ಮುನಿಸ ಮುನಿದಡೆ ಶ್ರೀಗಂಧದ
ಮುರುಡಿನ ಹಾಂಗಿರಬೇಕವ್ವಾ.

೫. ಕಾಮಗಂಜಿ ಚಂದ್ರಮನ ಮರೆಹೋಗಲು
ರಾಹು ಕೊಂಡಂತಾದಳವ್ವೆ.

೬. ಪರಿಮಳವಿಲ್ಲದ ಪುಷ್ಪದಂತಾದೆ ನೋಡವ್ವ
ಚಂದ್ರಮನಿಲ್ಲದ ನಕ್ಷತ್ರದಂತಾದೆ ನೋಡವ್ವ.

೭. ಮಾತಂಗಿಯ ಹೊಳೆಯಲ್ಲಿ ಉತ್ತಮನ ನೆಳಲು
ಸುಳಿದಡೆ ರೂಹು ಹೊಲೆಯನಾಗಬಲ್ಲುದೆ ಅಯ್ಯಾ?

೮. ನೇಹದ ಮುತ್ತು ಅಧರವ ತುಂಬಿತು.

೯. ಇದ್ದಲ ಹಿಂಡಿದಡೆ ರಸವುಂಟೆ?

೧೦. ಮಹಾಲಿಂಗ ಗಜೇಶ್ವರಯ್ಯನೊಬ್ಬನೆ ಶಾಶ್ವತನು.

೧೧. ಎನಗೆ ನಿಮ್ಮ ತೊತ್ತುತನವೇ ಸಾಕು.

೧೨. ಲಿಂಗ ಬಾರಯ್ಯ, ಎನ್ನ ದೇವ ಬಾರಯ್ಯ
ಎನ್ನಂತರಂಗದ ಪರಂಜ್ಯೋತಿ ಬಾರಯ್ಯ.

೧೩. "ಸ್ವಯಮಾತ್ಮ ಪರೋಲಿಂಗ" ವೆಂದುಲಿವ
ಬೀದಿಯ ಭಂಡರ ಮಾತ ಕೇಳಲಾಗದು.

೧೪. ಗುರುವನರಿಯಬಲ್ಲ ಶಿಷ್ಯ, ಶಿಷ್ಯನರಿಯಬಲ್ಲ ಗುರು
ಇವರಿಬ್ಬರ ಭೇದವ ನೀನು ಬಲ್ಲೆ ಗಜೇಶ್ವರಾ.

೧೫. ಉರಗನ ಬಾಯ ಕಪ್ಪೆಯಂತೆ ಸಂಸಾರ.

೨) ಉಪಮೆಯುಗಳು :

೧. ಇಂದುವಿನಲ್ಲಿ ಉದಯವಾದ ವಾರಿಕಲ್ಲಿನಂತೆ.

೨. ಋತುಕಾಲ ತಪ್ಪಿದ ಕೋಗಿಲೆಯಂತೆ ನುಡಿಯದಂತಿದ್ದಳಲ್ಲಾ.

೩. ಮೂಗ ಕಂಡ ಕನಸಿನಂತೆ, ಮೈಯರಿಯದ ನೆಳಲಿನಂತೆ.

೪. ಮಾಘಮಾಸದ ನವಿಲಿನಂತಾದೆ ನೋಡವ್ವ
ಇರುಳು ತೊಳಲುವ ಜಕ್ಕವಕ್ಕಿಯಂತೆ
ಹಲಬ ಹಲಬುತಿರ್ದೆ ನೋಡವ್ವ.

೫. ಕೋಗಿಲೆಗಳು ಹಳವಟ್ಟು ಹೋದ ಬನದಂತಾದೆ ನೋಡವ್ವಾ
ರಾಮರಾಡಿದ ಹೊಳಲಿನಂತಾದೆ ನೋಡವ್ವ.

೩) ಶಬ್ದಾಲಂಕಾರ :

೧. ಮನದ ಮರದ ಮದಾಳಿಯ ನೀಹದಂತಾದೆನವ್ವಾ

೨. ಪರಿಮಳವಿಲ್ಲ ಪುಷ್ಪ.....................

೩. ರಸದ ರುದ್ರಾಕ್ಷಿ ....

೪. ಮಾಗಿಯ ಕೋಗಿಲೆಯಂತೆ ಮೂಗನಾಗಿರ್ದೆನವ್ವಾ.

೫. ಕಂಗಳ ಕಾಳಗ

೬. ಮಿಂಚಿನ ಗೊಂಚಲು

೭. ಮುನಿಸ ಮುನಿದಡೆ

೮. ಸೋಕಿದಡೆ ಸಖಿಯಾದೆ

೪) ನುಡಿಮುತ್ತುಗಳು :

೧. ಅನಂತಾನಂತ ಕಾಲ ನಿತ್ಯವೆಂಬಿರೀ ಸಂಸಾರ ಇದು ಹುಸಿಕಂಡೆಲವೊ.

೨. ಅಪ್ಪಿನ ಸೋಂಕಿನ ಸುಖವನಗಲುವ ಮನಕಿಂದ ಬಂಜೆಯಾಗಿಪ್ಪುದು ಕರಲೇಸು.

೩. ಅರಸು ಮುನಿದಡೆ ಆಗಲೆ ಕೆಡುವಳು ತೊತ್ತು.

೪. ಆಲಿಕಲ್ಲು ನುಂಗಿದ ಚಕೋರದಂತಾದೆನವ್ವಾ.

೫. ಇದ್ದಿಲ ಹಿಂಡಿದಡೆ ರಸವುಂಟೆ?

೬. ಇಂದಿನಿಂದಿನ ಸುಖವಿಂದಿಂಗೆ ಪರಿಣಾಮ

೭. ಉಪ್ಪಿಲ್ಲದೂಟ ಸಪ್ಪೆ ಕಾಣಿರೊ

೮. ಉರಗನ ಬಾಯ ಕಪ್ಪೆಯಂತೆ ಸಂಸಾರ

೯. ಒಲಿದವರ ಕೊಲುವಡೆ ಮಸೆದ ಕೂರಲಗೇಕವ್ವಾ ಅವನೊಲ್ಲೆಂದರೆ ಸಾಲದೆ.

೧೦. ಒಲಿದವರನಗಲಿದರೆ ಸರ್ವಾಂಗ ಬೇವುದವ್ವಾ.

೧೧. ಕಾಮಂಗಂಜಿ ಚಂದ್ರಮನ ಮರೆಹೋಗಲು ರಾಹುಕೊಂಡಂತಾದಳವ್ವೆ.

೧೨. ಜಾತಸ್ಯ ಮರಣಂ ಆವಂಗೆಯೂ ತಪ್ಪದು.

೧೩. ತುಪ್ಪುಳದಿಕ್ಕಿದ ಹಂಸೆಯಂತಾದೆನವ್ವಾ.

೧೪. ತೊತ್ತಿನ ಮುನಿಸು ಸಲುವುದೆ?

೧೫. ದಿಬ್ಬವ ತುಡುಕಿದರೆ ಕೈ ಬೇವುದಲ್ಲದೆ ಮೈ ಬೇವುದೆ?

೧೬. ದೂರದಲ್ಲಿದ್ದವರ ನೆನೆವನಲ್ಲದೆ ಸಮೀಪದಲ್ಲಿದ್ದವರನಾರೂ ನೆನೆವರಿಲ್ಲ.

೧೭. ಬೇಡದ ಮುನ್ನವೆ ಮಾಡಬಲ್ಲಡೆ ಸದ್ಭಕ್ತನೆಂಬೆ.

೧೮. ಮದಾಳೆಯ ನಾಸಿಕದಂತೆ ಸುಳಿದು ಸುಖಬಡುವೆ.

೧೯. ಮಾಗಿಯ ಕೋಗಿಲೆಯಂತೆ ಮೂಗನಾಗಿರ್ದೆನವ್ವಾ.

೨೦. ಮಾಗಿನ ಹುಲ್ಲಿನ ಸೋಕಿನಂತೆ ತನುಪುಳಕಿತಳಾದಳವ್ವೆ.

೨೧. ಮಾತಂಗಿಯ ಹೊಳೆಯಲ್ಲಿ ಉತ್ತಮನ ನೆಳಲು ಸುಳಿದೆಡೆ ರೂಹು ಹೊಲೆಯನಾಗಬಲ್ಲುದೆ?

೨೨. ಮುನಿಸ ಮುನಿದಡೆ ಶ್ರೀಗಂಧದ ಮುರುಡಿನ ಹಾಂಗಿರಬೇಕವ್ವಾ.

೨೩. ಮೋಡಂಬೊಕ್ಕ ಚಂದ್ರಮನಂತಿರ್ದಳವ್ವೆ.

೨೪. ಹಮ್ಮಿನ ಕಳೆಯ ಮುಳಕದಲ್ಲಿ ತಾರಕಿ ತಳಿತಂತೆ.

೨೫. ಹೆಣಗುವಲ್ಲಿ ಮೈಯಲ್ಲಿ ಕೈಯಾಗಿ ಹೆಣಗಬೇಕವ್ವಾ.

ಈ ತೆರನಾಗಿ ಗಜೇಶ ಮಸಣಯ್ಯನ ವಚನಗಳಲ್ಲಿ ಈ ಎಲ್ಲ ಕಾವ್ಯಾಂಶಗಳನ್ನು ನಾವು ಕಾಣುತ್ತೇವೆ.

ಗಜೇಶ ಮಸಣಯ್ಯ ಸಂಗೀತ ಶಾಸ್ತ್ರಜ್ಞ :

ಅವನ ವಚನಗಳು ಗೇಯತೆಯನ್ನು ಹೊಂದಿವೆ. ಅಂದರೆ ಅವನ ವಚನಗಳು ಭಾವಗೀತೆಯ ದಾಟಿಯಲ್ಲಿ ಹಾಡಲು ಬರುತ್ತವೆ. ಸಂಗೀತಶಾಸ್ತ್ರದಲ್ಲಿಯೂ ಪ್ರವೀಣ ಎನ್ನುವ ಮಾತಿಗೆ ಈ ಕೆಳಗಿನ ವಚನಗಳು ಉದಾಹರಣೆಯಾಗಿವೆ.

ದೇಶಾಖಿಯಲ್ಲದ ರಾಗ, ಉಪ್ಪಿಲ್ಲದ ಊಟ
ಸಪ್ಪೆ ಕಾಣಿರೋ ಅಯ್ಯಾ, ಮಿಕ್ಕಿನ ರಾಗ.
ಶಿವನಲ್ಲದ ದೈವಫಲವಿಲ್ಲ ಕಾಣಿರೋ ಅಯ್ಯಾ.
ಮಿಕ್ಕಿನ ತುಂಬುರ ನಾರದರು ಶಿವನ ಕೇಳಿಸುವ ರಾಗ,
ಮಹಾಲಿಂಗ ಗಜೇಶ್ವರ ನಚ್ಚಿನ ರಾಗ.

ದೇಶಾಕ್ಷಿರಾಗವೆಂದರೆ ಗಜೇಶ ಮಸಣಯ್ಯನಿಗೆ ಪಂಚಪ್ರಾಣ. ಅದು ಅವನಿಗೆ ಅಚ್ಚುಮೆಚ್ಚಿನ ರಾಗವಾಗಿತ್ತೆಂದು ತೋರುತ್ತದೆ. ಶಿವನ ಒಲವನ್ನು, ಬಲವನ್ನು ಗಳಿಸಲು ಇದೊಂದು ಸಹಜ, ಸುಲಭದ ದಾರಿಯಾಗಿತ್ತು. "ಕುಂಬಾರ ಗುಂಡಯ್ಯ ಕುಣಿಕುಣಿದು ದೇವರನ್ನು ಸಾಕ್ಷಾತ್ಕಾರ ಮಾಡಿಕೊಂಡಂತೆ, ಗಜೇಶ ಮಸಣಯ್ಯ ಹಾಡಿ ಹಾಡಿ ಶಿವನ ಕರುಣೆಗೆ ಪಾತ್ರನಾಗಿದ್ದ"[೫]. ಹನ್ನೆರಡನೆಯ ಶತಮಾನದಲ್ಲಿ ಸಾಹಿತ್ಯದೊಡನೆ ಸಂಗೀತವು ಸಂಗಮವಾಗಿತ್ತು ಎಂಬ ವಿಚಾರವು ಇಲ್ಲಿ ಗಮನಿಸಬೇಕು. ಅಂತೆಯೇ ಗಜೇಶ ಮಸಣಯ್ಯನ ವಚನಗಳನ್ನು ರಾಗ, ತಾಳ, ಲಯದೊಡನೆ ಸಂಗೀತಗಾರರು ಹಾಡಿ ನಲಿಯಬಹುದು. ಆತನ ವಚನಗಳನ್ನು ನಾವು ಪ್ರಸಾರ ಮಾಡಬಹುದು. ಇಂದು ಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ, ಪ್ರಭುದೇವರ ವಚನಗಳನ್ನು ಜನಪ್ರಿಯಗೊಳಿಸಿದಂತೆ ಅಷ್ಟೇ ಉನ್ನತ ಭಾವಗಳುಳ್ಳ ಗಜೇಶ ಮಸಣಯ್ಯ ನಂತಹ ವಚನಕಾರರ ವಚನಗಳನ್ನು ರಾಗ, ತಾಳ ಕೂಡಿಸಿ ಹಾಡಿದರೆ ಕೇಳುಗರಿಗೂ ಹೊಸ ಅಭಿರುಚಿ, ಆಸಕ್ತಿ ಮೂಡುವ ಅವಕಾಶವಿದೆ.

ಒಟ್ಟಿನಲ್ಲಿ ಗಜೇಶ ಮಸಣಯ್ಯನ ವಚನಗಳನ್ನು ನಾವು ರಾಗ, ತಾಳ, ಭಾವಗಳಿಂದ ಹಾಡಿದರೆ ಅವು ಜನಪ್ರಿಯವಾಗುವುದು ಖಂಡಿತ.

ಕೋಗಿಲೆಗಳು ಹುಳುವಟ್ಟೆ ಹೋದ ಬನದಂತೆ ಆದೆ ನೋಡವ್ವಾ
ರಾಮರಾಡಿದ ಹೊಳಲಿನಂತೆ ಆದೆ ನೋಡವ್ವಾ

---

೫. ಗಜೇಶ ಮಸಣಯ್ಯ : ಎಸ್. ಎಸ್. ಭೂಸರಡ್ಡಿ : ಪುಟ ಸಂಖ್ಯೆ : ೪೭

ಜವ್ವನೆಗಳು ಬಳಲ್ದ ಸ್ತ್ರೀಯರ ಮುಖಕಾಂತಿಯಂತೆ ಆದೆ ನೋಡವ್ವಾ
ಪರಿಮಳವಿಲ್ಲದ ಪುಷ್ಪದಂತೆ ಆದೆ ನೋಡವ್ವಾ
ಚಂದ್ರಮನಿಲ್ಲದ ನಕ್ಷತ್ರಗಳಂತೆ ಆದೆ ನೋಡವ್ವಾ
ಮಹಾಲಿಂಗ ಗಜೇಶ್ವರನನಗಲುವದರಿಂದ
ಸಾವುದು ಸುಖ ನೋಡವ್ವಾ.

ಅಲ್ಲಮ ಪ್ರಭುವಿನ 'ನಾದಬಿಂದು ಕಲಾತೀತ' ಎಂಬ ಮಾತಿನಂತೆ ಈ ವಚನಗಳು ನಾದಮಯವಾಗಿವೆ.

ಅಧ್ಯಾಯ - ೫

ಕನ್ನಡ ಸಾಹಿತ್ಯದಲ್ಲಿ ಗಜೇಶ ಮಸಣಯ್ಯ

ಅಧ್ಯಾಯ - ೫

ಕನ್ನಡ ಸಾಹಿತ್ಯದಲ್ಲಿ ಗಜೇಶ ಮಸಣಯ್ಯ

ಕನ್ನಡ ಸಾಹಿತ್ಯದಲ್ಲಿ ೧೨ ನೇ ಶತಮಾನ ಒಂದು ಅವಿಸ್ಮರಣೀಯ ಯುಗವಾಗಿದೆ. ಒಂದೇ ತತ್ವ, ಒಂದೇ ಸಿದ್ಧಾಂತ, ಒಂದೇ ಜೀವನ ವಿಧಾನ, ಒಂದೇ ರೀತಿಯ ಚಿಂತನೆ ಮಾಡಲು ಸಾವಿರಾರು ಜನರು ಒಂದೆಡೆ ಸೇರಿದ್ದು ಇತಿಹಾಸದಲ್ಲಿ ಅಪರೂಪ. ಈ ಕಾಲದಲ್ಲಿ ಬಸವಣ್ಣನ ನೇತೃತ್ವದಲ್ಲಿ ಕಲ್ಯಾಣದಲ್ಲಿ ನಡೆದ ಚಟುವಟಿಕೆಗಳು ಸುತ್ತಲಿನ ಜನಜೀವನದ ಮೇಲೆ ಅಪಾರ ಪ್ರಭಾವವನ್ನು ಬೀರಿದವು. ಈ ಪ್ರಭಾವ ನೂರಾರು ಮೈಲುಗಳವರೆಗೆ ಹಬ್ಬಿದ್ದು ಕಂಡು ಬರುತ್ತದೆ. ಇಂತಹ ಪ್ರಭಾವಕ್ಕೆ ಒಳಗಾದವರು ಸೊಲ್ಲಾಪುರದ ಸಿದ್ಧರಾಮ, ಗುಡ್ಡಾಪುರದ ಧಾನಮ್ಮ, ಪುಳಜೆಯ ಅಮುಗಿದೇವಯ್ಯ ಹಾಗೂ ಕರಜಗಿಯ ಗಜೇಶ ಮಸಣಯ್ಯ ದಂಪತಿಗಳು ಪ್ರಮುಖರಾಗಿದ್ದಾರೆ.

"ವಚನ ಸಾಹಿತ್ಯದಲ್ಲಿ ಸತಿಪತಿ ಭಾವದ ವಚನಗಳಿಗೆ ಕೊರತೆಯಿಲ್ಲ. ಆದರೆ ಅವೆಲ್ಲ ಒಂದೇ ಎತ್ತರದಲ್ಲಿಲ್ಲ. ಈ ವಚನ ವಿಧಾನದಲ್ಲಿ ಎತ್ತರವನ್ನು ಉಳಿಸಕೊಳ್ಳುವುದು ಸುಲಭವಲ್ಲ! ಅದನ್ನುಳಿಸಿಕೊಂಡವರು ಅಲ್ಲೊಬ್ಬ ಅಕ್ಕಮಹಾದೇವಿ, ಇಲ್ಲೊಬ್ಬ ಬಸವಣ್ಣ, ಅಲ್ಲೊಬ್ಬ ಉರಿಲಿಂಗದೇವ, ಇಲ್ಲೊಬ್ಬ ಗಜೇಶ ಮಸಣಯ್ಯ ಹೀಗೆ ಹಲವರು ಮಾತ್ರ. ಮೇಲೆ ವಿವರಿಸಿದ ಶರಣಸತಿಯ ಚಿತ್ರ ಗಜೇಶ ಮಸಣಯ್ಯನದು. ಭಾವ ಭಾಷೆಗಳ ಸೌಂದರ್ಯದಲ್ಲಿ ಅಕ್ಕಮಹಾದೇವಿಯ ವಚನಗಳಿಗೆ ಹೊಯಿಕೈಯಾಗಿ ನಿಲ್ಲಬಲ್ಲ ವಚನಗಳನ್ನು ನೀಡಿರುವ ಮಹಾತ್ಮನೀತ. ಇವರಿಬ್ಬರೂ ಕನ್ನಡ ನುಡಿಯ ಮಾಧುರ್ಯಕ್ಕೆ ಕಳಸವಿಟ್ಟವರು. ಅಕ್ಕಮಹಾದೇವಿ ಎಷ್ಟೆಂದರೂ ಹೆಣ್ಣಾಗಿ ಹುಟ್ಟಿದಾಕೆ. ಸತಿಪತಿ ಭಾವ ಆಕೆಗೆ ಸಹಜವಾದುದು. ಆದರೆ ಗಂಡಾಗಿ ಹುಟ್ಟಿದ ಗಜೇಶ ಮಸಣಯ್ಯ ಈ ಭಾವದಲ್ಲಿ ಆಕೆಯ ಎತ್ತರಕ್ಕೆ ಏರಿರುವುದು ಕೌತುಕಗಳಲ್ಲಿ ಕೌತುಕ"[೧]. ಎಂದು ಸಾಹಿತಿಗಳು ಹೇಳುತ್ತಾರೆ. ಇದೇ ರೀತಿಯಾಗಿ ಗಜೇಶ ಮಸಣಯ್ಯನ ಹೆಸರು ಕನ್ನಡ ಕಾವ್ಯ ಪ್ರಪಂಚದಲ್ಲಿ ಪ್ರಖ್ಯಾತವಾಗಿದೆ. ಮೊದಲನೆಯದಾಗಿ –

೧) ಭೀಮಕವಿಯ ಬಸವಪುರಾಣದಲ್ಲಿ (ಸು. ೧೪೦೦)

"ವಸುಧೆಯೊಳು ಮತ್ತಂ ಗಜೇಶ್ವರ
ಮಸಣಿದೇವಂ ತನ್ನೊಳಗೆ ಮರೆ

೧. ಶರಣ ಚರಿತಾಮೃತ : ಸಿದ್ದಯ್ಯ ಪುರಾಣಿಕ.

ದಸಮ ಶಿವಲಿಂಗಾರ್ಚನಾಮಗ್ನದೊಳಿರಲು ನಡುವೆ
ಮುಸುಕಿ ಬರಲಿಂಜಿದ್ದೆಸೆಗೆ ಖಂ
ಡಿಸಿದವ್ವೊಲು ನೀಂ ಪರಿದೆಯಲ್ಲಾ
ಉಸುರಲೇನ್ನಡಗಡಗು ಕೊಡು ಕೊಡು ಪಥವನೆನುತ

(ಕಾಂ. ೪. ಸಂ. ೩೨. ಪು. ೩೪)

ಬಸವರಾಜನ ಬೊಕ್ಕಸದವನೋ
ದಸರಿದೇವನ ಕೂರ್ಪಸುತನೊ
ಮುಸುಟಿ ಚೌಡಯ್ಯನ ಸುಪುತ್ರನೊ ಸುರಗಿ ಚೌದಯ್ಯನ
ಶಿಶುವ್ವೊ ಕರಿಕಾಲನ ಕರಾಳುವ್ವೊ
ಮಸಣಿದೇವನ ಕಿಂಕರನೋ ಬಾ
ಣಸಿಗನೋ ಚೇರಮನ ಕಕ್ಕಯ್ಯಗಳ ಸಿಂಬಕನೊ

(ಕಾಂ. ೬. ಸಂ. ೪೭. ಪು. ೩೪)

ಭೂಲೋಕದಲ್ಲಿ ಗಜೇಶ ಮಸಣಯ್ಯ ಪವಾಡ ಪುರುಷ. ಏಕೆಂದರೆ ಅವನು ಲಿಂಗ ಪೂಜೆಗೆ ಕುಳಿತಾಗ ಜೋರಾಗಿ ಮಳೆ ಬಂದು, ಹೊಳೆ ತುಂಬಿ ಹರಿಯಲು ಆಗ ಮಸಣಯ್ಯ ಲಿಂಗಪೂಜೆಯಲ್ಲಿ ಮಗ್ನನಾದವ ಕದಲಲಿಲ್ಲ. ಕೊನೆಗೆ ಆ ಹೊಳೆಯೆ ಸರಿದು ಮುಂದೆ ಸಾಗಿತಂತೆ ಎಂದು ತಿಳಿದು ಬರುತ್ತದೆ.

೨) ಪದ್ಮಣಾಂಕ (೧೪೦೦) ಪದ್ಮರಾಜಪುರಾಣ :

"ತೊರೆಯ ನಡುವೀಶ ಪೂಜಾಲೀಲೆಯಿಂದಿರ್ದು
ತೊರೆ ಬಂದೊಡರಿಯದೇಳ್ ಪಗಲಭವ ಸುಖದ ನಿ
ಬೈರಗಿ ಗಜೇಶ ಮಸಣಯ್ಯನಿರನೇ" (೪–೫೪)

ತೊರೆಯ ಮಧ್ಯದಲ್ಲಿಯೆ ಕುಳಿತು ಪೂಜೆ ಮಾಡಿದವ ಎಂದು ಪದ್ಮಣಾಂಕ ಹೇಳುತ್ತಾನೆ.

೩) ಕಕ್ಕೇರಿಯಾರಾಧ್ಯ ನಂಜುಂಡನ ಬೈರವೇಶ್ವರ ಕಾವ್ಯ (ಸು. ೧೫೦೦) :

"ಊರದ ಗಜೇಶನೊಳ್
ತರಿಸಂದು ಮಸಣಯ್ಯ
ನರಿಯದಂತಿರ್ದಪೆರ್ಮಳೆಯೊ (೩–೧೬೯)

೪)   **ಗುಬ್ಬಿ ಮಲ್ಲಣಾರ್ಯನ ವೀರಶೈವಾಮೃತಮಹಾಪುರಾಣ** : (ಸು. ೧೫೩೦)

ನೀರ ಸೊಡರಂ ಬೆಳಗಿ ಲಿಂಗದೊಳಗಂ ಪೊಕ್ಕ
ನಾರಿ ಸೋಹಳೆಯ ಪುರ ವೀರಸೋಮವ್ವೆಯಾ
ನೀರೆರಳ್ಕಾಡೆಯೊಳಿರ್ದಾ ತೊರೆಯೇಳು ದಿವಸಂ
ಗಜೇಶ್ವರ ಮಸಣನೂ
ಓರಂತೆ ಲಿಂಗಪೂಜೆಯೊಳಿರ್ದನ್ನೈ ಕೇಳು
ಮಾರಹುಲಿಗೆರೆಯರಸನುಳಯುಮೇಶ್ವರಚಿಕ್ಕ
ಣಾರಾಧ್ಯನೊಲಿಸದಂತನುಣಂಗಳನುಳಿದವಂ ಮರುಳ ಸಿದ್ಧೇಶ್ವರಂ.

(೮–೪–೩೪)

ಲಿಂಗ ಪೂಜೆಯಲ್ಲಿರುವ ಮಸಣಯ್ಯನಿಗೆ ಬೇರೆ ಯಾವುದರ ಪರಿವೆ ಇಲ್ಲ. ಮಳೆ ಬಂದು, ಹೊಳೆ ಬಂದು, ಅದು ನಿಂತು ಹೋದರೂ ಕೂಡ ಆತ ಪೂಜೆಯಲ್ಲಿ ಮಗ್ನನಾಗಿದ್ದ ಎಂದು ತಿಳಿದುಬರುತ್ತದೆ.

ಕರುಳ ಕೇತಯ್ಯನಕ್ಷಿಗಳಲ್ಲಿ ಕರುಳುಗಳು
ಸುರಿವಂತೆ ನೋಡುತನಿಮಿಷ ಕೇಶಿದೇವಂ
ತುರು ಗಜೇಶ್ವರ ಮಸಣಭೃಂಗಿಯಲ್ಲಮರ ತೆರೆದಿಂ ದೀಕ್ಷಿಸುತ ಪೂಜೆಯ

ವಿರಚಿಸುವ ಕಾಲದೊಳಗಾ ಸೂರಸಾನಾಂಬೆ
ಯರು ವೇಮನಾರಾಧ್ಯ ಬೆಲೆದೇವಿಯರು ಮುಖ್ಯ
ಶರಣರೆಯಿತರೆ ಕಾಣುತೆದ್ದು ಲಿಂಗದ ಕೈಯ ಬಿದಿರ್ದು ಕೈಮುಗಿದನಾರ್ಯಂ

(೮–೫–೧೯)

ಶರಧಿ ಮಧ್ಯದ ಬಸದಿಯೊಳಿಪ್ಪ ಬೌದ್ಧನಂ
ಪರಭವಿಸೆ ನೀರಮೇಲೆಯ್ದುತ್ತ ನೆನದರಾ
ಶರಣ ಮುಸುಟಿಯ ಚೌಡಯಂ ಗಜೇಶ ಮಸಣ...

(೮–೬–೩೪)

೫) **ಅಸಂಖ್ಯಾತ ರಗಳೆ? (ಸು. ೧೬೦೦) :**

ತೊರ ಬಂದಡಿರಿಯದೆ ಇರುಳು ಶಿವಗೋಷ್ಠಿಯೊಳು
ಮರದಿರ್ದ ಗಜೇಶ ಮಸಣಯ್ಯನಾಳಾನಯ್ಯ. (೫೧)

೬) **ಶಾಂತವಿರಚಿತ ಅಭವಸ್ತೋತ್ರದ ಕಂದ! (ಸು. ೧೬೦೦) :**

ನಿಜಲಿಂಗ ಚಿಕ್ಕದೇವಂ
ಅಜಗಣ್ಣನು ಸಿದ್ಧರಾಮ ಪ್ರಭುದೇವಣ್ಣಂ
ಗಜೆಯೇಶ ಮಸಣಿದೇವಂ
ಭುಜಗಾಭರಣನೆ ಪರಾಕು ಚಿತ್ತೈಸಭವಾ. (೮೭)

೭) **ಸಿದ್ಧನಂಜೇಶನ ಗುರುರಾಜಚಾರಿತ್ರ – (ಸು. ೧೬೫೦) :**

ಕರವೀರ ಪುಷ್ಪವೈದ್ಯರೊಳು ಶಿವನಂ ಭಜಿಸು
ತಿರಲೊಂದು ಕುಂದೆ ಕಣ್ಣಂ ಕಿತ್ತು ಪೂಜಿಸಲಿ
ಹರಮೆಚ್ಚಿ ಮೆರೆದರೆಂಟಾ ಮಲ್ಲಿನಾಥಂಗೆ ತೊರೆಯ ನಡುಕುರುವದಲ್ಲಿ.
ವರಲಿಂಗಪೂಜೆಯ ಮಾಡುತಿರೆ ಹೊಳೆ ಮೇಲು
ವರಿಯೆ ನೀರೊಳಗೇಳುದಿನವಿದ್ದು ತೊರೆದೆಗೆಯೆ
ಹರುಷದಿಂ ಬಂದಾ ಗಜೇಶ ಮಸಣಯ್ಯನೆಂದೊರೆದನಾ ಗುರುರಾಯನು
(೮–೮೬)

೮) **ಶಾಂತಲಿಂಗದೇಶಿಕನ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ :**

ಕರಜಗಿಯೆಂಬ ಪುರದಲ್ಲಿ ಗಜೇಶ ಮಸಣಯ್ಯನು ಜಂಗಮ ದಾಸೋಹ ಮಾಡುತ್ತ ಲಿಂಗಪೂಜೆಯ ಮಾಡುವಲ್ಲಿ ಇತರೇತರವ ಮರದು, ಹುಲಿ, ಕರಡಿ, ಸರ್ಪ, ಶರಭ, ಸರಥಿ, ವೃಶ್ಚಿಕಾನೆ, ಭೂತ, ವೇತಾಳ, ಬಿರುಗಾಳಿ, ಅನಲ, ಸಿಡಿಲು, ಮಿಂಚು, ಮಳೆ, ಹೊಳೆ ಇವರ ಭಯ ಬಂದಡೆಯು ಲಿಂಗ ಪೂಜೆಯ ಬಿಟ್ಟು ತೊಲಗಬಾರದೆಂಬ ಭಾಷೆಯಿಂದ ಪೂಜೆಗೆಯ್ಯತ್ತಿರಲು, ಕೆಲಂಬಂ ಕಾಲ ನಡೆಯಲು ಆಗ ಒಂದು ದಿನ ಮಸಣಯ್ಯನು ಗುರುದರುಶನಕ್ಕೆ ಹೋಗುವಾಗ ದಾರಿಯಲ್ಲೊಂದು ನದಿಯಂ ಕಂಡು ಶಿವಪೂಜೆಗೆ ಮೂರ್ತನ ಮಾಡಿ ಶಿವಧ್ಯಾನದಲ್ಲಿರುವಾಗ ಆ ಸಮಯದಲ್ಲಿ ಇವರ ಲಿಂಗನಿಷ್ಠೆಯ ನೋಡಬೇಕೆಂದು ಶಿವನು ಗಗನವಿಭ್ಭಾಗವಷ್ಟಂತೆ ಮಳೆಯ ಕರೆಯಲು, ಮೂರು ಜಾವ ಹಿಂಗದೆ ಶಿವಪೂಜೆಯಲ್ಲಿರುವಾಗ ಮಳೆಯ ಉದಕದಿಂದ ನೆನೆದು ಛಳಿಯೊಂದು ಶಿವಪೂಜೆಯ ಬಿಡದೆ ಸುರಿವ ಮಳೆಯಲ್ಲಿ ಶಿವಪೂಜೆಯಂ ಹಿಂಗದೆ ಮಾಡುತ್ತಿರುವಾಗ

ಮಳೆಹೊಳದು ಪರ್ನದಿಯುರವಣಿಸಿ ಬರುವಾಗ ಗಜೇಶ ಮಸಣಯ್ಯನು, ಲಿಂಗನಿಷ್ಠೆಯಲ್ಲಿ ನಿಬ್ಬೆರಗಾಗಿಪ್ಪುದಂ ಕಂಡು, ನದಿಯ ಮೇಲೆ ಮುಸುಂಕಿ ಬರಲಮ್ಮದೆ. ತಾಳಮರದುದ್ದದಲ್ಲಿ ಇಬ್ಭೋಳಾಗಿ ಅವರಿಂದ ಸ್ಥಾನವಂ ಬಿಟ್ಟು ಹಿಂದೆ ಅಗಲಿ ಮುಂದೆ ಕೂಡಿ ಪರಿವುದಂ ಕಂಡು, ಧರೆಯ ಜನರೆಲ್ಲರು ಹರಪೂಜೆಯ ಮಾಡುವ ಭಕ್ತರಿಗೆ ಸರಧಿ ಅಂಜುವುದೆಂದು ಭಕ್ತಾಳಿ ಕೊಂಡಾಡುತ್ತಿರಲು, ಲಿಂಗಪೂಜೆಯ ಮಾಡುವಲ್ಲಿ ಮಳೆಹೊಯ್ದು ಮಳೆಬಂದುದು ಕನಸಿನಂತಾಗಲು ಆಗ ಗಜೇಶ ಮಸಣಯ್ಯನು ಮಹಾಲಿಂಗ ಗಜೇಶ್ವರನೆಂಬ ತಮ್ಮ ಪ್ರಾಣಲಿಂಗದಲ್ಲಿನುತಿಸಿದನು, ಇತ್ತೆಂದು. "ಅಗಲಿದ ನಲ್ಲನ ಕನಸಿನಲ್ಲಿ ಕಂಡು ಸುಳಿಯದಿರವ್ವಾ; ಕಂಡ ಕನಸು ದಿಟವಾದರೆ ಅವ ನಮ್ಮನಲ್ಲ; ಮನಸುಳ್ಳವರು ನೀವು ಪುಣ್ಯಗೆಯ್ದಿರವ್ವಾ; ಮಹಾಲಿಂಗ ಗಜೇಶ್ವರನು ಅಗಲಿದರೆ ನಿದ್ರೆ ನಮಗಿಲ್ಲ; ಕನಸಿನ್ನೆಲಿಂದ ಬಹುದವ್ವಾ" ಬಂದು ಲಿಂಗವನುತಿಸುವ ವಿಕಳಾವಸ್ಥೆಯಲ್ಲಿ ನಿರ್ವಯಲಾದರು. (ಪು. ೧೧೪-೧೧೫)

೯) ಉತ್ತರ ದೇಶದ ಬಸಲಿಂಗನ ಬಸವೇಶ್ವರ ಪುರಾಣದ ಕಥಾಸಾರ :

ಗಜೇಶ ಮಸಣಯ್ಯಗಳು ಗುರುದರುಶನಕ್ಕೆ ಹೋಗುವಾಗ ದಾರಿಯಲ್ಲಿ ಹೊಳೆಯೊಳಗೆ ಶಿವಪೂಜೆಯ ಮಾಡುವಾಗ ಧ್ಯಾನದಲ್ಲಿ ಪರವಶವಾಗಿರಲು, ಆಗ ಹೊಳೆ ಬಂದು ಅವರಿಗೆ ಎರಡು ಭಾಗವಾಗಿ ಹರಿಯಿತು. (ಪು. ೧೫೧)

೧೦) ರಸಋಷಿ ಮುಪ್ಪಿನ ಷಡಕ್ಷರಿಗಳು ತಮ್ಮ ಒಂದು ಪದ್ಯದಲ್ಲಿ ಮುಕ್ತಕಂಠದಿಂದ ಹೀಗೆ ಹಾಡಿಕೊಂಡಿದ್ದಾರೆ.

"ಬಸವೇಶ್ವರನು ಚನ್ನ
ಬಸವೇಶ್ವರನು ಕರುಣಿ
ದಸರಯ್ಯ ಮೋಳಿಗೆಯ ಮಾರಯ್ಯನ
ಮಸಣಯ್ಯಗಳ ಮನೆಯ
ಕಸವ ಗುಡಿಸುವ ಮಹಾ
ಹೊಸ ಸೇವಕರು ನಮಗೆ ಸರಿಯದಾರು"

"ತೆಲಗು ಕನ್ನಡ ಮೊದಲಾದ ಕನ್ನಡದ ಪ್ರಮುಖ ಕಾವ್ಯಗಳು 'ಗಜೇಶ ಮಸಣಯ್ಯ' ಶ್ರೇಷ್ಠ ಶಿವಶರಣನೆಂದು ಸಾರಿ ಸಾರಿ ಹೇಳುತ್ತವೆ. ನಮ್ಮೆಲ್ಲರ ಪುಣ್ಯವಿಶೇಷದಿಂದ ಕಾಲಕಾಲಕ್ಕೆ ಬೆಳಗಿ ಹೋದ ಕವಿಗಳು ಇಷ್ಟಾದರೂ ಶರಣಸಂಸ್ಕೃತಿಯ ಉಜ್ವಲ ಪರಂಪರೆಯನ್ನು ಕಾಯ್ದುಕೊಂಡು ಬಂದಿದ್ದಾರೆ. ಗಜೇಶ ಮಸಣಯ್ಯನ ಹೆಸರನ್ನು ಸುವರ್ಣಾಕ್ಷರಗಳಿಂದ ಉಲ್ಲೇಖಿಸಿದ್ದಾರೆ. ಇತ್ತೀಚಿನ ಸಂಶೋಧನೆಯಿಂದ ಪ್ರಸಿದ್ಧಿಗೆ ಬಂದ ಶಿಲಾಹಾರರ ಒಂದು ಶಾಸನದಿಂದ ಮಸಣಯ್ಯನ ಇಷ್ಟದೇವತೆಯಾದ 'ಗಜೇಶ್ವರ'ನ

ದೇವಾಲಯ ಕರಜಗಿಯಲ್ಲಿಯೇ ಇದೆ. ಪ್ರತಿವರುಷ 'ಮಹಾನವಮಿ' ಸಂದರ್ಭದಲ್ಲಿ ಜಾತ್ರೆಯು ನೇರವೇರುತ್ತದೆ”[೨].

ಗಜೇಶ ಮಸಣಯ್ಯನ ಕುರಿತು ವಿದ್ವಾಂಸರ ಅಭಿಪ್ರಾಯಗಳು –

೧) ಡಾ. ಫ. ಗು. ಹಳಕಟ್ಟಿ (ಶಿವಶರಣರ ಸಂಕೀರ್ಣ ವಚನಗಳು – ೧) :

ಗಜೇಶ ಮಸಣಯ್ಯನ ವಚನಗಳು ಲಿಂಗಾಂಗ ಸಾಮರಸ್ಯ ಬೋಧಕವಾಗಿರುತ್ತವೆ. ಅವನು ತನ್ನ ಸಾಮರಸ್ಯ ಸ್ಥಿತಿಯನ್ನು ಸತಿಪತಿ ಭಾವದ ವಚನಗಳ ಮೂಲಕ ಹೇಳಿರುತ್ತಾನೆ. ಇವು ಶಿವಶರಣರ ವಚನಗಳಲ್ಲಿ ಬಹು ಸುಂದರವಾದವುಗಳು, ಇವುಗಳು ಮಹಾಶಿವಶರಣೆಯಾದ ಮಹಾದೇವಿಯಕ್ಕನ ವಚನಗಳಿಗೆ ಸರಿಸಮಾನವಾಗಿವೆ. ಇವು ಆಕೆಯ ವಚನಗಳಷ್ಟೇ ಸುಂದರವೂ, ಲಲಿತವೂ, ಮಧುರವೂ ಆಗಿರುತ್ತವೆ. ಅವುಗಳಲ್ಲಿ ಕಾವ್ಯ ಚಮತ್ಕೃತಿ ಕಂಡುಬರುತ್ತದೆ. ಮತ್ತು ಸಾಮರಸ್ಯದ ನಿಜಸ್ಥಿತಿಯನ್ನು ಅರುಹುತ್ತ ಬಹು ಅರ್ಥಬೋಧಕವಾಗಿವೆ. ಪ್ರತಿಯೊಂದು ವಚನದಲ್ಲಿ ಕನ್ನಡ ನುಡಿಯ ಸೊಬಗು ಹೊರಸೂಸುತ್ತದೆ.

೨) ಸಿದ್ಧಯ್ಯ ಪುರಾಣಿಕ – (ಶರಣ ಚರಿತಾಮೃತ – ಪು.೪೪೧. – ಪು.೧೧೨)

“ಭಾವ ಭಾಷೆಗಳ ಸೌಂದರ್ಯದಲ್ಲಿ ಅಕ್ಕಮಹಾದೇವಿಯ ವಚನಗಳಿಗೆ ಹೊಯಿಕೈಯಾಗಿ ನಿಲ್ಲಬಲ್ಲ ವಚನಗಳನ್ನು ನೀಡಿರುವ ಮಹಾತ್ಮನೀತ. ಇವರಿಬ್ಬರೂ ಕನ್ನಡ ನುಡಿಯ ಮಾಧುರ್ಯಕ್ಕೆ ಕಳಸವಿಟ್ಟವರು; ಶರಣಸತಿ–ಲಿಂಗಪತಿ ಭಾವದ ಸೀಮೆಯನ್ನು ವಿಸ್ತರಿಸಿದರು. ಅಕ್ಕಮಹಾದೇವಿ ಎಷ್ಟೆಂದರೂ ಹೆಣ್ಣಾಗಿ ಹುಟ್ಟಿದಾಕೆ. ಸತಿ–ಪತಿ ಭಾವಆಕೆಗೆ ಸಹಜವಾದುದು. ಆದರೆ ಗಂಡಾಗಿ ಹುಟ್ಟಿದ ಗಜೇಶ ಮಸಣಯ್ಯ ಈ ಭಾವದಲ್ಲಿ ಆಕೆಯ ಎತ್ತರಕ್ಕೆ ಏರಿರುವುದು ಕೌತುಕಗಳಲ್ಲಿ ಕೌತುಕ... ಅವನ ಇನ್ನಷ್ಟು ವಚನಗಳು ಉಪಲಬ್ಧವಾದರೆ ಭಾವಗೀತಗಳ ಯಾವ ಕವಿಗೂ ಅವನು ಸರಿಸಮನಾಗಿ ನಿಲ್ಲುತ್ತಾನೆ”.

೩) ಎಂ. ಚಿದಾನಂದ ಮೂರ್ತಿ (ವಚನ ಸಾಹಿತ್ಯ ; ಪು.೧೧೨–೧೧೩) :

“ಸರಳ ಭಾಷೆ ಪರಿಚಿತ ಪ್ರತಿಮೆಗಳು ಅತಿಯಲ್ಲದ ಶೃಂಗಾರ. ಕಡಿಮೆ ಮಾತುಗಳು ಪ್ರಾಮಾಣಿಕವಾದ ಸಂವೇದನೆ ಇವುಗಳಿಂದಾಗಿ ಉರಲಿಂಗದೇವ ಮತ್ತು ಗಜೇಶ ಮಸಣಯ್ಯರು ವಚನ ವಾಙ್ಮಯ ಗಗನದ ಬಣ್ಣದ ಯಮಳ ನಕ್ಷತ್ರಗಳಾಗಿ ಕಂಗೊಳಿಸುತ್ತಿದ್ದಾರೆ”.

---

೨. ಗಜೇಶ ಮಸಣಯ್ಯ : ಎಸ್. ಎಸ್. ಭೂಸರಡ್ಡಿ. ಪುಟ ಸಂಖ್ಯೆ : ೧೨

[illegible]

೪) **ಡಾ. ಟಿ. ವಿ. ವೆಂಕಟಚಲಶಾಸ್ತ್ರೀ (ಬಸವಪುರಷ ; ಪು.೪೫. ಮೈ.ವಿ.ವಿ) :**

"ಈತನ ವಚನಗಳು ಏರಿಲಿಂಗದೇವನ ವಚನಗಳಂತೆ ಸರಳ ಸಹಜವಾಗಿರದೆ, ಆರ್ದ್ರವಾದ ಭಕ್ತಿಯ ಆವೇಗದಿಂದ ಪ್ರೇರಿತವಾದಂಥ ಆರ್ತತೆಯಿಂದ ಕೂಡಿರದೆ ಮಿಗಿಲಾಗಿ ಸಾಂಕೇತಿಕತೆಯಿಂದಲೂ ಬೆಡಗಿನ ವಚನಗಳ ದಾಟಿಯಿಂದಲೂ ಕೂಡಿ ಕ್ಲಿಷ್ಟವೂ ಪ್ರೌಢವೂ ಆದ ರಚನೆಗಳಾಗಿ ಪರಿಣಮಿಸಿವೆ. ಸಹಜತೆ ಸರಳತೆಗಳು ಅಲ್ಲಲ್ಲಿ ವಿರಳವಾಗಿ ಮಿಂಚಿದ್ದರೂ ಸಾಮಾನ್ಯವಾಗಿ ಪಂಡಿತ ಬುದ್ಧಿಯ ಕೈವಾಡವೇ ಚುರುಕಾಗಿ ಸಾಗಿ ಸಂಗಮವಾದ ಅರ್ಥವ್ಯಕ್ತಿ ಗುಣವು ಹೊಳೆಯದೆ ಹೋಗಿ ಒಟ್ಟನಲ್ಲಿ ತೋರಬೇಕಾದ ಪ್ರಮಾಣದಲ್ಲಿ ಕಾವ್ಯಗುಣ ಎದ್ದು ತೋರಿಲ್ಲವೆನ್ನಬಹುದು".

೫) **ಕೆ. ಜಿ. ನಾರಾಯಣ ಪ್ರಸಾದ – (ಕನ್ನಡ ಸಾಹಿತ್ಯ ಚರಿತ್ರೆ : ಸಂ. ೪–೧) :**

"ಭಾಷೆಯ ಬಳಕೆಯಲ್ಲಿ ಸರಳತೆ ಹಿತಮಿತಗುಣ, ಔಚಿತ್ಯಪ್ರಜ್ಞೆ ಇವು ಈತನ ವಚನಗಳ ಮುಖ್ಯ ಲಕ್ಷಣಗಳಾಗಿವೆ".

೬) **ಎಮ್. ಎಸ್. ಸುಂಕಾಪುರ – (ಸಕಲಪುರಾತನದ ಬೆಡಗಿನ ವಚನಗಳು) :**

"ವಚನಕಾರರು ಎಂದೊಡನೆ ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಸಿದ್ಧರಾಮ ಮುಂತಾದ ದೊಡ್ಡ ವಚನಕಾರರ ನೆನಪಾಗುತ್ತದೆ. ಅವರೊಡನೆ ಮಿಕ್ಕ ವಚನಕಾರರು ಇದ್ದಾರೆ ಎನ್ನುವದು ಸಹ ಎಷ್ಟೋ ಸಲ ಹೊಳೆಯುವುದೇ ಇಲ್ಲ. ಬಹಳ ವಚನಗಳನ್ನು ಹೇಳಿದವರೇ ವಚನಕಾರರು ಎಂದು ಭಾವಿಸುವುದು ಸರಿಯಲ್ಲ. ಸಾಹಿತ್ಯದ ಸತ್ವ ಗಾತ್ರವನ್ನು ಅವಲಂಬಿಸಿ ನಿಲ್ಲದು. ಆದ್ದರಿಂದ ವಚನಕಾರರನ್ನು ಅವರು ಬರೆದ ವಚನಗಳ ಸಂಖ್ಯೆಯ ಮೊತ್ತವನ್ನು ನೋಡಿ ಬೆಲೆ ಕಟ್ಟುವುದಕ್ಕಿಂತಲೂ ಅವುಗಳಲ್ಲಿರುವ ಸತ್ವವನ್ನು ಗಮನಿಸಿ ತೀರ್ಮಾನಿಸುವುದೇ ಸರಿ. ಗಜೇಶ ಮಸಣಯ್ಯ ಸ್ವಲ್ಪೇ ವಚನಗಳನ್ನು ಬರೆದಿದ್ದರೂ ಅವನ ಬರವಣಿಗೆಯಲ್ಲಿರುವ ಸತ್ವವನ್ನು ಪರೀಕ್ಷಿಸಿದಾಗ ಅವನು ಮಿಕ್ಕ ಹಿರಿಯ ವಚನಕಾರರಿಗೆ ಯಾವ ದೃಷ್ಟಿಯಿಂದ ನೋಡಿದರೂ ಕಡಿಮೆ ಇಲ್ಲವೆನಿಸದಿರದು".

೭) **ಎಸ್. ಎಸ್. ಭೂಸರಡ್ಡಿ – (ಗಜೇಶ ಮಸಣಯ್ಯ) :**

"ಶರಣಸತಿ ಲಿಂಗಪತಿ" ತತ್ವದ ಸಮರ್ಪಕ ಸಮರ್ಥ ವಿಶ್ಲೇಷಣೆಯನ್ನು ಇವನ ವಚನಗಳಲ್ಲಿ ನೋಡಬಹುದು. ಅವು ಮುತ್ತಿನ ಹಾರವಾಗಿವೆ; ಮಾಣಿಕ್ಯದ ದೀಪ್ತಿಯಾಗಿವೆ. ಸ್ಫಟಿಕದ ಸಲಾಕೆಯಾಗಿವೆ. ಉದ್ರೇಕವಾಗಲಿ, ದೂಷಣೆಯಾಗಲಿ, ವಿಡಂಬನೆಯಾಗಲಿ ಎಲ್ಲಿಯೂ ಕಾಣುವಂತಿಲ್ಲ. ಪ್ರತಿಯೊಬ್ಬ ಮಾನವನು ಅವಶ್ಯವಾಗಿ ಅವಲೋಕಿಸಬೇಕಾದ ಮಹತ್ವದ ಅಂಶಗಳಿಂದ ಕೂಡಿವೆ. ವಿಶ್ವಸಂಸ್ಕೃತಿಯ ಲಕ್ಷಣಗಳಿವೆ. ಲಿಂಗತತ್ವದ ವಿಚಾರಗಳನ್ನು ಅತ್ಯಂತ ಮನೋಹರವಾಗಿ ಮನೋಜ್ಞವಾಗಿ ತಿಳಿಸುವಲ್ಲಿ, ಬೋಧಿಸುವಲ್ಲಿ ಸಂಪೂರ್ಣ ಯಶಸ್ವಿಯಾಗಿವೆ. ಅಕ್ಕಮಹಾದೇವಿ, ಸತ್ಯಕ್ಕ, ಅಕ್ಕ ನಾಗಮ್ಮ, ಬಸವಣ್ಣ,

ಉರಿಲಿಂಗದೇವ, ಘನಲಿಂಗದೇವ, ಷಣ್ಮುಖ ಶಿವಯೋಗಿ, ಮುಪ್ಪಿನ ಷಡಕ್ಷರಿ ಮೊದಲಾದ ಮಹಾನುಭಾವರು ಲಿಂಗತತ್ವದ ವಿಚಾರಗಳನ್ನು ಸೂತ್ರಪ್ರಾಯವಾಗಿ, ಅರ್ಥಗರ್ಭಿತವಾಗಿ ಅನುಭವಪೂರ್ಣವಾಗಿ ತಮ್ಮ ವಚನಗಳ ಮುಖಾಂತರ ತತ್ವಪದಗಳ ಮುಖಾಂತರ ಎತ್ತಿ ಹಿಡಿದಿದ್ದಾರೆ. ಇದೇ ಮಾರ್ಗದಲ್ಲಿ ಇನ್ನೊಂದು ಮೈಲುಗಲ್ಲಾಗಿ ನಿಂತವ ಗಜೇಶ ಮಸಣಯ್ಯ ಲಿಂಗತತ್ವ ಅವನ ಮೈಮನಗಳಲ್ಲಿ ತುಂಬಿಕೊಂಡಿದೆ. ಅಪಾರ ಅನುಭವದ ಅಮೃತಕುಂಡವಾಗಿದ್ದಾನೆ. ಅವನ ವಚನಗಳಲ್ಲಿ ಮೃದುಮಧುರ ಭಾವಗಳು, ತಾತ್ವಿಕ ವಿಚಾರಗಳು ದಳದಳವಾಗಿ ಅರಳಿವೆ. ಭಕ್ತಭಾವುಕರ ಮನವನ್ನು ತಟ್ಟನೆ ಸೆಳೆಯುತ್ತವೆ".

ಈ ಮೇಲಿನ ಎಲ್ಲ ವಿದ್ವಾಂಸರ ವಿಚಾರಗಳನ್ನು ನೋಡಿದಾಗ ಗಜೇಶ ಮಸಣಯ್ಯ ಒಬ್ಬ ಸಾಮಾನ್ಯ ವಚನಕಾರನಲ್ಲ. ಅವನೊಬ್ಬ ಶ್ರೇಷ್ಠ ವಚನಕಾರನೆಂದು ತಿಳಿದುಬರುತ್ತದೆ. ಅವನ ವಚನಗಳು 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂಬ ತತ್ವವನ್ನು ತಿಳಿಸಿ ಕೊಡುತ್ತವೆ.

ಅಧ್ಯಾಯ – ೬

ಸಮಾರೋಪ

ಅಧ್ಯಾಯ – ೬

ಸಮಾರೋಪ

ಕನ್ನಡ ಸಾಹಿತ್ಯದಲ್ಲಿ ಹನ್ನೆರಡನೆಯ ಶತಮಾನ ಒಂದು ಅವಿಸ್ಮರಣೀಯ ಯುಗವಾಗಿದೆ. ಒಂದೇ ತತ್ವ, ಒಂದೇ ಸಿದ್ಧಾಂತ, ಒಂದೇ ಜೀವನ ವಿಧಾನ, ಒಂದೇ ರೀತಿಯ ಚಿಂತನೆ ಮಾಡಲು ಸಾವಿರಾಜು ಜನರು ಒಂದೆಡೆ ಸೇರಿದ್ದು ಅಪರೂಪ. ಈ ಕಾಲದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಕಲ್ಯಾಣದಲ್ಲಿ ನಡೆದ ಚಟುವಟಿಕೆಗಳು ಸುತ್ತಮುತ್ತಲಿನ ಜನ ಜೀವನದ ಮೇಲೆ ಬಹಳ ಪ್ರಭಾವವನ್ನು ಬೀರಿದವು. ಈ ಪ್ರಭಾವ ನೂರಾರು ಮೈಲುಗಳವರೆಗೆ ಹಬ್ಬಿದ್ದು ಕಂಡುಬರುತ್ತದೆ. ಇಂತಹ ಪ್ರಭಾವಕ್ಕೆ ಒಳಗಾದವರು ಸೊಲ್ಲಾಪುರದ ಸಿದ್ಧರಾಮ, ಗುಡ್ಡಾಪುರದ ದಾನಮ್ಮ, ಅಮುಗಿದೇವಯ್ಯ ಹಾಗೂ ಗಜೇಶ ಮಸಣಯ್ಯ ದಂಪತಿಗಳು ಪ್ರಮುಖರಾಗಿದ್ದಾರೆ.

ಗಜೇಶ ಮಸಣಯ್ಯ ಕರಜಗಿಯಲ್ಲಿ ಹುಟ್ಟಿ ಬೆಳೆದ ಒಬ್ಬ ಉದಾತ್ತ ಶರಣನಾಗಿದ್ದ. ಅವನ ಸತಿ ಮಸಣಮ್ಮ ಅವಳು ಪತಿಗೆ ತಕ್ಕ ಸತಿಯಾಗಿದ್ದಳು. ಸತಿ–ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ ಎಂಬಂತೆ ಇಬ್ಬರೂ ಕೂಡಿ ಈ ಭಾಗದ ಜನಜೀವನವನ್ನು ಸುಧಾರಿಸುವ ಆಧ್ಯಾತ್ಮದ ಸಾಧನೆಯನ್ನು ಮಾಡಿದ್ದಾರೆ.

ಗಜೇಶ ಮಸಣಯ್ಯನನ್ನು ಕುರಿತು ಈ ಪ್ರಬಂಧದಲ್ಲಿ ಇಲ್ಲಿಯವರೆಗೆ ವಿವೇಚಿಸಿದ ಅಧ್ಯಾಯಗಳನ್ನು ಹೀಗೆ ಅವಲೋಕಿಸಬಹುದು. ಒಟ್ಟು ಆರು ಅಧ್ಯಾಯಗಳಿವೆ. ಒಂದರಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯ ಬಗ್ಗೆ ಬರೆಯಲಾಗಿದೆ.

ಸೊನ್ನಲಿಗೆಯ ಪರಿಸರದ ಶಿವಶರಣರು :

ಸೊನ್ನಲಿಗೆಯ ಪರಸರದಲ್ಲಿಯ ಶರಣರಲ್ಲಿ ಪ್ರಮುಖನಾದವನು ಸಿದ್ಧರಾಮ. ಅವನಿಂದಲೇ ಸೊಲ್ಲಾಪುರ ಒಂದು ಪುಣ್ಯಕ್ಷೇತ್ರವಾಗಿ ಬೆಳೆಯಿತು. ದಕ್ಷಿಣಕಾಶಿ, ಭೂಕೈಲಾಸ ಎಂದು ಅದನ್ನು ಶಾಸನಗಳಲ್ಲಿ ಬಣ್ಣಿಸಲಾಗಿದೆ. ಸಿದ್ಧರಾಮನಿಗೆ ರುದ್ರಾವತಾರಿ ಎಂದು ಕರೆಯುತ್ತಾರೆ. ಅವನು ಶ್ರೇಷ್ಠ ವಚನಕಾರನಾಗಿ ರಚಿಸಿದ ೧೯೭೬ ವಚನಗಳು ಮಾತ್ರ ದೊರೆತಿವೆ. ಅವನ ವಚನಗಳ ಅಂಕಿತ

[illegible]

[illegible]

[illegible]

[illegible]

[illegible]

[illegible]

'ಕಪಿಲಸಿದ್ಧಮಲ್ಲಿಕಾರ್ಜುನ'. ಸಿದ್ಧರಾಮನು ಶಿವಯೋಗದ ತುತ್ತತುದಿಯನ್ನೇರಿದ ಶಿವಯೋಗ ಸಾರ್ವಭೌಮ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಕರಜಗಿಯ ಗಜೇಶ ಮಸಣಯ್ಯ ಹಾಗೂ ಮಸಣಮ್ಮ ಇವರು ಕೂಡಾ ತಮ್ಮ ಕಾಯಕ ದಾಸೋಹದಿಂದ ಜನರ ಮನಸ್ಸನ್ನು ಗೆದ್ದು ಶಿವಶರಣರೆನಿಸಿಕೊಂಡರು. ಕರಜಗಿಯಿಂದ ಮುನವಳ್ಳಿಗೆ ಹೋಗಿ ಅಲ್ಲಿಯ ಭಕ್ತರ ಮನಸ್ಸನ್ನು ಗೆದ್ದುಕೊಂಡು, ಕಲ್ಯಾಣಕ್ಕೆ ಹೋಗಿ ಬಸವಾದಿ ಶರಣರ ಸಾನಿಧ್ಯದಲ್ಲಿ ಶರಣ ಕ್ರಾಂತಿಯಲ್ಲಿ ಭಾಗವಹಿಸಿದವರಾಗಿದ್ದಾರೆ.

ಮುಳಜೆಯ ಅಮುಗಿದೇವಯ್ಯ ಹಾಗೂ ರಾಯಮ್ಮ ಸೊನ್ನಲಿಗೆಯಲ್ಲಿ ನೇಯ್ಗೆ ಕಾಯಕ ಮಾಡುತ್ತ ಜಂಗಮ ದಾಸೋಹ ನಡೆಸುತ್ತಿದ್ದರು. ಅಮುಗಿ ದೇವಯ್ಯ ಸುಮಾರು ಮೂವತ್ತು ವಚನಗಳನ್ನು ರಚಿಸಿದ್ದಾನೆ. ಅವನ ವಚನಗಳ ಅಂಕಿತ 'ಸಿದ್ಧಸೋಮನಾಥ'. ರಾಯಮ್ಮಳು ಕೂಡಾ ವಚನಗಳನ್ನು ರಚಿಸಿದ್ದಾಳೆ. ಅವುಗಳಲ್ಲಿ ದೊರೆತದ್ದು ಒಂದು ನೂರಾ ಹದಿನಾರು ಮಾತ್ರ. ಅವಳ ವಚನಗಳ ಅಂಕಿತ 'ಅಮುಗೇಶ್ವರ'.

ಹಾವಿನಾಳ ಕಲ್ಲಯ್ಯನು ಕೂಡಾ ಒಬ್ಬ ಶಿವಶರಣ. ಆತನಿಗೆ ಕಲ್ಲಯ್ಯನ್ನು ಪೂಜಿಸುವದೆಂದರೆ ಅಪಾರ ಸಂತೋಷವಾಗುತ್ತಿತ್ತು. ಆತ ಧ್ಯಾನ ಮಾಡಿ ಕಲ್ಲಯ್ಯನ ಭಕ್ತಿಗೆ ಪಾತ್ರನಾಗಿದ್ದನು. ಕಲ್ಲಯ್ಯನ ಇನ್ನೊಂದು ಪವಾಡವೆಂದರೆ ಆತ ನಾಯಿಯಿಂದ ವೇದವನ್ನು ಓದಿಸಿದನು. ಅಂದರೆ ಜ್ಞಾನೇಶ್ವರನು ಕೋಣನಿಂದ ವೇದವನ್ನು ಓದಿಸಿದ್ದು ನಿಜವಾದರೆ, ಇವನದು ಸತ್ಯ ಎಂದಾಗುತ್ತದೆ.

ವಚನ ಸಾಹಿತ್ಯದ ದ್ವಿತೀಯ ಘಟ್ಟದಲ್ಲಿ ಬರುವ ದೇಶಿಕೇಂದ್ರ ಸಂಗನಬಸವಯ್ಯನವರು ಕರಜಗಿ ಗ್ರಾಮದವರು. ಅವರು ವಿರಕ್ತಮಠದ ಮಠಾಧೀಶರಾಗಿದ್ದರು. ಅವರ ಹೆಸರಿನಲ್ಲಿ ಒಟ್ಟು ೧೨೪೨ ವಚನಗಳು ದೊರೆತಿವೆ. 'ಗುರುನಿರಂಜನ ಚನ್ನಬಸವಲಿಂಗ' ಎಂಬುದು ಅವರ ವಚನಗಳ ಅಂಕಿತವಾಗಿದೆ.

ಗಜೇಶ ಮಸಣಯ್ಯನ ಚಾರಿತ್ರಿಕ ಸಂಗತಿಗಳು :

ಗಜೇಶ ಮಸಣಯ್ಯ ಸುಮಾರು ೧೧೬೦ ರಲ್ಲಿ ಆಗಿ ಹೋದ ಶಿವಶರಣ. ಅವನ ಚರಿತ್ರೆ ಪ್ರಮುಖವಾಗಿ ವೀರಶೈವ ಪುರಾಣಗಳಲ್ಲಿ ಪ್ರಸಿದ್ಧವಾಗಿದೆ. ಪಾಲ್ಕುರಿಕೆಯ ಸೋಮನಾಥನ ಗಣಸಹಸ್ರನಾಮ, ಪಂಡಿತಾರಾಧ್ಯ ಚರಿತ್ರೆ ಮುಂತಾದ ಗ್ರಂಥಗಳಲ್ಲಿ ಅವನ ಚರಿತ್ರೆ ತಿಳಿದು ಬರುತ್ತದೆ.

ಕರಜಗಿ ಎಂಬ ಊರಿನಲ್ಲಿ ಗಜೇಶ ಮಸಣಯ್ಯನೆಂಬ ಒಬ್ಬ ಶಿವಶರಣನಿದ್ದನು. ಲಿಂಗಪೂಜೆ, ಜಂಗಮದಾಸೋಹ ಅವನ ನಿತ್ಯದ ಕಾಯಕವಾಗಿತ್ತು. ಏಕಚಿತ್ತದಿಂದ ಲಿಂಗಪೂಜೆಯಲ್ಲಿ ನಿರತನಾದಾಗ ಅವನಿಗೆ ಬಾಹ್ಯ ಜಗತ್ತಿನ ಅರಿವೆ ಇರುತ್ತಿರಲಿಲ್ಲ. ಅವನು ಪೂಜೆ ಮಾಡುತ್ತಿರುವಾಗ ಪಶುಪಕ್ಷಿಗಳು ಕೂಡಾ ಮೌನ ತಾಳುತ್ತವೆ. ಗಾಳಿ, ಮಳೆ, ಚಳಿ, ಬಿಸಿಲು, ಸಿಡಿಲು, ಮಿಂಚು ಬಂದರೂ ಕೂಡಾ ಆತ ಕದಲದೆ ಪೂಜೆಯಲ್ಲಿ ಮಗ್ನನಿದ್ದು ಪೂಜೆ ಮುಗಿದ ಮೇಲೆ ಏಳುತ್ತಿದ್ದನಂತೆ.

ಮಸಣಯ್ಯನ ವಚನಗಳ ವಿವೇಚನೆ :

ಮಸಣಯ್ಯನ ವಚನಗಳಲ್ಲಿ ವಿಶೇಷವಾಗಿ ಲಿಂಗಾಂಗ ಸಾಮರಸ್ಯ ಕಂಡುಬರುತ್ತದೆ. ಸತಿ–ಪತಿ ಭಾವ ಅಲ್ಲಿಯ ಪ್ರಮುಖ ಲಕ್ಷಣವಾಗಿದೆ. ಅವನ ಪ್ರತಿಭೆ, ಮಧುರಶೈಲಿ, ಮನೋಭಾವಗಳನ್ನು ಗಮನಿಸಿದರೆ ಅವನೊಬ್ಬ ಸಾಮಾನ್ಯ ವಚನಕಾರನಲ್ಲ. ಅವನೊಬ್ಬ ಮೇಲ್ಮಟ್ಟದ ವಚನಕಾರನೆಂದು ತಿಳಿದುಬರುತ್ತದೆ. ಅವನ ವಚನಗಳಲ್ಲಿ ಲಿಂಗಪತಿಗಾಗಿ ಶರಣಸತಿಯ ಹಂಬಲ, ಲಿಂಗಪತಿಯನ್ನು ಒಲಿಸಿಕೊಳ್ಳುವ ರೀತಿ, ಲಿಂಗಪತಿಯೊಡನೆ ಶರಣಸತಿ ಬೆರೆಯುವುದು, ಲಿಂಗಪತಿಯಲ್ಲಿ ಶರಣಸತಿ ಸಮರಸಹೊಂದಿ ಆನಂದಿಸುವುದು, ಲಿಂಗಪತಿಯಲ್ಲಿ ಶರಣಸತಿ ಬೆರೆತು ಬೇರಿಲ್ಲದಂತಾಗುವುದು ಎಂಬ ಅಂಶಗಳು ಕಂಡುಬರುತ್ತವೆ.

ಕನ್ನಡ ಸಾಹಿತ್ಯದಲ್ಲಿ ಗಜೇಶ ಮಸಣಯ್ಯ :

ವಚನ ಸಾಹಿತ್ಯದಲ್ಲಿ ಸತಿಪತಿಭಾವದ ವಚನಗಳು ರಚಿಸಿದವರು ವಿರಳ. ಆದರೆ ಅವರಲ್ಲಿಯ ಒಬ್ಬನಾದ ಗಜೇಶ ಮಸಣಯ್ಯ. ಭೀಮಕವಿಯು ಬಸವ ಪುರಾಣದಲ್ಲಿ ಗಜೇಶ ಮಸಣಯ್ಯನ ಕುರಿತು ಹೀಗೆ ಹೇಳಿದ್ದಾನೆ. ಆತ 'ಪವಾಡ ಪುರುಷ' ಏಕೆಂದರೆ ಅವನು ಲಿಂಗ ಪೂಜೆ ಕುಳಿತಾಗ ಬೇರೆ ಯಾವುದರ ಪರಿವೆ ಇರುವುದಿಲ್ಲ. ಒಮ್ಮೆ ಪೂಜೆಗೆ ಕುಳಿತಾಗ ಗಾಳಿ, ಮಳೆ, ಗುಡುಗು, ಸಿಡಿಲು, ಮಿಂಚು ಎಲ್ಲವು ಏಕಕಾಲಕ್ಕೆ ಬಂದವು. ಆದರೆ ಮಸಣಯ್ಯ ಕದಲಲಿಲ್ಲ.

ಪದ್ಮಣಾಂಕನ ಪದ್ಮರಾಜಪುರಾಣ, ಕಕ್ಕೇರಿಯಾರಾಧ್ಯನಂಜುಂಡನ ಭೈರವೇಶ್ವರ ಕಾವ್ಯ, ಗುಬ್ಬಿ ಮಲ್ಲಣ್ಣನ ವೀರಶೈವಾಮೃತ ಮಹಾಪುರಾಣದಲ್ಲಿ ಹಾಗೂ ಅಸಂಖ್ಯಾತ ರಗಳೆಯಲ್ಲಿ ಗಜೇಶ ಮಸಣಯ್ಯನ ಚರಿತ್ರೆ, ಕಥೆಗಳನ್ನು ಕುರಿತು ಬರೆದಿದ್ದಾರೆ.

ಒಟ್ಟಿನಲ್ಲಿ ಗಜೇಶ ಮಸಣಯ್ಯ ೧೨ ನೇ ಶತಮನಾದಲ್ಲಿ ಆಗಿ ಹೋದ ಶಿವಶರಣ. ಅವನ ಒಟ್ಟು ವಚನಗಳು ದೊರೆತದ್ದು ೭೧. ಅವನ ಪುಣ್ಯಸ್ತ್ರೀಯ ವಚನಗಳು ದೊರೆತದ್ದು ಕೇವಲ ೯ ಮಾತ್ರ.

ಇವರಿಬ್ಬರ ವಚನಗಳು ಅನುಭಾವದ ವಚನಗಳೆಂದು ಹೇಳಿದರೆ ಸಾಕು.

ಅಧ್ಯಯನದ ಹೊಸ ಸಾಧ್ಯತೆಗಳು :

ಪ್ರಸ್ತುತ ಅಧ್ಯಯನವೇ ಸಮಗ್ರ ಅಧ್ಯಯನ ಎನ್ನುವಂತಿಲ್ಲ. ಗಜೇಶ ಮಸಣಯ್ಯ ಹಾಗೂ ಮಸಣಮ್ಮ ಇವರ ಇನ್ನಷ್ಟು ವಚನಗಳು ಒಂದು ವೇಳೆ ದೊರಕಿದರೆ ಮತ್ತೆ ಭಿನ್ನ-ಭಿನ್ನ ನೆಲೆಯಲ್ಲಿ ಅಧ್ಯಯನ ಮಾಡಲು ಸಾಧ್ಯವಿದೆ. ಅಂತಹ ಸಾಧ್ಯತೆಗಳನ್ನು ಮುಂದೆ ಸೂಚಿಸಲಾಗಿದೆ.

ಗಜೇಶ ಮಸಣಯ್ಯನ ವಚನಗಳನ್ನು ಕುರಿತು ಭಾಷಿಕ ಹಿನ್ನಲೆಯಲ್ಲಿ ಅಧ್ಯಯನ, ಇತರ ಅನುಭಾವಿ ವಚನಕಾರರೊಂದಿಗೆ ತೌಲನಿಕ ವಿವೇಚನೆ ಮಾಡಬಹುದು. ಇಲ್ಲಿ ಸೂಚಿಸಿದ ಅಧ್ಯಾಯಗಳು ಮತ್ತಷ್ಟು ಹೊಸ ಚಿಂತನಕ್ಕೆ ದಾರಿ ಮಾಡಿಕೊಡಬಹುದು. ಇಲ್ಲಿನ ಅಧ್ಯಯನ ಅಂತಹ ಮುಂದಿನ ಅಧ್ಯಯನಗಳಿಗೆ ಒಂದು ತೋರು ಬೆರಳು ಮಾತ್ರ.

ಛಾಯಾಚಿತ್ರಗಳು

ಛಾಯಾಚಿತ್ರಗಳು

೧) ಗಜೇಶ ಮಸಣಯ್ಯನ ಶಿಲಾಮೂರ್ತಿ, ಮುನವಳ್ಳಿ

೨) ಮುನವಳ್ಳಿಯ ಬಸವಣ್ಣನ ಕಟ್ಟಡ ಪ್ರಾಕಾರ.

೩) ಕರಜಗಿಯ ಜೋಡಿ ಬಸವಣ್ಣ ವಿಗ್ರಹಗಳು.

೪) ಕರಜಗಿಯ ಸಿದ್ಧಗಜೇಶ್ವರನ ದೇವಾಲಯ.

೫) ಕರಜಗಿಯ ದೇವಾಲಯದ ಅವಶೇಷಗಳು.

೬) ಕರಜಗಿಯಲ್ಲಿರುವ ಶಿವಲಿಂಗ ವಿಗ್ರಹ.

೭) ಕರಜಗಿಯ ಮಹಾಸತಿಕಲ್ಲು

೮) ಮುನವಳ್ಳಿಯ ದೇವಾಲಯದ ಸಂಕೀರ್ಣ.





2


8







૫



૬



૭



ವಾಙ್ಮಯ ಸೂಚಿ

ವಾಙ್ಮಯ ಸೂಚಿ

೧) ಆರ್. ಸಿ. ಹಿರೇಮಠ : ಸಕಲ ಪುರಾತನ ವಚನಗಳು (ಸಂ. ೧) ಧಾರವಾಡ ಕ.ವಿ.ವಿ. – ೧೯೭೨.

೨) ಆರ್. ಸಿ. ಹಿರೇಮಠ : ಸಿದ್ಧರಾಮೇಶ್ವರ ವಚನಗಳು ಕ.ವಿ.ವಿ. ಧಾರವಾಡ. – ೧೯೭೨.

೩) ಹಾ. ಮಾ. ನಾಯಕ : ಬಸವ ಪುರುಷ – ೧೯೭೫.

೪) ಹಾ. ಮಾ. ನಾಯಕ : ಕನ್ನಡ ಸಾಹಿತ್ಯ ಚರಿತ್ರೆ – ೧೯೭೭

೫) ಬಸವರಾಜು ಎಲ್. : ದೇವರ ದಾಸಿಮಯ್ಯನ ವಚನಗಳು ೧೯೭೮

೬) ಬಸವರಾಜು ಎಲ್. : ಬಸವಣ್ಣನವರ ವಚನಗಳು – ೧೯೮೮

೭) ಎಸ್. ಎಸ್. ಭೂಸರಡ್ಡಿ : ಗಜೇಶ ಮಸಣಯ್ಯ – ೧೯೮೭

೮) ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು : ಸಮಗ್ರ ವಚನ ಸಂಪುಟ – ೧೯೯೩

೯) ಆರ್. ಎಸ್. ಸ್ವಾಮಿ : ಶರಣ ಗಜೇಶ ಮಸಣಯ್ಯ – ೧೯೯೩

೧೦) ವೀರಣ್ಣ ರಾಜೂರ : ಸಂಕೀರ್ಣ ವಚನ ಸಂಪುಟ ಏಳು ೧೯೯೩

೧೧) ಎ. ಕೆ. ರಾಮೇಶ್ವರ (ಪ್ರ. ಸಂ) : ಶರಣ ಸಂಪದ ೨೦೦೧

೧೨) ಬಿ. ಬಿ. ಪೂಜಾರಿ : ಸೊಲ್ಲಾಪುರದ ಶರಣ ಕ್ಷೇತ್ರಗಳು ೨೦೦೦

೧೩) ಗುರಲಿಂಗಪ್ಪಾ ಧಬಾಲೆ : ಶರಣ ಅಂಬಿಗರ ಚೌಡಯ್ಯ ೧೯೯೯

೧೪) ಗುರಲಿಂಗಪ್ಪಾ ಧಬಾಲೆ : ಶರಣ ಸೊಲ್ಲಾಪುರ. ೨೦೧೦

೧೫) ಗುರಸಿದ್ದಯ್ಯ ಸ್ವಾಮಿ : ದೇಶಿಕೇಂದ್ರ ಸಂಗನ ಬಸವ. ೨೦೧೦

೧೬) ಗುರಸಿದ್ದಯ್ಯ ಸ್ವಾಮಿ : ಮಂಗಳವೇಡೆಯ ಅಂಗಳದಲ್ಲಿ ಚಿಗುರೊಡೆದು ಬೆಳೆದ ವಚನೋಧ್ಯಾನ. ೨೦೧೨.

೧೭) ಗುರಸಿದ್ದಯ್ಯ ಸ್ವಾಮಿ : ಸೊಲ್ಲಾಪುರ ಜಿಲ್ಲೆಯ ಕನ್ನಡ ಸಾಹಿತ್ಯ ಚರಿತ್ರೆ (ಅ. ಪ್ರ)

೧೮) ಗುರಸಿದ್ದಯ್ಯ ಸ್ವಾಮಿ : ಕರಜಿಗೆಯ ವೀರಶೈವ ದೇವಾಲಯಗಳು (ಅ. ಪ್ರ)

೧೯) ಗುರಸಿದ್ದಯ್ಯ ಸ್ವಾಮಿ : ಮಹಾರಾಷ್ಟ್ರದಲ್ಲಿಯ ವೀರಶೈವ ಧರ್ಮ ಒಂದು ಅಧ್ಯಯನ (ಅ. ಪ್ರ)

೨೦) ಸಿದ್ದಯ್ಯ ಪುರಾಣಿಕ : ಶರಣ ಚರಿತಾಮೃತ

೨೧) ರಂ. ಶ್ರೀ. ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ. – ೧೯೫೩

೨೨) ಎಸ್. ವಿದ್ಯಾಶಂಕರ : ಸಂಕೀರ್ಣ ವಚನ ಸಂಪುಟ – ಎರಡು ೧೯೯೩

೨೩) ತಾಳ್ತಜೆ ವಸಂತಕುಮಾರ : ಸಂಶೋಧನ ರಂಗ

೨೪) ಕೆ. ರವೀಂದ್ರನಾಥ : ಅಧ್ಯಯನದ ವಿಧಿವಿಧಾನಗಳು ೨೦೧೧

೨೫) ಬಿ. ಎಂ. ಪುಟ್ಟಯ್ಯ : ಸಂಶೋಧನೆಗೆ ತಾತ್ವಿಕ ಆಯಾಮುಗಳು ೨೦೧೦

೨೬) ಜಿ. ಎನ್. ಉಪಾಧ್ಯ : ವಿಚಾರದ ಬೆಳಕು.